# ನಮ್ಮ ಮಾನಸ

ಸಂಪುಟ : 1 ಡಿಸೆಂಬರ್ 2007 ಸಂಚಿಕೆ : 8



# ನಮ್ಮ ಮಾನಸ

**ಡಿಸೆಂಬರ್ 2007**

ಸಂಪುಟ : 1 ಸಂಚಿಕೆ : 8



*Editor, Printer and Publisher*
***Rajeshwari H.S.,***
*No. 114/5, 9th Cross, 2nd Main*
*Chamarajpet, Bangalore - 560 018.*
*Mobile : 9449345698*



*Printed at*
***ILA Mudrana***
*No. 36, 40 Ft. Road,*
*Raghavanagara*
*New Timberyard Layout*
*Bangalore - 560 026.*
*✆ : 26757159 / 32715773*




ಚಂದಾ ವಿವರ

| | |
|---|---|
| ಬಿಡಿಪ್ರತಿ | 8–00 ರೂ. |
| ವಾರ್ಷಿಕ ಚಂದಾ (ವಿಶೇಷ ಸಂಚಿಕೆಯೊಂದಿಗೆ) | 100–00 ರೂ. |
| ಸಂಸ್ಥೆಗಳಿಗೆ | 150–00 ರೂ. |

## ಪರಿವಿಡಿ




## ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ
ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ
ಚಂದಾ ನವೀಕರಣಕ್ಕೆ ಸಂಪರ್ಕಿಸಿ

**ವೆಂ. ವನಜ**

*2329, 12ನೇ ಮೈನ್, 2ನೇ ಹಂತ, ವಿಜಯನಗರ*
*ಮೈಸೂರು – 570 017*

# ಬೇಲಿಯೇ ಎದ್ದು........

ವಿದೇಶಿ ಬಂಡವಾಳವನ್ನು ಆಕರ್ಷಿಸುವ ಮುಖ್ಯ ಉದ್ದೇಶದಿಂದ ವಿಶೇಷ ಆರ್ಥಿಕವಲಯಗಳನ್ನು ಸೃಷ್ಟಿಸಲು ಭಾರತದ ಬಹುಪಾಲು ರಾಜ್ಯಗಳು ತುದಿಗಾಲಮೇಲೆ ನಿಂತಿವೆ. ವಿದೇಶಿ ಉದ್ದಿಮೆದಾರರಿಗೆ ಸ್ಥಳೀಯ ಸಂಪನ್ಮೂಲಗಳನ್ನು ಅಗ್ಗದ ದರದಲ್ಲಿ ದೀರ್ಘಕಾಲದವರೆಗೆ ಒದಗಿಸಿ ಕೊಡುವುದರ ಮೂಲಕ ಉದ್ದಿಮೆಯನ್ನು ಪ್ರೋತ್ಸಾಹಿಸುವುದು, ತನ್ಮೂಲಕ ಉದ್ಯೋಗ ಸೃಷ್ಟಿಯಾಗುತ್ತದೆಯೆಂಬ ಪೊಳ್ಳು ಭರವಸೆಯನ್ನು ಕೊಡಲಾಗುತ್ತಿದೆ. ಸ್ಥಳೀಯರ ಹಿತಾಸಕ್ತಿಗಳನ್ನು ಬಲಿ ಕೊಟ್ಟಾದರೂ ಇಂತಹ ಯೋಜನೆಗಳನ್ನು ವಿರೋಧದ ನಡುವೆಯೂ ಜಾರಿಗೆ ತರಲು ಪಟ್ಟು ಹಿಡಿಯುತ್ತಿವೆ. ಜಗತ್ತಿನ ಅತ್ಯಂತ ಅಭಿವೃದ್ಧಿ ಹೊಂದಿದ ಜಿ–7 ದೇಶಗಳ ಮಾದರಿ ನಮ್ಮ ದೇಶಕ್ಕೆ ಅನ್ವಯವಾಗುತ್ತದೆಯೆ? ಈಗಾಗಲೇ ಜಾಗತೀಕರಣ ಪರಿಣಾಮದಿಂದಾಗಿ ಸಾರ್ವಜನಿಕ ಉದ್ದಿಮೆಗಳು ನಷ್ಟದಿಂದ ಮುಚ್ಚುತ್ತಿವೆ. ಸಣ್ಣ ಕೈಗಾರಿಕೆಗಳು ಧೂಳೀಪಟವಾಗುತ್ತಿವೆ. ರೈತರು ಅವನತಿಯ ಅಂಚಿನಲ್ಲಿದ್ದಾರೆ. ಪ್ರತಿನಿತ್ಯ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರ ಸ್ಥಿತಿಯು ಆತಂಕಕಾರಿಯಾಗಿದೆ. ಅನ್ನಕ್ಕಾಗಿ ಆಧಾರವಾಗಿರುವ ತಮ್ಮ ಭೂಮಿಯಲ್ಲೇ ರೈತರು ವ್ಯವಸಾಯ ಮಾಡಲಾಗದ ಹಂತಕ್ಕೆ ತಲುಪಿದ್ದಾರೆ. ವಿಶೇಷ ಆರ್ಥಿಕ ವಲಯದ ಸ್ಥಾಪನೆಗೆ ಸರ್ಕಾರಕ್ಕೆ ಬೇಕಾಗಿರುವುದು ಅಗ್ಗದ ದರದಲ್ಲಿ ರೈತರ ಭೂಮಿ ಮಾತ್ರ. ವಿಶೇಷ ಆರ್ಥಿಕ ವಲಯದಲ್ಲಿ ಸ್ಥಾಪಿತವಾಗುವುದು ಉದ್ಯೋಗವನ್ನು ಸೃಷ್ಟಿಸುವ ಕೈಗಾರಿಕೆಗಳಲ್ಲ. ಅಗ್ಗದ ದರದಲ್ಲಿ ಭೂಮಿ, ನೀರು, ವಿದ್ಯುಚ್ಛಕ್ತಿ ಮುಂತಾದವುಗಳನ್ನು ಪಡೆದು ಪಾರ್ಕ್, ರಿಸಾರ್ಟ್, ಇತ್ಯಾದಿಗಳ ಮೂಲಕ ತಾವು ಲಾಭ ಪಡೆಯುವ ಹುನ್ನಾರ ಬಂಡವಾಳಶಾಹಿಗಳದ್ದು.

ಎಡಪಕ್ಷದ ಪ್ರಗತಿಪರ ಸರ್ಕಾರದ ಆಳ್ವಿಕೆ ಇರುವ ಪಶ್ಚಿಮ ಬಂಗಾಳದ ನಂದಿಗ್ರಾಮದಲ್ಲಿ ನಡೆಯುತ್ತಿರುವುದೂ ಇದೇ. ರಾಷ್ಟ್ರೀಯ ಮಟ್ಟದಲ್ಲಿ ಜಾಗತೀಕರಣವನ್ನು ವಿರೋಧಿಸುವ ಎಡಪಕ್ಷದ ನಾಯಕರು ನಂದಿಗ್ರಾಮದಲ್ಲಿ ನಡೆಯುತ್ತಿರುವ ಹೋರಾಟವನ್ನು ಹಿಂಸಾಮಾರ್ಗದ ಮೂಲಕ ಹತ್ತಿಕ್ಕಿರುವುದು, ಹಾಗೂ ಸಮರ್ಥಿಸಿಕೊಳ್ಳುತ್ತಿರುವುದು ಎಡಪಕ್ಷದ ನಾಯಕರ ದ್ವಂದ್ವ ನೀತಿಯನ್ನು ಎತ್ತಿ ತೋರಿಸುತ್ತದೆ. ಎಡಪಕ್ಷದ ಕಾರ್ಯಕರ್ತರು, ಪೊಲೀಸರು ನಂದಿಗ್ರಾಮದ ಕೃಷಿಭೂಮಿಗಾಗಿ ಹೋರಾಡುತ್ತಿರುವ ಅಮಾಯಕ ಮುಗ್ಧ ಜನರ ಮೇಲೆ ಹಿಂಸೆ, ದೌರ್ಜನ್ಯವನ್ನು ನಡೆಸಿದ್ದಾರೆ. ವಿಶೇಷವಾಗಿ ಮಹಿಳೆಯರು ಪಕ್ಷದ ಕಾರ್ಯಕರ್ತರಿಂದ ಅತ್ಯಾಚಾರಕ್ಕೆ ಒಳಗಾಗಿರುವುದು ದಿಗ್ಭ್ರಮೆಯನ್ನು ಹುಟ್ಟಿಸುತ್ತದೆ. ವರದಿಯೊಂದರ ಪ್ರಕಾರ 12 ವರ್ಷದ ಹೆಣ್ಣು ಮಗುವಿನಿಂದ ಹಿಡಿದು, 40 ವರ್ಷದ ಮಹಿಳೆಯರು ಕೂಡ ಅತ್ಯಾಚಾರಕ್ಕೆ ಬಲಿಯಾಗಿದ್ದಾರೆ. ಒಂದು ಚಳವಳಿ ಅಥವಾ ಹೋರಾಟವನ್ನು ಹತ್ತಿಕ್ಕುವ ಬಗ್ಗುಬಡಿಯುವ ಕೊನೆಯ ಅಸ್ತ್ರ ಮಹಿಳೆಯರ ಮೇಲೆ ನಡೆಸುವ ಅತ್ಯಾಚಾರ. 'ಪತ್ರಿಕೆ ಹಾಗೂ ಟಿ.ವಿ. ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿರುವ ಮಹಿಳೆಯರ ಮೇಲೆ ನಡೆದ ದೌರ್ಜನ್ಯ, ಹಿಂಸೆ, ಅತ್ಯಾಚಾರ ಕುರಿತು ವಿಸ್ತಾರವಾದ ವರದಿ, ಚಿತ್ರಗಳು ಸಂಪೂರ್ಣವಾಗಿ ಉತ್ಪ್ರೇಕ್ಷೆಯಿಂದ ಕೂಡಿವೆಯೆ? ಅತ್ಯಾಚಾರ ಮಾಡಿದವರ ವಿರುದ್ಧ ಕೇಸು ದಾಖಲಿಸಿ ಶಿಕ್ಷಿಸಲಾಗುವುದೆಂಬ ನಾಯಕರ ಹೇಳಿಕೆ ಏನನ್ನು ಧ್ವನಿಸುತ್ತದೆ? ಸಮಾಜವಾದದ ಸಿದ್ಧಾಂತದ ಹಿನ್ನಲೆಯಿಂದ ಬಂದ ಕಾರ್ಯಕರ್ತರು ಮಹಿಳೆಯರ ಬಗ್ಗೆ ಹೊಂದಿರುವ ಧೋರಣೆ ಎಂತಹುದು? ಬಲಪಂಥೀಯ ಎಲ್ಲಾ ರಾಜಕೀಯ ಪಕ್ಷಗಳಂತೆ, ರಾಜಕೀಯ ಅಧಿಕಾರಕ್ಕಾಗಿ ಸಮಾಜವಾದ ಸಿದ್ಧಾಂತವೆಂದಾದರೆ ಮಾರ್ಕ್ಸ್‌ವಾದಿ ಪಕ್ಷಗಳಿಗೂ ಇತರ ಪಕ್ಷಗಳಿಗೂ ಇರುವ ವ್ಯತ್ಯಾಸವಾದರೂ ಏನು?

ನಂದಿಗ್ರಾಮದಲ್ಲಿ ಹೋರಾಟ ಮಾಡುತ್ತಿರುವ ಜನರ ಮೇಲೆ ದೌರ್ಜನ್ಯ, ಹಿಂಸೆ ನಡೆದಿಲ್ಲವೆನ್ನುವುದಾದರೆ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವ ಅಗತ್ಯವಾದರೂ ಏನು? ಮುಗ್ಧ ಅಮಾಯಕ ಜನರ ಮೇಲೆ ನಡೆದ ಹಿಂಸೆ, ಹಿಂಸೆ ಯಲ್ಲವೆ? ಅದನ್ನು 2002 ರಲ್ಲಿ ಗುಜರಾತ್‌ನಲ್ಲಿ ನಡೆದ ನರಮೇಧಕ್ಕೆ ಹೋಲಿಸಿ, ಇದು ಕಡಿಮೆಯೆಂದು ಸಮರ್ಥಿಸಿಕೊಳ್ಳುತ್ತಿರುವ ಸಿ.ಪಿ.ಐ ನಾಯಕರ ನಿಲುವು ಹಾಸ್ಯಾಸ್ಪದವಾಗಿದೆ. ನಂದಿಗ್ರಾಮ ಹಾಗೂ ಗುಜರಾತ್ ಎರಡೂ ರಾಜ್ಯಗಳಲ್ಲಿ ನಡೆದ ಹಿಂಸೆ, ದೌರ್ಜನ್ಯ ಪ್ರಜಾಪ್ರಭುತ್ವದ ಮುಖದ ಮೇಲಿನ ಗಾಯವೆಂದು ಹೇಳಿರುವ ರಾಷ್ಟ್ರೀಯ ಮಾನವ ಹಕ್ಕುಗಳ ಅಧ್ಯಕ್ಷರಾದ ಡಾ॥ರಾಜೇಂದ್ರ ಬಾಬು ಅವರು ನೀಡಿರುವ ಹೇಳಿಕೆಯಲ್ಲಿ ಸತ್ಯಾಂಶವಿಲ್ಲವೆ? ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯರು, ಐದ್ವಾದ ಮಹಿಳಾ ಸಮ್ಮೇಳನವೊಂದರಲ್ಲಿ ಮಹಿಳೆಯರು ಅಭಿವೃದ್ಧಿ ಪ್ರಕ್ರಿಯೆಯ ಮುಂದಾಳತ್ವವನ್ನು ವಹಿಸಬೇಕೆಂದು

ಹಾಗೂ ಸ್ವಸಹಾಯ ಸಂಘಗಳ ಮೂಲಕ ಮೈಕ್ರೊ ಉದ್ಯಮವನ್ನು ಸ್ಥಾಪಿಸಬೇಕೆಂದು ಇತ್ತೀಚೆಗೆ ಕರೆನೀಡಿದ್ದಾರೆ, ಜಾಗತೀಕರಣ ಖಾಸಗೀಕರಣ ಹಾಗೂ ಮುಕ್ತ ಮಾರುಕಟ್ಟೆಯ ಗಾಳಿಗೆ ನಂದಿಗ್ರಾಮದ ಬಾಗಿಲನ್ನು ತೆರೆಯುತ್ತಲೇ ವಿದೇಶಿ ಬಂಡವಾಳಶಾಹಿಗಳಿಗೆ ಮಣೆಹಾಕುತ್ತಿರುವುದು ಅವರಲ್ಲಿನ ದ್ವಂದ್ವ ನೀತಿಯನ್ನು ಎತ್ತಿ ತೋರಿಸುತ್ತದೆ.

ಭಾರತೀಯ ಜನತಾ ಪಕ್ಷ ಹಾಗೂ ತೃಣಮೂಲ ಕಾಂಗ್ರೆಸ್ ಎರಡು ಪಕ್ಷಗಳೂ ನಂದಿಗ್ರಾಮ ಜನರ ಹೋರಾಟವನ್ನು ಬಳಸಿಕೊಳ್ಳುತ್ತ ತಮ್ಮ ರಾಜಕೀಯ ಬೇಳೆಯನ್ನು ಬೇಯಿಸಿಕೊಳ್ಳುತ್ತಿವೆ. ಕ್ರಿಯೆಗೆ ಪ್ರತಿಕ್ರಿಯೆ ಇದ್ದೇ ಇರುತ್ತದೆಯೆಂದು ಹೇಳುವುದರ ಮೂಲಕ ಬಿ.ಜೆ.ಪಿ. ನಾಯಕರು 2002ರ ಗುಜರಾತ್ ನರಮೇಧವನ್ನು ನಾಚಿಕೆಯಿಲ್ಲದೆ ಸಮರ್ಥಿಸಿಕೊಳ್ಳುತ್ತಿರುವುದಲ್ಲದೆ ಗುಜರಾತ್ 'ಮಾದರಿ'ಯನ್ನು ಬೇರೆ ರಾಜ್ಯಗಳಲ್ಲೂ ಬಿತ್ತುವ ಪ್ರಯತ್ನ ಮಾಡುತ್ತಿದ್ದಾರೆ.

ಎಡರಂಗದ ಸರ್ಕಾರ ನಂದಿಗ್ರಾಮದ ಘಟನೆಯನ್ನು ಸರಿಯಾಗಿ ನಿರ್ವಹಿಸಿದ್ದರೆ ಪರಿಸ್ಥಿತಿ ಇಷ್ಟು ವಿಕೋಪಕ್ಕೆ ಹೋಗುತ್ತಿರಲಿಲ್ಲ ಎಂಬುದನ್ನು ಒಪ್ಪಿಕೊಳ್ಳಲೇಬೇಕಾಗಿದೆ. ಭಾರತೀಯ ಗ್ರಾಮೀಣ ಪರಿಸ್ಥಿತಿಯ ಹಿನ್ನೆಲೆಯಲ್ಲಿ 'ಅಭಿವೃದ್ಧಿ', ಅಭಿವೃದ್ಧಿ ಮಾದರಿಯನ್ನು ಕುರಿತು ರಾಜಕೀಯ ಪಕ್ಷಗಳು ಜನರ ಹಿತದೃಷ್ಟಿಯಿಂದ ಯೋಚಿಸುವುದು ಅತ್ಯಗತ್ಯವಾಗಿದೆ.

ಯಾವುದೇ ಸಿದ್ಧಾಂತದ ಹಿನ್ನಲೆಯಿರುವ ಸರ್ಕಾರಗಳು ರಾಜಕೀಯ ಅಧಿಕಾರವನ್ನು ಉಪಯೋಗಿಸಿ ಮಹಿಳೆಯರ ಮೇಲೆ ನಡೆಸುವ ದೌರ್ಜನ್ಯವನ್ನು **ಮಾನಸ** ಖಂಡಿಸುತ್ತದೆ.

* * *

ಭರವಸೆಗೆ ಇನ್ನೊಂದು ಹೆಸರು ವೀಣಾಧರಿ. ಸ್ವತಃ ಹೆಚ್.ಐ.ವಿಯಿಂದ ನರಳುತ್ತಿದ್ದರೂ ಸಾವಿರಾರು ಜನರ ಮುಖದಲ್ಲಿ ನಗುವಿನ ಚಿಲುಮೆಯನ್ನು ಉಕ್ಕಿಸಿದ, ಮಾರಣಾಂತಿಕ ರೋಗದಿಂದ ನರಳುತ್ತಿದ್ದ ಹೃದಯಗಳ ಕತ್ತಲೆಯ ಬಾಳಿಗೆ ಹೊಸ ಬದುಕಿನ ದೀಪ ಹಚ್ಚಿದ ವೀಣಾ ಇನ್ನಿಲ್ಲ!.

ಹೆಚ್.ಐ.ವಿಯ ಸುತ್ತ ಹರಡಿದ್ದ ಮೂಢನಂಬಿಕೆಗಳನ್ನು ಹೊಡೆದೋಡಿಸಲು ವೀಣಾ ದೊಡ್ಡ ಸಮರವನ್ನೇ ಸಾರಿದರು. ಹೋರಾಟದ ಮೂಲಕ, ಪತ್ರಿಕೆ ಹಾಗೂ ಟಿ.ವಿ. ಮಾಧ್ಯಮಗಳ ಮೂಲಕ ಹೆಚ್.ಐ.ವಿ. ಕುರಿತು ಜನಜಾಗೃತಿಯನ್ನು ಮೂಡಿಸುವ ಪ್ರಯತ್ನವನ್ನು ಮಾಡಿದರು. ಈ ಸೋಂಕಿಗೆ ಒಳಗಾದ ಮಕ್ಕಳಿಗೆ ಶಾಲೆಯ ಪ್ರವೇಶ ನಿರಾಕರಿಸಿದಾಗ, ಸಂಬಂಧಪಟ್ಟವರಿಗೆ ತಿಳಿವಳಿಕೆ ನೀಡಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಟ್ಟರು. ಹೆಚ್.ಐ.ವಿ. ಕುರಿತು ವೀಣಾ ನೀಡುತ್ತಿದ್ದ ಆಪ್ತ ಸಮಾಲೋಚನೆ ಬಹಳಷ್ಟು ಜನರಿಗೆ ಬದುಕುವ ಭರವಸೆಯನ್ನು ನೀಡಿತು. ಹೆಚ್.ಐ.ವಿ.ಯಿಂದ ನರಳುವ ಜನರಿಗೆ ಬೇಕಾಗಿರುವುದು ಸಮಾಜದ ಪ್ರೀತಿ, ಗೌರವ, ಭರಸೆಯ ಮಾತುಗಳು ಹಾಗೂ ಭರವಸೆಯಿಂದ ಬದುಕುವ ವಾತಾವರಣ. ಇವರನ್ನು ಸಮಾಜದ ಮುಖ್ಯವಾಹಿನಿಯಿಂದ ಬೇರ್ಪಡಿಸುವುದನ್ನು ವೀಣಾ ಅವರು ಕಟುವಾಗಿ ವಿರೋಧಿಸುತ್ತಿದ್ದರು.

ಸಮಾಜಮುಖಿಯಾದ ಅವರ ಬದುಕು ಸದಾ ಹೋರಾಟದ ಹಾದಿಯನ್ನು ಆಯ್ಕೆ ಮಾಡಿಕೊಂಡಿತ್ತು. ಹಲವಾರು ಸಂಘಟನೆಗಳ ಮೂಲಕ ಅಗತ್ಯವಾದ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು ಅವುಗಳ ಈಡೇರಿಕೆಗಾಗಿ ಸತತವಾಗಿ ಪ್ರಯತ್ನಪಟ್ಟರು. ಸಾವಿರಾರು ಕಾಯಿಲೆಗಳಂತೆ ಹೆಚ್.ಐ.ವಿ. ಸಹ ಒಂದು ಸಾಮಾನ್ಯ ಕಾಯಿಲೆಯೆಂಬ ಧೋರಣೆಯನ್ನು ಪ್ರಚುರಪಡಿಸುವುದರ ಮೂಲಕ ಅದರ ಹಿಂದಿರುವ ಭಯಾನಕತೆಯನ್ನು ದೂರಮಾಡಲು ವೀಣಾ ಪ್ರಯತ್ನಿಸಿದರು. ವೀಣಾ ತನ್ನಲ್ಲಿ ಅಡಗಿದ್ದ ಬದುಕುವ ಆಸೆಯ ದೀಪದಿಂದ ಸಾವಿರಾರು ಹೃದಯಗಳ ಆಸೆಯ ದೀಪವನ್ನು ಹಚ್ಚಿದರು. ಅವರು ಬೆಳಗಿಸಿದ ಬದುಕಿನ ಹಾದಿಗೆ ಕೊನೆಯಲ್ಲಿ ಅದು ಒಂದು ಸದಾ ಹೋರಾಟದ ಮಿನುಗುವ ನಕ್ಷತ್ರವಾಗಿ ನಮ್ಮ ಮುಂದಿರುತ್ತದೆ. 'ಮಾನಸ' ವೀಣಾಧರಿಯವರ ಆತ್ಮಕ್ಕೆ, ಶಾಂತಿ ಕೋರುತ್ತದೆ.

* * *

ಪ್ರಗತಿಪರ ಚಿಂತಕ, ಹೋರಾಟಗಾರ ರಾಮದಾಸ್ ಅವರ ಬದುಕಿನಲ್ಲಿ ಚೈತನ್ಯ ತುಂಬಿ ಮುನ್ನಡೆಸಿದವರು ನಿರ್ಮಲಾರಾಮದಾಸ್, ಆಕೆ ಲೇಖಕಿ ಕೂಡಾ. ಅವರ 'ಚಲ್ ಮೇರೆ ಲೂನಾ' ಕೃತಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದರು. ಇತ್ತೀಚೆಗೆ ಶ್ರೀಮತಿ ನಿರ್ಮಲಾರಾಮದಾಸ್ ರವರು ನಿಧನರಾಗಿದ್ದಾರೆ. ಅವರ ನಿಧನಕ್ಕೆ 'ಮಾನಸ' ಸಂತಾಪ ಸೂಚಿಸುತ್ತದೆ. ■



ಕಾಲ ಮತ್ತು ಸಮಾಜದ ಪರಂಪರೆಯಲ್ಲಿ ಹಾಸುಹೊಕ್ಕಾಗಿರುತ್ತದೆ. ಆ ಮೂಲಕೃತಿಗೆ ಇದರಿಂದಾಗಿ ಒಂದು ಪ್ರಭಾಮಂಡಲ ಆವರಿಸಿರುತ್ತದೆ. ಆದ್ದರಿಂದ ಯಾವುದೇ ಇತರ ಯಾಂತ್ರಿಕ ಮಾಧ್ಯಮದಲ್ಲಿ, ಅದರ ಪ್ರತಿ ಕೃತಿಗಳನ್ನು ಮಾಡಿದಾಗ / ಉತ್ಪಾದಿಸಿದಾಗ ಆ ಪ್ರಭೆ ನಾಶ ವಾಗುತ್ತದೆ.' ಆದರೆ ಆಧುನಿಕ ಕಲಾವಿದರ ಚಿಂತನೆ ಭಿನ್ನವಾದುದು. ಯಾಂತ್ರಿಕ ಪ್ರತಿ ತೆಗೆದ ಮಾತು ಬೇರೆ. ಮೂಲವನ್ನು ಕಲಾವಿದ ಪುನರ್‌ಸೃಷ್ಟಿ ಮಾಡಿದಾಗ, ಮೂಲಕೃತಿ ರಚನೆ ಸಂದರ್ಭ ಅರ್ಥವಂತಿಕೆ ಜೊತೆಗೆ ಅದನ್ನು ನೆನಪಿಸುತ್ತಲೆ ಸಮಕಾಲೀನವಾದ ಅನುಕೃತಿ / ಪುನರ್‌ಸೃಷ್ಟಿ ಕಾಲದ ಅರ್ಥಸ್ತರಗಳೂ ಸೇರುತ್ತವೆ. ಇದೂ ವಿಶಿಷ್ಟ ವಾದುದೆ. ಮಾರ್ಸೆಲ್ ಡುಶಾಂಪ್ ಪುರುಷರ ಮೂತ್ರದಾನಿಯನ್ನ ಸಿಕ್ಕವಸ್ತು (ಫೌಂಡ್‌ಆಬ್ಜೆಕ್ಟ್) ಎಂದು–ಅದಕ್ಕೊಂದು ಶೀರ್ಷಿಕೆ 'ಫೌಂಟನ್' ಎಂದಿತ್ತು–ಕಲೆಯಾಗಿ ಪ್ರದರ್ಶಿಸಿದ (1917ರಲ್ಲಿ). ಮುಂದೆ ಶೆರ್ರೀಲೆವೀನ್ ಲೋಹದಿಂದ ಅಂಥದೇ ಎರಡು ಕೃತಿ ರಚಿಸಿ ಒಂದನ್ನು 'ಫೌಂಟನ್ / ಆಫ್ಟರ್ ಮಾರ್ಸೆಲ್ ಡುಶಾಂಪ್', ಇನ್ನೊಂದನ್ನು 'ಬುದ್ಧ' ಎಂದು ಹೆಸರು ನೀಡಿದಳು. ಸಿಂಡಿ ಷೆರ್‌ಮೆನ್ ಕೆಲವು ಸ್ಟಿಲ್‌ಗಳನ್ನು ಪ್ರದರ್ಶಿಸಿದಳು. ಅವು ಕ್ಲಾಸಿಕ್ ಸಿನೆಮಾದ ಸ್ಟಿಲ್‌ಗಳಂತಿದ್ದುವು. ಆದರೆ ವಾಸ್ತವವಾಗಿ ಆಕೆ ಮೂಲದಂತೆ ಹಿನ್ನೆಲೆ, ವೇಷಧರಿಸಿ ತೆಗೆದ ಛಾಯಾಚಿತ್ರಗಳು. ಈ ಬಗೆಯ ಅನುಕರಣ ಕಲೆಯನ್ನು ಕೆಲವರು

# ಎನ್.ಪುಷ್ಪಮಾಲಾ : ಅಭಿನೀತ ಕಲೆ

● ಎಂ.ಎಚ್.ಕೃಷ್ಣಯ್ಯ

ಅಂತರರಾಷ್ಟ್ರೀಯ ಖ್ಯಾತಿಯ ಕಲಾವಿದೆ ಎನ್. ಪುಷ್ಪಮಾಲಾ ಅವರು ಬೆಂಗಳೂರಿನವರು. ಬೆಂಗಳೂರು ವಿಶ್ವವಿದ್ಯಾಲಯದ ಬಿ.ಎ.ಪದವಿ. ಅವರು ಪಾರಂಪರಿಕ ಕುಂಭಕಲೆಯಾದ ಜೇಡಿಮಣ್ಣಿನ ಕಲೆಯಲ್ಲಿ, ಅಪೂರ್ವ ಪ್ರಯೋಗ ನಡೆಸಿದವರು. ಆ ಕಲೆಯನ್ನು, ಅದರ ಸಾಧ್ಯತೆಗಳನ್ನು ತೋರುವಲ್ಲಿ, ವೈವಿಧ್ಯಪೂರ್ಣ ಅಭಿವ್ಯಕ್ತಿಗೆ ಬಳಸಿದರು. ಹಂದಿಯಂತಹ ಪ್ರಾಣಿಗಳಿರಲಿ, ಬಾಲೆಯರ ಮುಗ್ಧತೆ, ತುಂಟನಗೆಗಳ ಮೂಲಕ ಆಶ್ಚರ್ಯಕರ ರೂಪಾಭಿವ್ಯಕ್ತಿ ಸಾಧಿಸಿದರು. ಅದಕ್ಕಾಗಿ ಅವರಿಗೆ 1986ರ ಟ್ರಿನಾಲೆಯಲ್ಲಿ ಸ್ವರ್ಣಪದಕ ಲಭಿಸಿತು. ಮುಂದೆ ಅವರು ಅಭಿವ್ಯಕ್ತಿಯ ಹೊಸಮಾಧ್ಯಮಗಳನ್ನು ಅನ್ವೇಷಿಸಿದರು. ಅಪ್ರೋಪ್ರಿ ಯೇಷನ್ ಆರ್ಟ್ / ಪರ್‌ಫಾರ್ಮಿಂಗ್ ಆರ್ಟ್‌ಗಳಲ್ಲಿ ವಿಶಿಷ್ಟ ಸಾಧನೆ ಅವರದು. ಹಾಗೇ ವಿಡಿಯೊ ಕಲೆಯಲ್ಲಿ ಅಪರೂಪದ ಸೃಷ್ಟಿಗಳು. ಇತ್ತೀಚೆಗೆ ಬೆಂಗಳೂರಿನ ಕೆ.ವಿ.ಸುಬ್ಬಣ್ಣ ರಂಗವೇದಿಕೆಯಲ್ಲಿ, 'ಪ್ಯಾರಿಸ್ ಆಟವ್ಸ್' ವಿಡಿಯೊ ಪ್ರದರ್ಶಿತವಾಯಿತು. ಅವರ ಕಲೆಯ ಅರ್ಥವಂತಿಕೆಯನ್ನು ತಿಳಿಯಲು ಕಲೆಯ ಪ್ರಯೋಗಗಳ ಹಿನ್ನೆಲೆಯ ಸ್ಥೂಲ ಪರಿಚಯವಾದರೂ ಅಗತ್ಯವಾಗುತ್ತದೆ. ಅವರು ಕಲೆಯಲ್ಲಿ ಸಂಜ್ಞೆ, ಬಿಂಬ, ಪಠ್ಯಗಳ ಮೂಲಕ ಅರ್ಥಸ್ತರಗಳನ್ನು ವಿಸ್ತರಿಸುತ್ತಾರೆ.

ಪ್ರಸಿದ್ಧ ಸಾಹಿತ್ಯ ಮತ್ತು ಕಲೆಯ ಚಿಂತಕ ವಿಮರ್ಶಕ ವಾಲ್ಟರ್ ಬೆಂಜಮಿನ್ 1936ರಲ್ಲಿ ಬರೆದ ಲೇಖನವೊಂದರಲ್ಲಿ (ದಿ ವರ್ಕ್ ಆಫ್ ಆರ್ಟ್ ಇನ್ ದಿ ಏಜ್ ಆಫ್ ಮೆಕ್ಯಾನಿಕಲ್ ರಿಪ್ರೊಡಕ್ಷನ್) ಹೀಗೆ ಹೇಳುತ್ತಾನೆ: 'ಒಂದು ಕಲಾಕೃತಿಯ ವಿಶಿಷ್ಟತೆ ಅದು ಸೃಷ್ಟಿಯಾದ

ಸ್ವೀಕರಣ ಕಲೆ (ಅಪ್ರೋಪ್ರಿಯೇಷನ್ ಆರ್ಟ್) ಎಂದರು. ಮುಂದೆ ಪರ್‌ಫಾರ್ಮೆನ್ಸ್ ಆರ್ಟ್ ಅಮೆರಿಕಾ, ಯೂರೋಪ್‌ಗಳಲ್ಲಿ ಪ್ರತಿಭಟನೆಯ ಪ್ರತೀಕವಾಗಿ ಅಲೆಯೆಬ್ಬಿಸಿದುವು. ಇದು ನಾಟಕಾಭಿನಯಕ್ಕಿಂತ ಭಿನ್ನ. ಅಭಿನಯದಲ್ಲಿ ವಸ್ತ್ರಾಲಂಕಾರ, ಹಿನ್ನೆಲೆ ಸೆಟ್, ಪ್ರಾಪ್‌ಗಳು ಇತ್ಯಾದಿ ಗಳಿಂದ ಒಂದು ಸಂದರ್ಭ, ಒಂದು ವಾತಾವರಣ, ಒಂದು ಭಾವ ಸ್ಥಿತಿಯ ಪುನರ್‌ಸೃಷ್ಟಿ. ಇದು ಮೂಲವನ್ನು ನೆನಪಿಸುತ್ತಲೆ ಇಂದಿನ ಸಂದರ್ಭಕ್ಕೂ ಅರ್ಥವತ್ತಾಗುತ್ತದೆ. ಇದನ್ನು ಕಲಾಭಿನಯ, ಅಭಿನೀತ ಕಲೆ ಎನ್ನಬಹುದು, ಪರ್‌ಫಾರ್ಮೆನ್ಸ್ ಅರ್ಥದಲ್ಲಿ. ಭಾರತದಲ್ಲಿ ನೆಹಲ್ ಷಾ (ತಾಯಿ ಮತ್ತು ನಾನು), ರತ್ನಬಾಲಿ ಕಾಂತ್ (ದಿ ಡೆತ್ ಆಫ್ ಡಿಸೈರ್, ದಿ ಎಂಡ್ ಆಫ್ ಸ್ಟ್ರೋಲ್) ಮೊದಲಾದವರು ಪರ್‌ಫಾರ್ಮೆನ್ಸ್ / ಅಭಿನೀತ ಕಲೆ ಪ್ರದರ್ಶಿಸಿದ್ದಾರೆ.

ಕರ್ನಾಟಕದಲ್ಲಿ ಎನ್.ಪುಷ್ಪಮಾಲಾ ಇಂತಹ ಅಪೂರ್ವ ಕಲೆಯ ಪ್ರದರ್ಶನ ನೀಡಿದ್ದಾರೆ. ಅವುಗಳ ಚಿತ್ರಪ್ರದರ್ಶನ ವಿದೇಶಗಳಲ್ಲಿಯೂ ಕುತೂಹಲ, ಮೆಚ್ಚುಗೆ ಗಳಿಸಿದೆ. 1998ರಲ್ಲಿ ಅವರು 'ಫ್ಯಾಂಟಮ್ ಲೇಡಿ ಆರ್ ಕಿಸ್ಮತ್; ಎ ಫೋಟೊ ರೊಮಾನ್ಸ್' ಪ್ರದರ್ಶನವಿತ್ತರು. ಕಳೆದ ಶತಮಾನದ, ಸಿನೆಮಾದ ಪ್ರಾರಂಭದ ದಶಕಗಳ ಕಾಲದ, ನಲವತ್ತರ ದಶಕದಲ್ಲಿ ನಾವು ನೋಡುತ್ತಿದ್ದ ನಾಡಿಯಾ, ಜಾನ್‌ಕವಾಸ್‌ರ ಮೈನವಿರೇಳಿಸುತ್ತಿದ್ದ ಸಾಹಸ ಚಿತ್ರಗಳ ನಾಸ್ಟಾಲ್ಜಿಯಾ ಕಾಡುತ್ತದೆ. ಹಂಟರ್‌ವಾಲಿ, ತೂಫಾನ್ ಮೇಲ್ ಮುಂತಾದ ಸಿನೆಮಾಗಳು. ಅದು ಅವಾಸ್ತವ ಸಿನೆಮಾಗಳ ಕನಸಿನ ಪ್ರಪಂಚವೂ ಇರಬಹುದು. ಕಪ್ಪು ಕಣ್ಣಪಟ್ಟಿ (ನೋಡಲು ರಂಧ್ರಗಳಿರುವ) ಕಟ್ಟಿಕೊಂಡು, ಕೈಯಲ್ಲಿ ಚಾವಟಿ


ಹಿಡಿದ ನಟಿ ನಾಡಿಯಾಳ ವೇಷಭೂಷಣ, ಪ್ರಸಾಧನವನ್ನು ಸ್ವತಃ ಪುಷ್ಪಮಾಲಾ ಧರಿಸಿದ್ದರು. ಅಂದಿನ ಪಾರ್ಸಿ ಸಿನೆಮಾಗಳ ಸೆಟ್‌ಗಳಿಗೆ ಪ್ರೇರಣೆಯಾದ ಮನೆ, ರೆಸ್ಟೋರಾ, ದೀಪ ಕಂಬಗಳ ಬೀದಿ. ಈ ಅಭಿನೀತ ಕಲೆಗೆ ಒಂದು ಸ್ಥೂಲ ಕಥೆಯ ಕಲ್ಪನೆ. ಚಿಕ್ಕಂದಿನಲ್ಲೆ ಬೇರೆಯಾದ ಅವಳಿಗಳ ಕಥೆ. ಸೋದರಿಯರು, ಒಬ್ಬಾಕೆ ರೋಚಕ, ಆಡಂಬರ, ಭೋಗದ ಬದುಕಿನ ವಿಷಮ ವೃತ್ತಕ್ಕೆ ಸಿಕ್ಕಿ ಹಾಗೇ ಬೆಳೆದವಳು. ಖಳರ, ದುಷ್ಟರ ಸಹವಾಸಕ್ಕೆ ಸಿಕ್ಕಿದವಳು. ಒಂದು ಛಾಯಾಚಿತ್ರದಲ್ಲಿ ಆಕೆ ಫ್ಯಾನ್ಸಿಬೀಸಣಿಗೆಯಿಂದ ಬೀಸಿಕೊಳ್ಳುತ್ತಿರುವ ನೋಟ, ಇನ್ನೊಂದರಲ್ಲಿ ಸೋಫಾದ ಮೇಲೆ ಕಾಲುಚಾಚಿ ಒರಗಿ, ಬಲಗೈಯಲ್ಲಿ ಸಿಗರೇಟ್ ಹಿಡಿದು ಎಡಗೈ ಮೇಲೆ ಗಲ್ಲವಿರಿಸಿರುವ ದೃಶ್ಯ. ಇವೆಲ್ಲ ಬದುಕಿನ ಒಂದು ಸಹಜ ಬಗೆಯೇ ಎನಿಸುತ್ತದೆ.

ಇದಕ್ಕೆ ವಿರುದ್ಧ ಶಿಷ್ಟರಕ್ಷಕಿ ಫ್ಯಾಂಟಮ್ ಲೇಡಿಯದು ಇನ್ನೊಬ್ಬ ಸೋದರಿಯ ಚಿತ್ರಗಳು. ಭೂಗತ ದುಷ್ಟರ ಸಂಪರ್ಕ–ಮಾತುಕತೆ ದೃಶ್ಯಗಳು; ಗತಕಾಲದ ಸುಂದರ ವಿನ್ಯಾಸದ ಮೊಗಸಾಲೆಯಿಂದ ಕೆಳಕ್ಕೆ ನೆಗೆಯುವ ದೃಶ್ಯ; ಸುರುಳಿಯಾಕಾರದ ಮೆಟ್ಟಿಲು ಇಳಿಯುವಾಗಿನ ನೋಟ, ಆ ಕಾಲದ ಮೆಟ್ಟಿಲಿನ ಸಾಲಂಕೃತ ಕಂಬಕ್ಕೊರಗಿ ನಿಂತಿರುವ ದೃಶ್ಯ, ಉದ್ದನೆಯ ಕಾರಿಡಾರಿನ ಕಂಬಕ್ಕೊರಗಿ ದುಷ್ಟರಿಂದ ಮರೆಯಾಗಿ ಅವಿತು ನಿಂತಿರುವ ದೃಶ್ಯ, ರೈಲ್ವೆ ಪ್ಲಾಟ್‌ಫಾರಂನಲ್ಲಿ ಒರಗು ಬೆಂಚಿನ ಪಕ್ಕ ಲೈಟ್‌ಕಂಬದ ಬಳಿ ಒಂಟಿಯಾಗಿ ನಿಂತಿರುವ ನೋಟ. ಒಂದು ಬಗೆಯ ಶೂನ್ಯತೆಯೂ ಕಾಡುತ್ತದೆ. ಬಹುಶಃ ಈ ಚಿತ್ರಗಳೇ ಕೃತಕ ಎನಿಸುತ್ತವೆ. ಅವಳಿ ಸೋದರಿಯರ ಎರಡು ಪಾತ್ರವೂ ಪುಷ್ಪಮಾಲಾ ಅವರದೆ. ಗಮನ ಸೆಳೆಯುವುದು ಸೋದರಿಯರ ಭಾವಪೂರ್ಣ ಕಣ್ಣುಗಳು. ಭೋಗಾಸಕ್ತೆಯ ಬಟ್ಟಲು ಕಣ್ಣುಗಳಲ್ಲಿ ಮಾದಕತೆ, ಮೋಹಕತೆ ಇದೆ. ರಕ್ಷಕಿ ಸೋದರಿಯ ಕಣ್ಣುಗಳಲ್ಲಿ (ಕಣ್ಣಪಟ್ಟಿ ಬಿಚ್ಚಿರುವ ದೃಶ್ಯಗಳಲ್ಲಿ) ದೃಢತೆ–ಸಾಹಸದ ನೋಟಕ್ಕಿಂತ ವಿಷಾದ, ಅಂತರ್ಮುಖತೆ, ಏಕಾಕಿತನ ಕಾಡುತ್ತಿರುವ ಭಾವನೆಗಳಿವೆ.

ಕಪ್ಪು–ಬಿಳುಪು ಛಾಯಾ ಚಿತ್ರಗಳ ಅಭಿವ್ಯಕ್ತಿ ಸಾಮರ್ಥ್ಯ (ಬೆಳಕಿನ ಯೋಜನೆ, ಅದ್ಭುತ) ಅಸಾಧಾರಣ. ಛಾಯಾಚಿತ್ರ ಮೀನಾಲ್ ಅಗರವಾಲ್, ದೃಶ್ಯಕಲ್ಪನೆ, ನಿರ್ವಹಣೆ, ಅಭಿನಯ ಎನ್.ಪುಷ್ಪಮಾಲಾ ಅವರದು. ನೆಳಲು ಬೆಳಕು ವಿನ್ಯಾಸ, ಅಭಿರಚನೆಗಳ ಸಂಯೋಜನೆ ಕಲಾತ್ಮಕ. ಒಂದೊಂದು ಚೌಕಟ್ಟೂ ಸ್ವಯಂಪೂರ್ಣ ಕಲಾಕೃತಿ. ವಾತಾವರಣ, ಸೂಚ್ಯಾನುಭವಕ್ಕೆ ಅನುಗುಣವಾದ ಬೆಳಕಿನ ಮಾರ್ದವತೆ, ನಿಖರತೆ, ಬೆಳಕಿನ ಪ್ರತಿಫಲನದಲ್ಲಿ ಎಚ್ಚರಿಕೆಯ ಯೋಜನೆ ಇದೆ. ಛಾಯಾಚಿತ್ರಗಳ ಪರಿಭಾವನೆಯೇ ಒಂದು ಸೌಂದರ್ಯಾನುಭವ. ಇದು ಒಂದು ಸ್ತರ, ಒಂದು ನೆಲೆ ಮಾತ್ರ, ಅದರಾಚೆಗೆ ಮಾನಸಿಕ ತುಯ್ದಾಟಗಳ, ಹಂಬಲದ ಮಜಲು ಇದೆ. ಕಲಾಪ್ರದರ್ಶನದ ಪರಿಚಯ ಪುಸ್ತಿಕೆಯಲ್ಲಿ "ಆಕೆ ಕಣ್ಮರೆಯಾದಳು, ನಾನು ಉಳಿದೆ... ಅಲ್ಲ ಬಹುಶಃ ಅದು ತಿರುಗು ಮುರುಗಾಗಿರಬಹುದು. ಆಕೆ ಬಂಧಿತೆ, ಬದ್ಧಳು ಮತ್ತು ನಾನು ಮುಕ್ತೆ... ಅಲ್ಲ, ಬಹುಶಃ ಇದೂ ತಿರುಗು ಮುರುಗಾಗಿರಬಹುದು" ಎನ್ನುತ್ತಾಳೆ ಫ್ಯಾಂಟಮ್ ಲೇಡಿ. ದುಷ್ಟ ಮತ್ತು ಶಿಷ್ಟ ಶಕ್ತಿಗಳ, ಅಂತಹ ಎರಡು ವ್ಯಕ್ತಿತ್ವಗಳ, ಇಲ್ಲವೆ ಎರಡು ಮೌಲ್ಯಗಳ ಸಂಘರ್ಷ ಪ್ರಾಚೀನ; ಕಾಲಕಾಲಕ್ಕೆ ರೂಪಾಂತರಗೊಂಡು ಆವರ್ತನಗೊಳ್ಳುತ್ತಿರುತ್ತದೆ. ದೌಷ್ಟ್ಯವನ್ನ ಪರಿಹರಿಸಿ ವಿಷವ್ಯೂಹದಿಂದ ರಕ್ಷಿಸುವ ಹಂಬಲವೂ ತಹತಹವೂ ಸಹಜವೆ. ಆದರೆ ಮನುಷ್ಯನ ಬದುಕು ಪುರಾಣಕತೆಯಂತೆ ಕಪ್ಪುಬಿಳುಪಲ್ಲ. ಮನುಷ್ಯ ಸ್ವಭಾವ ಸರಳವೂ ಅಲ್ಲ. ಶಿಷ್ಟ ರಕ್ಷಣೆಯೂ ವಿಫಲವಾಗಬಹುದು, ದುರಂತವಾಗಬಹುದು. ಈ ಸಂಘರ್ಷದ ವಿಫಲ ಯತ್ನ, ನಿರಾಶೆ, ಒಂಟಿತನಗಳ ಅನುಭವ ಕಲಾವಿದೆಯ ಉದ್ದೇಶ ವಿರಬಹುದು. ಕಲುಷಿತ ಬದುಕಿನಲ್ಲಿ ಮೌಲ್ಯದ ಹಂಬಲವೇ ಒಂದು ಫ್ಯಾಂಟಸಿಯಾಗಬಹುದು.

ಫ್ಯಾಂಟಮ್ ಲೇಡಿಯ ಇನ್ನೊಂದು ಮಾತಿದೆ, "ಸವಕಲು ಮಾತಾಡುವ ಇಚ್ಛೆಯಿಲ್ಲ ರಾಬರ್ಟ್,... ಇಡೀ ಜಗತ್ತನ್ನು ಅರಸಬೇಕು, ಹುಡುಕಬೇಕು ಎನಿಸುತ್ತದೆ." ಯಾವ ಜಗತ್ತು? ಹೊರ ಜಗತ್ತೋ ಒಳ ಜಗತ್ತೋ? ಇದು ಸೋದರಿಯ ಹುಡುಕಾಟ ಮಾತ್ರವಲ್ಲ, ಸಮಾಜದಲ್ಲಿನ ಕೆಡುಕಿನ ಹುಡುಕಾಟ ಮಾತ್ರವಲ್ಲ, ಅಂತರಂಗದ ಅನ್ವೇಷಣೆಯೂ ಆಗಬಹುದು. ಇಲ್ಲಿ ಕಲ್ಪಿತ ವ್ಯಕ್ತಿಗಳ ಔಚಿತ್ಯವೇನು? ಎರಡು ವಿಭಿನ್ನ ವ್ಯಕ್ತಿತ್ವಗಳು. ಕಲುಷಿತ ವಾತಾವರಣದಲ್ಲಿ ಮುಳುಗಿ, ಕರಗಿ, ಕಳೆದುಹೋದ ವ್ಯಕ್ತಿತ್ವವೊಂದು, ಅದನ್ನು ಹುಡುಕಿ ಬಂಧನದಿಂದ ಬಿಡಿಸಿ ತನ್ನದಾಗಿಸಿಕೊಳ್ಳುವ ತನ್ನಂತೆ ಮಾಡಿಕೊಳ್ಳುವ ವ್ಯಕ್ತಿತ್ವ ಇನ್ನೊಂದು. ಇಂತಹ ಎರಡೂ ಮನಃಸ್ಥಿತಿ, ಪ್ರವೃತ್ತಿಗಳೂ ಮನುಷ್ಯನಲ್ಲೇ ಇವೆ. ಈ ದ್ವಂದ್ವವೇ, ಈ ಒಳಗಿನ ಸಂಘರ್ಷವೇ ಇಲ್ಲಿ ಅವಳಿ ಸೋದರಿಯರ ಕಥೆಯಾಗಿ ಮೂರ್ತ ರೂಪ ಪಡೆದು, ರೂಪಕಗಳಾಗಿವೆ. ಸುಪ್ತಮನಸ್ಸಿನಲ್ಲಿ ದಾಖಲಾಗುವ ಅನುಭವ ಬಿಂಬಗಳು ಸಾಂಕೇತಿಕ ರೂಪ ತಳೆಯುತ್ತವೆ. ಮೇಲುನೋಟಕ್ಕೆ ಕೀಟಲೆಮಾಡುವಂತಹ ಸಿನೆಮಾ ಫ್ಯಾಂಟಸಿ– ಇಲ್ಲಿನ ಎರಡು ವ್ಯಕ್ತಿತ್ವಗಳ ಪರಿಭಾವನೆಯಲ್ಲಿ ಯಾವುದು ಸಹಜ, ಯಾವುದು ಕೃತಕ; ಯಾವುದು ಪ್ರಕೃತಿ ಯಾವುದು ವಿಕೃತಿ ಮುಂತಾದ ಪ್ರಶ್ನೆಗಳೇಳುತ್ತವೆ. ರೊಮಾನ್ಸ್ ಶಬ್ದ ಬಳಕೆಯಾಗಿದ್ದರೂ ಅರ್ಥಪೂರ್ಣ ದುರಂತ ಮುಕ್ತಾಯವೂ ಸೂಚಿತವಾಗಿ ಚಿತ್ರಗಳು ಮನಸ್ಸನ್ನು ಕಾಡುತ್ತ ಉಳಿಯುತ್ತವೆ.





ಅಮೆರಿಕಾದ ಕಲಾವಿದೆ ಕ್ಯಾರೊಲೀ ಷ್ನೀಮನ್ ತಾನೇ ಅಭಿನಯಿಸಿ ಚಿತ್ರಗಳನ್ನು ತೆಗೆಸಿ 'ಐ ಬಾಡಿ' ಚಿತ್ರಸರಣಿಯನ್ನು 1963ರಲ್ಲಿ ಪ್ರದರ್ಶಿಸಿದಳು. ಆಕೆಯ ಶಾರೀರಿಕ ಸ್ಥಿರಚಿತ್ರಗಳು

ಮುಂದೆ ಬಾಡಿ ಆರ್ಟ್, ಪರ್ ಫಾರ್ಮೆನ್ಸ್ ಆರ್ಟ್‌ಗಳಿಗೂ ಕಾರಣ ವಾದುವು. ಆಕೆ ತನ್ನ ದೇಹ, ವಸ್ತು, ಪ್ರಸಾಧನ, ಪ್ರಾಪ್, ಸೆಟ್‌ಗಳನ್ನು ಬಳಸಿ ಪುರಾಣ ದೇವತೆಗಳ ಬಿಂಬಗಳನ್ನು ಸೃಷ್ಟಿಸಿದಳು. ಆಕೆಯ ದೇಹವೇ ಶಿಲ್ಪ ವಾಯಿತು. ಪುಷ್ಪಮಾಲಾ ಅವರ ತಾತ್ತ್ವಿಕ ಚಿಂತನೆಯೂ ಹೀಗೆ ಸಾಗಿದರೂ ಅದನ್ನೂ ಮೀರಿ ಭಾರತೀಯ ಪರಂಪರೆ, ಪರಿಸರದಲ್ಲಿ ಅರ್ಥ ವತ್ತಾಗುತ್ತವೆ. ಅವರ ಇನ್ನೊಂದು ಚಿತ್ರ ಸರಣಿ ಗಮನಿಸಿ.





ರಾಜಾರವಿವರ್ಮ (1848–1906) ಅನೇಕ ದೃಷ್ಟಿಯಿಂದ ಭಾರತದ ಚಿತ್ರಕಲೆಯಲ್ಲಿ ಬದಲಾವಣೆಯನ್ನು ತಂದವನು. ಸ್ಟುಡಿಯೊ ಪದ್ಧತಿ, ತೈಲವರ್ಣ ಬಳಕೆ, ನೈಜ ಚಿತ್ರಣಕ್ಕೆ ರೂಪದರ್ಶಿ ಬಳಕೆ ಮುಂತಾಗಿ ಪಾಶ್ಚಾತ್ಯ ಪದ್ಧತಿ, ಶೈಲಿ, ತಂತ್ರ ವಿಧಾನಗಳನ್ನು ರೂಢಿಗೆ ತಂದನು. ನಿಸರ್ಗದೃಶ್ಯ, ಅರಮನೆ ವ್ಯಕ್ತಿಗಳು, ಭಾರತೀಯ ಸ್ತ್ರೀಯರು ಮುಂತಾದುವಲ್ಲದೆ, ಭಾರತೀಯ ಪುರಾಣವಸ್ತುಗಳನ್ನಾಧರಿಸಿ (ರಾಮಾಯಣ ಇತ್ಯಾದಿ) ಕಲ್ಪನಾ ಚಿತ್ರಗಳನ್ನು (ಪಾಶ್ಚಾತ್ಯ ಪದ್ಧತಿಯ ಪುರಾಣ ಚಿತ್ರಣದಂತೆ) ಅತ್ಯಂತ ನಾಟಕೀಯವಾಗಿ, ಘಟನೆಯ ಉತ್ಕಟ ಕ್ಷಣವೊಂದನ್ನು ಸೆರೆಹಿಡಿದಂತೆ ಚಿತ್ರಿಸಿದನು. ಲಕ್ಷ್ಮಿ, ಸರಸ್ವತಿ ಮೊದಲಾದ ದೇವತೆಗಳನ್ನು ಚಿತ್ರಿಸಿದನು. ಅಲ್ಲದೆ ಓಲಿಯೊಗ್ರಫಿ ಪ್ರಿಂಟ್‌ಗಳನ್ನು ನೀಡಿದನು. ಇವು ತುಂಬ ಜನಪ್ರಿಯವಾದುವು. ಕ್ಯಾಲೆಂಡರ್ ಕಲೆಯ ಉಗಮ ಇಲ್ಲಿದೆ. ಆದರ್ಶೀಕರಣ, ನೀತಿಗಳಿಗೆ ಅವನಲ್ಲಿ ಒತ್ತು. ವಸ್ತು ಭಾರತೀಯವಾದರೂ ಶೈಲಿ ಭಾರತೀಯವಾಗಲಿಲ್ಲ, ಆತನಲ್ಲಿ.

ಎನ್.ಪುಷ್ಪಮಾಲಾ ಅವರು 2004ರಲ್ಲಿ ಬ್ರಿಟಿಷ್ ಛಾಯಾ ಚಿತ್ರಕಾರ್ತಿ ಕ್ಲೇರ್ ಅರ್ನಿ ಅವರೊಡಗೂಡಿ 'ನೇಟಿವ್ ವಿಮೆನ್ ಆಫ್ ಸೌತ್ ಇಂಡಿಯಾ' ಎಂಬ ಅಭಿನೀತ ಕಲಾಪ್ರದರ್ಶನ ನಡೆಸಿದರು. ಅಭಿನಯ ಮತ್ತು ಅದರ ಛಾಯಾಚಿತ್ರ ಪ್ರದರ್ಶನ, ಹಲವು ಚಿತ್ರಗಳಲ್ಲಿ ಇಲ್ಲಿ ಎರಡನ್ನು ಮಾತ್ರ ದೃಷ್ಟಾಂತವಾಗಿ ನೀಡಿದೆ. ಕಲೆಗಿದ್ದ ಅಭಿಜಾತ, ಕ್ಲಾಸಿಕಲ್ ಆವರಣವನ್ನು ಕಳಚಿ ಮಾನವಶಾಸ್ತ್ರ, ಸಮಾಜಶಾಸ್ತ್ರಗಳಿಗೆ ಹತ್ತಿರವಾಗಿಸಿದ್ದಾರೆ. ಮೂಲದ ಪ್ರಭಾಮಂಡಲವನ್ನು ಕಳಚಿ (ಹಿಂದೆ ಹೇಳಿದ, ವಾಲ್ಟರ್ ಬೆಂಜಮಿನ್) ಆತ್ಮೀಯವಾಗಿಸಿದ್ದಾರೆ, ಅರ್ಥವಂತಿಕೆ ಹೆಚ್ಚಿಸಿದ್ದಾರೆ (ಇದರ ಸಿದ್ಧತೆ, ಫಲಿತಗಳಿಗೆ ವರ್ಷಗಳೇ ಹಿಡಿದಿವೆ). 1889ರಲ್ಲಿ ರವಿವರ್ಮ ಚಿತ್ರಿಸಿದ ಒಂದು ತೈಲವರ್ಣಕೃತಿ 'ಲೇಡಿ ಇನ್ ಮೂನ್ ಲೈಟ್' ಸೆಟ್‌ಬರೆಸಿ, ಥರ್ಮೋಕೋಲ್‌ನಿಂದ ಬಂಡೆ ಇತ್ಯಾದಿ ಸೃಷ್ಟಿಸಿ, ಪ್ರಾಪ್‌ಗಳನ್ನು ಬಳಸಿದೆ. ಪುಷ್ಪಮಾಲಾ ಅವರೆ ಬೆಳದಿಂಗಳಲ್ಲಿ ತೊಯ್ದಿರುವ ಮಹಿಳೆ. ಇದು ಸಾಮಾಜಿಕ ವಸ್ತುವಾದ್ದರಿಂದ ಮೂಲಕೃತಿ ಮತ್ತು ಅನುಕೃತಿಯ ನಡುವಣ ಭೇದ ಕಣ್ಮರೆಯಾಗಿದೆ. ರವಿವರ್ಮನ ಚಿತ್ರದಲ್ಲಿ ಹಿನ್ನೆಲೆಯ ನಿಸರ್ಗ, ಚಂದ್ರ, ಬೆಳದಿಂಗಳು, ಮುನ್ನೆಲೆಯ ಬಂಡೆ ಮೇಲೆ ಕುಳಿತ ಮಹಿಳೆ ಎಲ್ಲ ವರ್ಣಚಿತ್ರಣವೆ. ಆದರೆ ಇಲ್ಲಿ ಹಿನ್ನೆಲೆ ಸೆಟ್, ವಿದ್ಯುತ್ ದೀಪದ ಔಚಿತ್ಯಪೂರ್ಣಮಂದಬೆಳಕು ಮುನ್ನೆಲೆಯಲ್ಲಿ ಅಲಂಕೃತವಾಗಿ ಕುಳಿತಿರುವ ಕಲಾವಿದೆಯ ಮೇಲೆ. ಇದು ಅನುಕೃತಿ. ವರ್ತಮಾನದ ದೃಷ್ಟಿಯಿಂದ ಬೇರೆಯೇ ಅರ್ಥಗಳಿಗೆ ಸೂಚಕ ಸಂಜ್ಞೆಯಾಗುತ್ತದೆ.

ಎರಡನೆಯ ದೃಷ್ಟಾಂತ ರವಿವರ್ಮನ ಓಲಿಯೊಗ್ರಾಫ್ ವರ್ಣಚಿತ್ರ–'ಲಕ್ಷ್ಮೀ'. ಅಬ್ಬಿ, ಹಂಸ, ಗುಡ್ಡ, ಮರಗಳ ಹಿನ್ನೆಲೆ ಸೆಟ್, ಮುನ್ನೆಲೆಯಲ್ಲಿ ಕಮಲದ ಪ್ರಾಪ್, ಹಿಂದೆ ಲಕ್ಷ್ಮಿ ವೇಷದಲ್ಲಿ ಕಲಾವಿದೆ. ಮೂಲದಲ್ಲಿ ನಾಲ್ಕು ತೋಳುಗಳಿದ್ದರೆ, ಇಲ್ಲಿ ಎರಡು. ಕೆಂಪು ಸೀರೆ, ಕಿರೀಟ ಮೂಲ ಮತ್ತು ಅನುಕೃತಿ ಎರಡಕ್ಕೂ ಸಮಾನ. ದೇವತೆಗಳ ಚಿತ್ರಕ್ಕೂ ರವಿವರ್ಮ ರೂಪದರ್ಶಿಗಳನ್ನ ಬಳಸಿದ್ದುಂಟು. ಪುರಾಣಗಳ ಲಕ್ಷ್ಮಿಯ ಕಲ್ಪನೆಯ ಅನುಸರಣೆ ರವಿವರ್ಮನದು. ಅದರ ಅನುಕೃತಿ ಈ ಲಕ್ಷ್ಮಿ. ಒಂದು ತತ್ತ್ವ, ಒಂದು ಮನೋಸೃಷ್ಟಿ ಲಕ್ಷ್ಮಿ ಎಂಬ ದೇವತೆ. ಅದೊಂದು ಪ್ರತೀಕ, ಶ್ರೀಮಂತಿಕೆಗೆ. ಅನುಕೃತಿಯ ಲಕ್ಷ್ಮಿಯೂ ಒಂದು ಕಲ್ಪನೆಯೆ. ಇಲ್ಲಿ ಮೂಲ ಯಾವುದು ಎಂಬ ಪ್ರಶ್ನೆಯೂ ಬರುತ್ತದೆ. ವಾಸ್ತವವಾಗಿ ರವಿವರ್ಮ ತನ್ನ ಕಾಲದಲ್ಲಿ ರೂಢಿಯಲ್ಲಿದ್ದ ಸೀರೆ, ರವಿಕೆ, ಸರಗಳನ್ನೇ ಚಿತ್ರಣದಲ್ಲಿ ಬಳಸಿದ್ದಾನೆ. ಶಿವರಾಮಕಾರಂತರು ಹೇಳಿದಂತೆ 'ನಮ್ಮ ಅಳತೆಯನ್ನು ಮೀರಲಾರದ ದೇವರು'. ಕಲಾವಿದೆ ಇಂತಹ ವಾಸ್ತವ ದೈಹಿಕವಾದ ಪ್ರದರ್ಶನದ ಸಂಕೀರ್ಣತೆ ಒಂದು ರೂಪಕವಾಗಿ ಪರಿಣಮಿಸುತ್ತದೆ ಎನ್ನುತ್ತಾರೆ. ಅದರದೇ ಅರ್ಥವಂತಿಕೆ (ಸಿಗ್ನಿಫಿಕೇಷನ್) ಮೂಡುತ್ತದೆ ಎನ್ನುತ್ತಾರೆ. ಬಿಂಬ–ಪಠ್ಯಗಳು ಕೂಡಿದು ಒಂದು ನುಡಿಗಟ್ಟು (ಈಡಿಯಂ) ಸೃಷ್ಟಿಯಾಗುತ್ತದೆ. ಇಲ್ಲಿ ಮೂಲ ಮತ್ತು ಅನುಕೃತಿಯ ನಡುವಿನ ಭೇದ ಅಳಿಸುತ್ತದೆ ಎಂದರೂ ಕಲಾವಿದೆ ಇಲ್ಲಿ ವ್ಯತ್ಯಾಸದತ್ತಲೂ ಗಮನ ಸೆಳೆಯುತ್ತ ತುಂಟತನ, ವ್ಯಂಗ್ಯ ಮಾಡುವಂತೆ ತೋರುತ್ತದೆ. (ದೀಪಾವಳಿ ಲಕ್ಷ್ಮಿ ಪೂಜೆ–ನೆನೆಯಿರಿ). ಹೀಗೆ ಹೊಸ ಸಂದರ್ಭದಲ್ಲಿ ಒಂದು ಅನುಕೃತಿ ಅನುಕೃತಿಯಾಗೇ ಇರದೆ ಪುನರ್‌ಸೃಷ್ಟಿಯಾಗುತ್ತದೆ. ಹೊಸ ಭಾವ, ಅರ್ಥ, ಸಂವೇದನೆಗಳಿಗೆ ಚೋದನೆ ನೀಡುತ್ತದೆ. ಎನ್.ಪುಷ್ಪಮಾಲಾ ಅವರ ಈ ಕಲೆ ಸಂಕೀರ್ಣವಾದದ್ದು, ಇದನ್ನ ಅಂತರಶಿಸ್ತೀಯ ದೃಷ್ಟಿಯಿಂದ – ಅವರ ಇತರ ದಕ್ಷಿಣ ಭಾರತೀಯ ದೇಶೀ ಮಹಿಳೆಯರಲ್ಲಿನ ತೋಡ ಮೊದಲಾದ ಬುಡಕಟ್ಟು ಜನಾಂಗದ ಅಭಿನೀತ ಕಲಾಕೃತಿಗಳನ್ನ ಗಮನಿಸಿ (ಮುಖಪುಟ ನೋಡಿ) ಸಮಗ್ರವಾಗಿ – ನೋಡಬಹುದಾದ ಸಾಧ್ಯತೆಗಳೂ ಇವೆ. ❑



# ಅಪೌಷ್ಠಿಕತೆ ಮತ್ತು ಲಿಂಗತಾರತಮ್ಯ

● *ರಾಜೇಶ್ವರಿ ಎಚ್.ಎಸ್.*

ಆ ಪುಟ್ಟ ಹೆಣ್ಣು ಮಗುವಿನ ಹೆಸರು ಸಾವಿತ್ರಿ. ಆ ಮಗುವಿಗೆ ಹದಿನೆಂಟು ತಿಂಗಳು. ಆದರೆ ಅದು ಮೂರು ತಿಂಗಳ ಮಗುವಿನ ಹಾಗೆ ಕಾಣಿಸುತ್ತದೆ. ಆಕೆಯ ತೂಕ 5.5 ಕೆ.ಜಿ. ಆಕೆ ಸದಾ ಮಲಗಿರುತ್ತಾಳೆ. ಪಕ್ಕಕ್ಕೆ ಹೊರಳಾಡಲು ಸಹ ಸಾಧ್ಯವಿಲ್ಲ. ಅಷ್ಟು ನಿತ್ರಾಣವಾದ ದೇಹ. ಸಣ್ಣ ಕೈಕಾಲುಗಳು. ಆಕೆಯ ತಾಯಿಗೆ ಆಕೆ ಬದುಕುವ ಭರವಸೆಯಿಲ್ಲ. ಆಕೆಗೆ ಅತ್ಯಗತ್ಯವಾದ ದುಬಾರಿ ಟಾನಿಕ್, ಔಷಧಿಗಳನ್ನು ಕೊಳ್ಳಲು ಅವರ ಬಳಿ ಹಣವಿಲ್ಲ.

ಆಕೆಯ ತಾಯಿ ಜಯಮ್ಮನಿಗೆ ಈಗಾಗಲೇ 7 ವರ್ಷದ ಮಗನಿದ್ದಾನೆ. ಆಕೆ ಪುನಃ 7 ತಿಂಗಳ ಗರ್ಭಿಣಿ. ಅವಳಿಗೆ ಮದುವೆಯಾದಾಗ 14 ವರ್ಷ. ಈಗ ಆಕೆಗೆ 19 ವರ್ಷ, ಮೂರನೇ ಮಗುವನ್ನು ಹೆರುವ ತಯಾರಿಯಲ್ಲಿದ್ದಾಳೆ. ಮನೆಯ ಎಲ್ಲಾ ಕೆಲಸಗಳನ್ನು ಆಕೆಯೇ ಮಾಡಿ, ಹೊಲಕ್ಕೆ ಕೂಲಿಗಾಗಿ ಹೋಗುತ್ತಾಳೆ. ಮನೆಯಲ್ಲಿ 14 ವರ್ಷದ ಹೆಣ್ಣು ಹುಡುಗಿ (ಗಂಡನ ಸಂಬಂಧಿ) ಮನೆಯಲ್ಲಿರುವ ಮಗುವನ್ನು ನೋಡಿಕೊಳ್ಳುತ್ತಾಳೆ. ಈ ಮಗು ಸಹ ಶಾಲೆ ಬಿಟ್ಟಿದೆ. ಜೊತೆಗೆ ಆಕೆಯ ಮದುವೆಯ ತಯಾರಿಯೂ ನಡೆದಿದೆ.

ಇದು ಗ್ರಾಮೀಣ, ಬಡ ಮಹಿಳೆಯ ಕುಟುಂಬದ ಚಿತ್ರಣ. ಅಪೌಷ್ಠಿಕತೆ ಹಾಗೂ ಗಂಡು ಮತ್ತು ಹೆಣ್ಣಿನ ನಡುವೆ ಇರುವ ತಾರತಮ್ಯ ಏಷಿಯಾ ಖಂಡದಲ್ಲಿ ಅತ್ಯಂತ ವ್ಯಾಪಕವಾಗಿದೆ. ಇವುಗಳ ನಡುವೆ ಒಂದು ರೀತಿಯ ಸಂಕೀರ್ಣ ಸಂಬಂಧವಿದೆ. ಕೆಲವು ಪ್ರದೇಶಗಳಲ್ಲಿ ಅಪೌಷ್ಠಿಕತೆಯ ಮಟ್ಟ ತುಂಬಾ ಹೆಚ್ಚಾಗಿರುವುದರ ಜೊತೆ ಜೊತೆಗೆ ಲಿಂಗ ತಾರತಮ್ಯವು ಚಾಲ್ತಿಯಲ್ಲಿದೆ. ಇದರರ್ಥ ಗಂಡು ಮಕ್ಕಳಿಗಿಂತ ಹೆಚ್ಚು ಹೆಣ್ಣು ಮಕ್ಕಳು ಅಪೌಷ್ಠಿಕತೆಯಿಂದ ನರಳುತ್ತಿದ್ದಾರೆಂದಲ್ಲ. ಆದರೆ, ಇದು ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನ, ಸಶಕ್ತತೆ ಮುಂತಾದ ಸಂಗತಿಗಳನ್ನು ಅವಲಂಬಿಸಿದೆ.

ಲಿಂಗತಾರತಮ್ಯ ಮತ್ತು ಅಪೌಷ್ಠಿಕತೆಯ ನಡುವಿರುವ ಸಂಬಂಧ ವನ್ನು ಅರ್ಥಮಾಡಿಕೊಳ್ಳುವದು ಮುಖ್ಯವಾಗುತ್ತದೆ. ಇಂದಿಗೂ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರು ರಕ್ತಹೀನತೆಯಿಂದ ನರಳುತ್ತಿದ್ದಾರೆ. ಮಹಿಳೆಯರ ಹಾಗೂ ಮಕ್ಕಳ ಆರೋಗ್ಯಕ್ಕೆ ಸಂಬಂಧಪಟ್ಟ ಹಾಗೆ ಸರ್ಕಾರಗಳು ಹೇರಳವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಆದರೂ ಅಪೌಷ್ಠಿಕತೆಯ ಪರಿಮಾಣ ಹೆಚ್ಚುತ್ತಿರುವುದು ಆತಂಕದ ಸಂಗತಿ. ಗರ್ಭಿಣಿಯರ ಮರಣ, ಶಿಶುಮರಣ ಹೆಚ್ಚುತ್ತಿರುವುದು ಕಂಡುಬರುತ್ತಿದೆ. ಅಪೌಷ್ಠಿಕತೆಯಿಂದ ನರಳುವ ಹೆಣ್ಣು ಮಗು ಬೆಳೆದು ದೊಡ್ಡವಳಾಗಿ ವಿವಾಹದ ನಂತರ ಚಿಕ್ಕ ಪ್ರಾಯದಲ್ಲಿ ತಾಯಿಯಾಗುತ್ತಾಳೆ. ಆಕೆ ಅಪೌಷ್ಠಿಕತೆಯಲ್ಲಿ ನರಳುವುದರ ಜೊತೆಯಲ್ಲಿ ಮಗುವೂ ಸಹ ಅಪೌಷ್ಠಿಕತೆಯಿಂದ ನರಳುತ್ತದೆ.

ಭಾರತದಲ್ಲಿ ಶೇ 44ರಷ್ಟು ಹಾಗೂ ಗ್ರಾಮೀಣ ಪ್ರದೇಶದಲ್ಲಿ ಶೇ.55ರಷ್ಟು ಹೆಣ್ಣು ಮಕ್ಕಳಿಗೆ ಬಾಲ್ಯದಲ್ಲಿ ವಿವಾಹ ಮಾಡುತ್ತಾರೆ. ಈ ಹೆಣ್ಣು ಮಕ್ಕಳು ಸಾಮಾನ್ಯವಾಗಿ ಹೆರಿಗೆಯ ಸಮಯದಲ್ಲಿ ಗಂಭೀರವಾದ ಸಮಸ್ಯೆಗಳನ್ನು ಎದುರಿಸುತ್ತಾರೆ. ಹೆರಿಗೆಯ ಸಮಯದಲ್ಲಿ ಮರಣ ಹೊಂದುವುದು, ನಿಗದಿತ ಸಮಯಕ್ಕೆ ಮೊದಲು ಮಗು ಜನಿಸುವುದು, ಕಡಿಮೆ ತೂಕವಿರುವುದು ಸಾಮಾನ್ಯ ಸಂಗತಿಗಳು. ಹೆಣ್ಣು ಮಗುವಿನ ಅಪೌಷ್ಠಿಕತೆ ವಿಷ ವೃತ್ತದ ಹಾಗೆ. ಪುನಃ ಮುಂದುವರಿಯುತ್ತದೆ.

ಕುಟುಂಬದಲ್ಲಿ ಕಂಡುಬರುವ ಪಕ್ಷ ಪಾತದ ಧೋರಣೆಯಿಂದಾಗಿ ಆಕೆಯ ದೈಹಿಕ ಬೆಳವಣಿಗೆಯು ಕುಂಠಿತವಾಗುತ್ತದೆ. ಒಂದು ಅಂಕಿ ಅಂಶದ ಪ್ರಕಾರ ಹುಡುಗರಲ್ಲಿ ಬೆಳವಣಿಗೆಯ ಕುಂಠಿತ ಪ್ರಮಾಣ ಸರಾಸರಿ 20 ಇದ್ದರೆ, ಹೆಣ್ಣು ಮಕ್ಕಳಲ್ಲಿ ಸರಾಸರಿ 45ರಷ್ಟಿದೆ. ಬದಲಾಗುತ್ತಿರುವ ಸಾಮಾಜಿಕ ಸಂದರ್ಭಗಳಲ್ಲಿ ಕುಟುಂಬಗಳ ಊಟ ಉಪಚಾರ ವ್ಯವಸ್ಥೆಯಲ್ಲಿ ಲಿಂಗ ತಾರತಮ್ಯ ಕಡಿಮೆಯಾಗುತ್ತಿದೆ ಮತ್ತು ಸೂಕ್ಷ್ಮವಾಗಿ ನೋಡಿದರೆ ಈ ವ್ಯತ್ಯಾಸಗಳು ಕಂಡುಬರುತ್ತವೆ. ಗಂಡು ಮಗುವಿನ ಪ್ರಾಧಾನ್ಯ, ಆತನ ಅಸ್ತಿತ್ವದ ಹಿಂದಿರುವ ಆರ್ಥಿಕ ಉತ್ಪಾದನೆಯ ಪರಿಕಲ್ಪನೆ, ಪುರುಷ ಪ್ರಧಾನ ಮೌಲ್ಯಗಳು ಭಿನ್ನ ಸ್ವರೂಪದಲ್ಲಿ ಕೆಲಸ ಮಾಡುತ್ತವೆ. ಸಾಮಾನ್ಯವಾಗಿ ಕುಟುಂಬಗಳಲ್ಲಿ ಹೆಣ್ಣು ಮಕ್ಕಳ ಆರೋಗ್ಯದ ವಿಚಾರದಲ್ಲಿ ನಿರ್ಲಕ್ಷ್ಯ ಕಂಡುಬರುತ್ತದೆ. ಹದಿಹರೆಯದ ಹೆಣ್ಣುಮಕ್ಕಳು, ತಮ್ಮ ಸಮಸ್ಯೆಯನ್ನು ತಾಯಿಯ ಗಮನಕ್ಕೆ ತರುತ್ತಾರೆ. ಇನ್ನು ಋತುಸ್ರಾವ, ಹೊಟ್ಟೆನೋವು ಮುಂತಾದ ಸಮಸ್ಯೆಗಳನ್ನೂ ವೈಯಕ್ತಿಕ ಶುಚಿತ್ವಕ್ಕೆ ಸಂಬಂಧ ಪಟ್ಟ ವಿಚಾರಗಳನ್ನೂ ಮುಕ್ತವಾಗಿ ತಾಯಂದಿರು ಮಕ್ಕಳ ಬಳಿ ಚರ್ಚಿಸುವುದು ಅಪರೂಪ. ಹಾಗಾಗಿ ಇಂತಹ ಸಮಸ್ಯೆಗಳು ಬಾಲ್ಯದಲ್ಲಿ ಪ್ರಾರಂಭವಾಗಿ, ಜೀವನಪೂರ್ತಿ ಅನುಭವಿಸಿದ ನಿದರ್ಶನಗಳು ಸಹ ಇವೆ. ಲಲಿತಾ ಬಾಲ್ಯದಿಂದಲೂ ವಸಡಿನ ಸಮಸ್ಯೆಯಿಂದ ನರಳುತ್ತಿದ್ದಳು. ಆಕೆಯ ತಾಯಿ ಗಂಡನ ಮೇಲೆ ಸದಾ ಒತ್ತಡಹಾಕಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳುತ್ತಿದ್ದರೂ ಆತ ಕಿವಿಯಮೇಲೆ ಹಾಕಿಕೊಳ್ಳುತ್ತಿರಲಿಲ್ಲ. ತಾಯಿಯ ಬಳಿ ಹಣವಿರಲಿಲ್ಲ. ಆಕೆ ಗಂಡನನ್ನೇ ಕೇಳಬೇಕು. ಜೊತೆಯಲ್ಲಿ ಹಳ್ಳಿನ ವೈದರ ಬಳಿ ಹೋಗಬೇಕೆಂದರೆ, ಬೇರೆ ಊರಿಗೆ ಕರೆದುಕೊಂಡು ಹೋಗಬೇಕು. ಮಗಳ ಆರೋಗ್ಯದ ಬಗ್ಗೆ ಸಾಕಷ್ಟು ಕಾಳಜಿ ತಾಯಿಗಿದ್ದರೂ, ಆಕೆ ಅಸಹಾಯಕಳು. ಹಾಗಾಗಿ ಲಲಿತಾ ಜೀವನ ಪೂರ್ತಿ ಸಮಸ್ಯೆಯಿಂದ ನರಳಬೇಕಾದ ಸಂದರ್ಭ ಉಂಟಾಯಿತು.

ಭಾರತದಲ್ಲಿ ಶಾಲೆ ಬಿಡುವ ಹೆಣ್ಣು ಮಕ್ಕಳ ಸಂಖ್ಯೆ (11 ವರ್ಷದಿಂದ 14 ವರ್ಷದೊಳಗೆ) ಸರಾಸರಿ 72 ರಷ್ಟಿದೆ. ಸ್ಕೂಲಿಗೆ ಹೋಗುವ ಹೆಣ್ಣು ಮಕ್ಕಳಲ್ಲಿ ಹಿಮೋಗ್ಲೋಬಿನ್ ಪ್ರಮಾಣ ತುಂಬಾ ಕಡಿಮೆ ಇರುತ್ತದೆ. 100ಜನ ಹೆಣ್ಣು ಮಕ್ಕಳಲ್ಲಿ 16 ಹೆಣ್ಣುಮಕ್ಕಳು ಕೇವಲ 8 ಗ್ರಾಂ ಹಿಮೋಗ್ಲೋಬಿನ್ ಹೊಂದಿರುತ್ತಾರೆ. 100 ಗಂಡು ಮಕ್ಕಳಲ್ಲಿ ಕೇವಲ 2 ಮಕ್ಕಳು ಹಿಮೋಗ್ಲೋಬಿನ್ ಕೊರತೆಯಿಂದ ನರಳುತ್ತಿದ್ದಾರೆ.

ಮಹಿಳೆಯರ ಕೆಲಸದ ಒತ್ತಡಕ್ಕೂ, ಆಹಾರ ವ್ಯವಸ್ಥೆಗೂ ನಿಕಟವಾದ ಸಂಬಂಧವಿದೆ. ಗ್ರಾಮೀಣ ಪ್ರದೇಶದ ಮಹಿಳೆಯರು ಮತ್ತು ನಗರ ಪ್ರದೇಶದಲ್ಲಿ ಸ್ಲಂಗಳಲ್ಲಿ ವಾಸಿಸುವ, ಕೂಲಿ ನಾಲಿ ಮಾಡುವ, ಬಡಮಹಿಳೆಯರ ಕೆಲಸದ ಸ್ವರೂಪದ ಮೇಲೆ ಕುಟುಂಬದಲ್ಲಿ ಊಟದ ವ್ಯವಸ್ಥೆಯು ರೂಪಿತವಾಗುತ್ತದೆ. ಮನೆಯಲ್ಲಿರುವ ಮಧ್ಯಮ ವರ್ಗದ ಮಹಿಳೆಯರು ಸಮಯಕ್ಕೆ ಸರಿಯಾಗಿ ಊಟದ ವ್ಯವಸ್ಥೆಯನ್ನು ಮಾಡುತ್ತಾರೆ. ಆದರೆ ಕೆಲಸಕ್ಕೆ ಹೋಗುವ ವಿದ್ಯಾವಂತ ಮಹಿಳೆಯರು ಗ್ರಾಮೀಣ ಪ್ರದೇಶದ ಬಡ ಹೆಣ್ಣು ಮಕ್ಕಳು, ಕೃಷಿ ಕುಟುಂಬದ ಹೆಣ್ಣು ಮಕ್ಕಳು ಅವರದೇ ಆದ ಒಂದು ವ್ಯವಸ್ಥೆಯನ್ನು ಮಾಡಿಕೊಳ್ಳುವುದು ಅನಿವಾರ್ಯವಾಗಿದೆ. ಬೆಳಿಗ್ಗೆ ಮುದ್ದೆ ಮಾಡಿದರೆ, ಪುನಃ ಹೊಲದಿಂದ ವಾಪಸ್ಸು ಬಂದಾಗಲೇ ಒಲೆ ಹಚ್ಚುವುದು ಹಳ್ಳಿಗಳಲ್ಲಿ ಸಾಮಾನ್ಯ. ಸರ್ಕಾರದ ಬಿಸಿಯೂಟದ ಕಾರ್ಯದಿಂದಾಗಿ, ಮಧ್ಯಾಹ್ನದ ಊಟ ಮಕ್ಕಳಿಗೆ ಲಭ್ಯವಾಗಿದೆ.

ಒಮ್ಮೆ ಹೆಣ್ಣು ಮಗುವನ್ನು ಮದುವೆ ಮಾಡಿಕೊಟ್ಟ ಮೇಲೆ ಆಕೆ ಹೊಸ ವಾತಾವರಣಕ್ಕೆ ಹೊಂದಿಕೊಳ್ಳಲು ಒಂದು ವರ್ಷವಾದರೂ ಬೇಕಾಗುತ್ತದೆ. ಆಕೆ ಹೊಸ ವಾತಾವರಣದಲ್ಲಿ ಹೆಂಡತಿಯಾಗಿ, ಸೊಸೆಯಾಗಿ, ಅತ್ತಿಗೆಯಾಗಿ, ಒಟ್ಟು ಕುಟುಂಬದಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸಲು ಹೆಣಗಾಡಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಆಕೆ ತನ್ನ ಆರೋಗ್ಯ ಹಾಗೂ ಮಗುವಿನ ಆರೋಗ್ಯದತ್ತ ಗಮನ ಕೊಡಲು ಸಾಧ್ಯವಾಗುವುದೇ ಇಲ್ಲ. ಯಾವುದೇ ತೀರ್ಮಾನವನ್ನು ಆಕೆ ತೆಗೆದುಕೊಳ್ಳಲು ಸಾಧ್ಯವಿಲ್ಲ. ರತ್ನ ಮದುವೆಯಾಗಿ ಬಂದ ಮೇಲೆ, ಮನೆಕೆಲಸ, ಹೊಲದ ಕೆಲಸದ ಜವಾಬ್ದಾರಿಯು ಆಕೆಯ ಮೇಲೆ ಬಿದ್ದಿತ್ತು. ಆಕೆ ಮನೆಯಲ್ಲಿದ್ದು ಸಮಯಕ್ಕೆ ಸರಿಯಾಗಿ ತನ್ನ ಮಗಳಿಗೆ ಆಹಾರವನ್ನು ನೀಡುವುದು ಸಾಧ್ಯವಾಗುತ್ತಿರಲಿಲ್ಲ. ಹಾಲಿದ್ದರೂ, ಮಗುವಿಗೆ ಹಾಲನ್ನು ನೀಡದಿರುವುದು, ಬೆಕ್ಕು ಕುಡಿದು ಹೋಯಿತೆನ್ನುವುದು, ಮುಚ್ಚಿಡುವುದು ನಡೆಯುತ್ತಿತ್ತು. ಇಂತಹ ಘಟನೆಗಳು ಒಟ್ಟು ಕುಟುಂಬಗಳಲ್ಲಿ ನಡೆಯುವುದು ಸಾಮಾನ್ಯ. ಆಕೆ ಹೊಲಕ್ಕೆ ಹೋಗಿ ದುಡಿಯುವುದು ಅನಿವಾರ್ಯವಾದುದರಿಂದ, ಅನಿವಾರ್ಯವಾಗಿ ಆಕೆ ಅಂತಹ ಸಂಗತಿಗಳನ್ನು ಒಪ್ಪಿಕೊಳ್ಳ ಬೇಕಾಗುತ್ತದೆ.

ಕಟ್ಟಡ ಕಟ್ಟುವ ಮಹಿಳಾಕಾರ್ಮಿಕರು ಮಕ್ಕಳ ಪಾಲನೆ ಮಾಡುವುದು ಮತ್ತೂ ಕಷ್ಟ. ಅವರ ಸ್ಥಿತಿ-ಗತಿಯನ್ನು ನೋಡಿದರೆ ಪೌಷ್ಠಿಕ ಆಹಾರವಿರಲಿ, ಸಾಮಾನ್ಯವಾದ ಆಹಾರ, ಶುಚಿಯಾದ ವಾತಾವರಣ ದೊರೆತರೂ ಸಾಕು ಎನ್ನಬಹುದು.

ಭಾರತದ ಹಲವು ರಾಜ್ಯಗಳಲ್ಲಿ ಬಾಲ್ಯವಿವಾಹ ಪದ್ಧತಿ ಇನ್ನೂ ಚಾಲ್ತಿಯಲ್ಲಿದೆ. 11 ವಯಸ್ಸಿನಿಂದ 18 ವರ್ಷದೊಳಗೆ ಹೆಣ್ಣು ಮಕ್ಕಳ ಮದುವೆ ಮಾಡಿದಾಗ ಮೊದಲನೆ ಹೆರಿಗೆಯಲ್ಲಿ ಮರಣ ಹೊಂದುವವರ ಪ್ರಮಾಣ ಶೇ 60ರಷ್ಟು. ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡಿದಾಗ, ಅಪೌಷ್ಠಿಕತೆಯಿಂದ ನರಳುವ ಹೆಣ್ಣು ಮಗು ಅಪೌಷ್ಠಿಕ ಮಕ್ಕಳನ್ನು ಹೆರುತ್ತಾಳೆ. ಆಕೆಯೂ ಅಪೌಷ್ಠಿಕತೆಯಿಂದ ನರಳುತ್ತಾಳೆ. ಇದು ಹೀಗೆಯೇ ಮುಂದುವರಿಯುತ್ತದೆ ಶೇ. 20-25 ಮಕ್ಕಳು ಕಡಿಮೆ ತೂಕವನ್ನು ಹೊಂದಿರುತ್ತವೆ.

ಅಪೌಷ್ಠಿಕತೆಗೆ ಹಲವಾರು ಕಾರಣಗಳಿವೆ. ಈ ಕಾರಣಗಳೊಂದಿಗೆ ಪುರುಷ ಪ್ರಧಾನ ಮೌಲ್ಯಗಳಿಂದಾಗಿ ಕುಟುಂಬದಲ್ಲಿ ಲಿಂಗ ತಾರತಮ್ಯದ ಬೇರು ಬಲವಾಗಿ ಬೇರೂರಿದೆ. ಹಾಗಾಗಿ ಹೆಣ್ಣು ಮಕ್ಕಳ ಅಪೌಷ್ಠಿಕತೆಯ ಸಮಸ್ಯೆಯನ್ನು ಚರ್ಚಿಸುವಾಗ, ನಿರ್ದಿಷ್ಟ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸನ್ನಿವೇಶದ ಹಿನ್ನೆಲೆಯಲ್ಲಿ ನೋಡುವುದು ಅನಿವಾರ್ಯ ವಾಗುತ್ತದೆ.

ಸಾಮಾನ್ಯವಾಗಿ ಮಹಿಳೆ 16 ರಿಂದ 18 ಗಂಟೆಗಳ ಕಾಲ ದುಡಿಯುತ್ತಾಳೆ. ಆದರೆ ಪುರುಷ 8 ರಿಂದ 10 ಗಂಟೆಗಳ ಕಾಲ ದುಡಿಯುತ್ತಾನೆ. ಪುರುಷ ಪ್ರಧಾನ ಮೌಲ್ಯಗಳಿಂದ ರೂಪಿತವಾದ ನಮ್ಮ ಕುಟುಂಬಗಳಲ್ಲಿ ಪುರುಷರು ಮನೆಗೆಲಸ, ಮಕ್ಕಳ ಪಾಲನೆ-ಪೋಷಣೆಗಳ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ. ಮನೆಗೆಲಸ, ಅಡಿಗೆ ಮಾಡುವುದು, ಪಾತ್ರೆ ತೊಳೆಯುವುದು, ಮಕ್ಕಳ ಪಾಲನೆ ಪೋಷಣೆ, ಸೌದೆ ತರುವುದು, ನೀರು ತರುವುದು, ಹೈನುಗಾರಿಕೆ ಇವೆಲ್ಲಾ ಮನೆಗೆಲಸದ ವ್ಯಾಪ್ತಿಯಲ್ಲಿಯೇ ಬರುತ್ತವೆ. ಎಲ್ಲ ಕೆಲಸ ಮುಗಿಸಿ, ಗಂಡನಿಗೆ, ಅಥವಾ ಮನೆಯೊಳಗಿನ ಇತರ ಪುರುಷರಿಗೆ ತಟ್ಟೆ ಇಟ್ಟು ಬಡಿಸಬೇಕು. ಸಾಮಾನ್ಯವಾಗಿ ಮೊದಲು ಊಟ ಮಾಡುವವವರು ಪುರುಷರು ಹಾಗೂ ಮಕ್ಕಳಾದುದರಿಂದ, ತರಕಾರಿ, ಬೇಳೆ, ಮಾಂಸದ ಪೀಸ್ ಮೊದಲು ಅವರಿಗೆ ನೀಡಿ ಕೊನೆಯಲ್ಲಿ ಹೆಂಗಸರು ಊಟ ಮಾಡುತ್ತಾರೆ. ತನಗೆ ಕಡಿಮೆಯಾಗುತ್ತದೆಯೆಂದು ಆಕೆ ಯೋಚಿಸುವುದಿಲ್ಲ. ಊಟ ರುಚಿಕರವಾಗಿದ್ದರೆ ಗಂಡಸರು ಆಕೆಯನ್ನು ಹೊಗಳುತ್ತಾ ಹೆಚ್ಚು ಹಾಕಿಸಿಕೊಂಡು ಊಟಮಾಡುತ್ತಾರೆ. ಆಕೆಗೆ ಊಟ ಇದೆಯೇ, ಅಥವಾ ಇಲ್ಲವೇ ಎನ್ನುವುದನ್ನು ಗಂಡಸರು ಗಮನಿಸುವುದೇ ಇಲ್ಲ. ಎಷ್ಟೋ ಹೆಣ್ಣು ಮಕ್ಕಳು, ಉಪವಾಸ ಅಥವಾ ಕಡಿಮೆ ಸಾರಿನಲ್ಲಿ ಊಟಮಾಡುವುದು ಅಥವಾ ಗೊಜ್ಜು ಹಿಸುಕಿಕೊಂಡು ಊಟ ಮಾಡುವುದು ಕಂಡುಬರುತ್ತದೆ. ಇದು ಒಂದು ದಿನದ ಪ್ರಶ್ನೆಯಲ್ಲ. ಮನೆಯಲ್ಲಿ ತಂಗಳು ಮಿಕ್ಕಿದ್ದರೆ ಅದನ್ನು ಗಂಡಸರು ಸಾಮಾನ್ಯವಾಗಿ ತಿನ್ನುವುದಿಲ್ಲ, ಹೆಂಗಸರು ಸಹ ಅವರಿಗೆ ಒತ್ತಾಯ ಮಾಡಿ ನೀಡುವುದಿಲ್ಲ, ಮಿಕ್ಕಿರುವುದನ್ನು, ತಂಗಳನ್ನು ಸಾಮಾನ್ಯವಾಗಿ ತಿನ್ನುವುದು ಹೆಂಗಸರೇ.

ವಸಂತ ಬೆಳಿಗ್ಗೆ 7 ಗಂಟೆಗೆ ಮನೆ ಬಿಡುತ್ತಾಳೆ. ಮೊದಲು, ಗಂಡ ಮಕ್ಕಳಿಗೆ ತಿಂಡಿ ಮಾಡಿ, ಬಾಕ್ಸ್‌ಗೆ ಹಾಕಿ, ಮನೆ ಬಿಡುತ್ತಾಳೆ. ಕಾರ್ಖಾನೆಯನ್ನು ತಲುಪಿದ ಕೂಡಲೇ ಅವಸರ ಅವಸರವಾಗಿ ಬಾಯಿಗೆ ತುಂಬಿಕೊಳ್ಳುತ್ತಾಳೆ. ಕೆಲವೊಮ್ಮೆ ತಡವಾದರೆ ಅದನ್ನೇ ಮಧ್ಯಾಹ್ನಕ್ಕೆ ತಿನ್ನುತ್ತಾಳೆ. ಆಕೆ ಸರಿಯಾಗಿ ಊಟ ಮಾಡುವುದು ರಾತ್ರಿ ಒಂದು ಹೊತ್ತು ಮಾತ್ರ.

ವಿನಯಾ ಸರ್ಕಾರಿ ಕಛೇರಿಯೊಂದರಲ್ಲಿ ಅಧಿಕಾರಿ. ಬೆಳಿಗ್ಗೆ ಐದು ಗಂಟೆಗೆ ಎದ್ದರೂ ಸಮಯ ಸಾಲದು. ಗಂಡ ಯಾವುದನ್ನೂ ತಲೆಗೆ ಹಚ್ಚಿಕೊಳ್ಳುವುದಿಲ್ಲ. ಕಾಫಿ ಕುಡಿದು ವರ್ತಮಾನ ಪತ್ರಿಕೆ ಓದಲು ತೊಡಗಿದರೆ ಮುಗಿಯಿತು. ಈಕೆ ಏನಾದ್ರೂ ಹೇಳಿದ್ರೆ ರಾದ್ಧಾಂತ. ಆಕೆ ಬೆಳಗಿನ ಉಪಾಹಾರವನ್ನು ತುದಿಗಾಲಲ್ಲಿ ನಿಂತೇ ತಿಂದು ಹೊರಡುತ್ತಾಳೆ. ಅಸಂಘಟಿತ ಕ್ಷೇತ್ರದಲ್ಲಿ ದುಡಿಯುವ ವಿಶೇಷವಾಗಿ ಗಾರ್ಮೆಂಟ್ಸ್‌ನಲ್ಲಿ ದುಡಿಯುವ ಹೆಣ್ಣುಮಕ್ಕಳು ರಾತ್ರಿ ಉಳಿದ ಅನ್ನವನ್ನು ಕಲಸಿಕೊಂಡೊ ಅದಕ್ಕೆ ಒಗ್ಗರಣೆ ಹಾಕಿಕೊಂಡೊ ಮನೆ ಬಿಡುತ್ತಾರೆ. ಪಡೆಯುವ ವೇತನದಲ್ಲಿ ಸಂಸಾರವನ್ನು ನಿಭಾಯಿಸಿದರೆಸಾಕೆನ್ನುವ ಸ್ಥಿತಿಯಲ್ಲಿ ಅವರಿರುವುದರಿಂದ ಪೌಷ್ಠಿಕ ಆಹಾರವನ್ನು ಅವರು ತೆಗೆದುಕೊಳ್ಳುವುದು ಕನಸಿನ ಮಾತು.

ಮಹಿಳೆಯರು ತಾವು ಹಸಿವೆಯಿಂದ ಇದ್ದರೂ, ಗಂಡ ಹಾಗೂ ಮಕ್ಕಳಿಗೆ ಊಟದ ವ್ಯವಸ್ಥೆಯಲ್ಲಿ ತ್ಯಾಗದ ಮನೋಭಾವನೆಯನ್ನು ಹೊಂದಿರುತ್ತಾರೆ. ಇವೆಲ್ಲಾ ಅವರ 'ತಾಯ್ತನ' ವನ್ನು ವಿಜೃಂಭಿಸುವ ಲೆಕ್ಕಾಚಾರಕ್ಕೆ ಜಮಾ ಆಗುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ಕೆಲವು ತರಬೇತಿಗಳಲ್ಲಿ ಭಾಗವಹಿಸುವ ಹೆಣ್ಣು ಮಕ್ಕಳಿಗೆ ಬಾಳೆಹಣ್ಣು, ಬಿಸ್ಕತ್ ನೀಡಿದರೆ ಸಾಮಾನ್ಯವಾಗಿ ಅವರು ಅವುಗಳನ್ನು ತಿನ್ನದೆ ಮಕ್ಕಳಿಗಾಗಿ ಮನೆಗೆ ತೆಗೆದುಕೊಂಡು ಹೋಗುತ್ತಾರೆ. ನೀವೂ ಸ್ವಲ್ಪ ತಿನ್ನಿ ಎಂದು ಒತ್ತಾಯ ಮಾಡಿದರೂ ಅವರು ತಿನ್ನುವುದಿಲ್ಲ. ಅದೇ ಪುರುಷರು, ತಕ್ಷಣ ತಿನ್ನುತ್ತಾರೆ. ಒಂದು ಕುಂಟುಬದಲ್ಲಿ ಊಟದ ವ್ಯವಸ್ಥೆಯಲ್ಲೂ ಪುರುಷ ಪ್ರಧಾನ ಮೌಲ್ಯಗಳು ಹೆಣೆದುಕೊಂಡು,

ಅವು ದೈನಂದಿನ ಜೀವನದ ಅವಿಭಾಜ್ಯ ಅಂಗಗಳಾಗಿವೆ. ಹೆಣ್ಣು ಮಕ್ಕಳು ಕೊನೆಯಲ್ಲಿ ಊಟ ಮಾಡುವ ವಿಚಾರವನ್ನೂ ಪುರುಷರೊಂದಿಗೆ ಚರ್ಚಿಸಿದರೆ, ಸಾಮಾನ್ಯವಾಗಿ ಒಂದು ಪ್ರತಿಕ್ರಿಯೆ ಕಂಡುಬರುತ್ತದೆ. "ಅಯ್ಯೋ ಬಿಡಿ ಈಗ ಹೆಂಗಸರು ತುಂಬಾ ಮುಂದುವರೆದಿದ್ದಾರೆ, ಬಿಸಿ ಬಿಸಿ ಅಡುಗೆ ಮಾಡಿ ಮೊದಲು ಅವರು ಊಟ ಮಾಡ್ತಾರೆ. ನಂತರ ನಮಗೆ ಬಡಿಸುತ್ತಾರೆ. ಗಂಡ ಬರುವವರೆಗೂ ಅವರು ಕಾಯುವುದಿಲ್ಲ" ಎಂದು ವ್ಯಂಗ್ಯವಾಗಿ ನುಡಿಯುತ್ತಾರೆ.

ಬಾಲ್ಯದಿಂದ ಪ್ರಾರಂಭವಾಗುವ ಅಪೌಷ್ಟಿಕತೆಯನ್ನು ವಯಸ್ಸಾಗುವವರೆಗೆ ಮಹಿಳೆ ಎದುರಿಸುತ್ತಾಳೆ. ಇದೊಂದು ವ್ಯವಸ್ಥಿತವಾದ ಸಾಂಸ್ಕೃತಿಕ, ಹಾಗೂ ಸಾಮಾಜಿಕ ಶೋಷಣೆ. ಪುರುಷ ಪ್ರಧಾನ ಸಮಾಜದ ಮೌಲ್ಯಗಳು ಮಹಿಳೆಯರ ದೈನಂದಿನ ಬದುಕಿನ ಬಹುಮುಖ್ಯವಾದ ಆರೋಗ್ಯದ ಮೇಲೆ ಪರಿಣಾಮವನ್ನು ಬೀರುತ್ತವೆ. ನಮ್ಮ ದೇಶದಲ್ಲಿ ಏಡ್ಸ್, ಕ್ಯಾನ್ಸರ್ ನಂತಹ ಕಾಯಿಲೆಗಳು ಮಾರಣಾಂತಿಕ ರೋಗಗಳೆಂದು ಕೋಟ್ಯಂತರ ರೂಗಳನ್ನು ವೆಚ್ಚಮಾಡಲಾಗುತ್ತದೆ. ಪ್ರಚಾರ ನೀಡಲಾಗುತ್ತದೆ. ಇದಕ್ಕಿಂತ ಮುಖ್ಯ ಕಾಯಿಲೆ ಮಹಿಳೆಯರಲ್ಲಿನ ರಕ್ತಹೀನತೆ.

ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಮಹಿಳೆಯರ ಹಾಗೂ ಮಕ್ಕಳ ಅಭಿವೃದ್ಧಿಗಾಗಿ ಡಿ.ಸಿ.ಡಿ.ಎಸ್ ನಂತಹ ಹಾಗೂ ಇನ್ನಿತರ ಯೋಜನೆಗಳನ್ನು ಜಾರಿಗೆ ತಂದಿವೆ. ಭಾರತದ ಎಲ್ಲಾ ರಾಜ್ಯಗಳಲ್ಲೂ ಅಂಗನವಾಡಿಯ ಮುಖಾಂತರ ಇದನ್ನು ಜಾರಿಗೆ ತುರುತ್ತಿವೆ. ಈ ಕಾರ್ಯಕ್ರಮಗಳು ಜಾರಿಗೆ ಬಂದ ನಂತರ ಮಹಿಳೆ ಹಾಗೂ ಮಕ್ಕಳ ಸ್ಥಿತಿ ಗತಿಗಳಲ್ಲಿ ಸಾಕಷ್ಟು ಪರಿಣಾಮಕಾರಿ ಬೆಳವಣಿಗೆಗಳು ಕಂಡುಬರುತ್ತಿವೆ. ಆದರೆ ಉತ್ತರ ಭಾರತದ ಬಿಹಾರ ಹಾಗೂ ಛತ್ತೀಸ್‌ಘಡ ದಂತಹ ರಾಜ್ಯಗಳು ಅತ್ಯಂತ ಹಿಂದುಳಿದಿರುವುದನ್ನು ನೋಡ ಬಹುದು. ತಮಿಳುನಾಡು ಹಾಗೂ ಕೇರಳದಲ್ಲಿ ಈ ಕಾರ್ಯಕ್ರಮ ಗಳನ್ನು ಯಶಸ್ವಿಯಾಗಿ ಜಾರಿಗೆ ತಂದಿರುವುದನ್ನೂ ಕಾಣ ಬಹುದು.

ಈ ಯೋಜನೆಗಳು ಹಾಗೂ ಕಾರಣಗಳ ಹಿಂದಿರುವ ಧೋರಣೆಗಳನ್ನೂ ಸಹ ವಿಶ್ಲೇಷಿಸಬೇಕಾಗುತ್ತದೆ. ಇದು ಮಹಿಳೆಯರಿಗೆ ಹಾಗೂ ಮಕ್ಕಳಿಗೆ ನೀಡುತ್ತಿರುವ ಒಂದು ಸೇವೆ, ಸೌಲಭ್ಯವೆಂಬ ಧೋರಣೆಯನ್ನು ಸರ್ಕಾರ, ಅಧಿಕಾರಶಾಹಿ ಹಾಗೂ ಜನರೂ ಹೊಂದಿದ್ದಾರೆ. ಇಂತಹ ಧೋರಣೆಯಲ್ಲಿ ಮೂಲಭೂತವಾದ ಬದಲಾವಣೆಯಾಗಬೇಕು. ಇಂತಹ ಸೌಲಭ್ಯವನ್ನು ಪಡೆಯುವುದು ಮಹಿಳೆಯರ ಹಕ್ಕು. ಈ ಹಿನ್ನೆಲೆಯಲ್ಲಿ ಯೋಜನೆಗಳು ಹಾಗೂ ಕಾರ್ಯಕ್ರಮಗಳು ರೂಪಿತವಾಗಬೇಕು. ಇಂತಹ ಸೌಲಭ್ಯಗಳನ್ನು ಒದಗಿಸಿ ಕೊಡುವುದು ಸರ್ಕಾರದ ಕರ್ತವ್ಯ. ಮಕ್ಕಳನ್ನು ಹೆರುವುದು, ಪಾಲನೆ, ಪೋಷಣೆ ಮಾಡುವುದು ಮಹಿಳೆಯರ ಬದುಕಿನ ಖಾಸಗಿ ಸಂಗತಿಗಳೆಂದು ಪರಿಗಣಿಸಲ್ಪಟ್ಟಿವೆ. ಇದು ಸಾಮಾಜಿಕ ಸ್ವರೂಪವನ್ನು ಪಡೆದಾಗ ಮಾತ್ರ ಅವಳ ಸ್ಥಾನ–ಮಾನದಲ್ಲಿ ಗಣನೀಯ ಬದಲಾವಣೆಯಾಗಲು ಸಾಧ್ಯ. ಸಾಮಾಜಿಕ ಜವಾಬ್ದಾರಿ, ಸಾಮಾಜಿಕ ಜಾಗೃತಿ ಒಂದು ಕಮ್ಯುನಿಟಿಯ (ಸಮುದಾಯದ) ಅವಿಭಾಜ್ಯ ಅಂಗವಾಗಬೇಕಾಗಿದೆ.

ಹಾಗಾದಾಗ ಮಾತ್ರ ಸಮಾನತೆಯ ಹೊಸ ಸಮಾಜದ ನಿರ್ಮಾಣ ಸಾಧ್ಯವಾಗುತ್ತದೆ. ❑

ನೀವೂ ಓದಿ

# ನನ್ನೊಳಗಿನ ನಿನ್ನ ಕಥೆಗಳು

● *ಹೆಚ್.ಎಸ್. ರಾಜೇಶ್ವರಿ*

**ಪಿ.** ಚಂದ್ರಿಕಾರವರ 'ನನ್ನೊಳಗಿನ ನಿನ್ನ ಕಥೆಗಳು' ಜೀವನ ಮುಖಿಯಾದ ಮಿಂಚಿನ ಕಥಾಗುಚ್ಛ. 'ಮಿಂಚು' ಒಂದು ಕ್ಷಣದಲ್ಲಿ ಮಿಂಚಿ ಕಣ್ಣಿಂದ ಮರೆಯಾದರೂ ಮನಸ್ಸಿನಲ್ಲಿ ನೆಲೆಯೂರಿ ನೆನಪಿನ ಮೂಟೆಯನ್ನು ಸೇರುತ್ತದೆ. 'ನನ್ನೊಳಗಿನ ನಿನ್ನ ಕಥೆಗಳು' ಕೆಲವೊಮ್ಮೆ ಕಾವ್ಯವಾಗಿ ಕಾವ್ಯದ ಎಳೆಗಳನ್ನು ಹೆಣೆಯುತ್ತದೆ. ಕಥೆಗಳಾಗಿಯೂ ಕಾಡುತ್ತವೆ, ನಗು ಹುಟ್ಟಿಸುತ್ತವೆ, ಗೇಲಿ ಮಾಡುತ್ತವೆ, ಪ್ರಶ್ನಿಸುತ್ತವೆ, ತುಡಿಯುವಂತೆ ಮಾಡುತ್ತವೆ. ಜೀವನದ ವಿವಿಧ ಮುಖದ ವಾಸ್ತವತೆಯತ್ತ ಸಹ ನಮ್ಮನ್ನು ಎಳೆಯುತ್ತವೆ.

'ನಾಕು ತಂತಿ' ಪ್ರಕಾಶನದ ಮೊದಲ ಪ್ರಕಟಣೆ ಚಂದ್ರಿಕಾರವರ "ನನ್ನೊಳಗಿನ ನಿನ್ನ ಕಥೆಗಳು". ಪ್ರಕಾಶಕರಿಗೆ ಧಾರಾವಾಹಿ ಲೋಕದ ಯಾಂತ್ರಿಕತೆಯ ಬಿಡುಗಡೆಯ ಹಾದಿಯೆಂಬಂತೆ, ಓದು ಸಂಸ್ಕೃತಿಗಾಗಿ ಈ ಕೊಡುಗೆ.



**ನನ್ನೊಳಗಿನ ನಿನ್ನ ಕಥೆಗಳು**
ಲೇ : ಪಿ. ಚಂದ್ರಿಕಾ
ನಾಕುತಂತಿ ಪ್ರಕಾಶನ
ಬನಶಂಕರಿ 2ನೇ ಹಂತ
ಬೆಂಗಳೂರು–560040
ಬೆಲೆ : ರೂ. 120/-

"ನಾನು ಎಲ್ಲರೂ ಆಗಿ, ಸಮಷ್ಟಿಯ ಧ್ವನಿಯಾಗಿ ಬರೆಯುವ ಎಲ್ಲವೂ ಎಲ್ಲರದ್ದೂ ಆಗಿರುತ್ತದೆ". ಚಂದ್ರಿಕಾರವರ ಈ ಮಾತು ಪ್ರಸ್ತುತ ಸಂದರ್ಭದಲ್ಲಿ ಅರ್ಥಪೂರ್ಣ ವಾಗಿರುವುದರ ಜೊತೆಗೆ ಸೃಜನಶೀಲತೆಯ ಮೂಲದ ಬಗ್ಗೆಯು ಹೊಳವನ್ನು ನೀಡುತ್ತದೆ. ಉತ್ತಮ ರೇಖಾಚಿತ್ರವನ್ನೊಳಗೊಂಡ ಪುಸ್ತಕದ ಬಗ್ಗೆ ನಾವು ಹೇಳುವುದಕ್ಕಿಂತ ಹೆಚ್ಚಾಗಿ ಕಥೆಗಳೇ ಹೇಳಬೇಕಾಗಿರುವುದನ್ನು ಹೇಳುತ್ತವೆ.

ಉದಾಹರಣೆಗೆ :

**ಕಾರುಣ್ಯ**

ಕಟುಕನೊಬ್ಬ ಮಾಂಸವನ್ನು ಕತ್ತರಿಸುತ್ತಿದ್ದ. ಅವನ ಕಾಠಿಣ್ಯತೆಗೆ ಜಗತ್ತೆ ನಿಬ್ಬೆರಗಾಗಿತ್ತು. ಅವನ ಪುಟ್ಟಮಗು ಅಂಬೆಗಾಲಿಡುತ್ತಾ ಆಡುತ್ತಾ ಅವನ ಹತ್ತಿರಕ್ಕೆ ಬಂತು. ಅದನ್ನು ಗಮನಿಸದೆ ತಾದಾತ್ಮ್ಯದಲ್ಲಿ ಮಾಂಸ ಕತ್ತರಿಸುತ್ತಲೇ ಇದ್ದ. ಮಗು ಅಪ್ಪನ ಕೈಹಿಡಿದು ಮಾತನಾಡಿಸು ಎಂಬಂತೆ ಕೇಳಿತು. ಮಾಂಸ ಕತ್ತರಿಸುವ ಕತ್ತಿ ಮಗುವಿನ ಬೆರಳ ತುದಿಗೆ ತಾಕಿತು. ಮಗು ಅತ್ತಿತು. ಒಂದುಕ್ಷಣ ಜಗತ್ತಿನ ಕಾರುಣ್ಯವೆಲ್ಲಾ ಅವನ ಮುಖದಲ್ಲಿ ತುಂಬಿ, 'ಅಯ್ಯೋ ನನ್ನ ಮಗುವೇ ಪೆಟ್ಟಾಯಿತೇ' ಎಂದು ಕೇಳಿದ.

**ಥೇಟ್ ಅಪ್ಪ**

ನಾಟಕಕಾರನೊಬ್ಬ ತನ್ನ ಪಾತ್ರಕ್ಕೆ ರಂಗು ತುಂಬಿದ್ದ. ಅದರಲ್ಲಿನ ಮುಖ್ಯಪಾತ್ರವನ್ನು ಬೇರೆಯವರು ಕೆಡಿಸಿಯಾರು ಎಂದು ತಾನೇ ನಟಿಸುತ್ತಿದ್ದ. ಅದು ಹೆಂಡತಿಯನ್ನು ನೋಯಿಸುವ ದುಷ್ಟಪಾತ್ರ. ನಾಟಕ ನೋಡಿ ಎಲ್ಲರೂ 'ಅದ್ಭುತವಾಗಿದೆ' ಎಂದರು. ಅವನ ಪುಟ್ಟ ಮಗು ಮಾತ್ರ ಹೇಳಿತು 'ಇದು ಥೇಟ್ ನನ್ನ ಅಪ್ಪನ ಹಾಗೇ ಇದೆ'.

**ನದಿ**

ಆ ಸ್ಮಶಾನದ ಕಡೆಯಿಂದ ಹರಿದು ಬಂದ ಆ ನದಿಯಲ್ಲಿ ಅತ್ಯಾಚಾರಕ್ಕೆ ಒಳಗಾಗಿ ಸತ್ತ ಸಾವಿರಾರು ಹೆಣ್ಣುಗಳ ಮಜ್ಜೆ ಕೆನೆಗಟ್ಟಿ ತೇಲುತ್ತಿತ್ತು.

**ಕಡಲೇಬೀಜವೇ**

ಒಬ್ಬ ಸ್ತ್ರೀವಾದೀ ಪುರುಷನಿದ್ದ. ಅವನಿಗೆ ಪ್ರೀತಿಸಿ ಮದುವೆಯಾದ ಹೆಂಡತಿಯಿದ್ದಳು. ಒಮ್ಮೆ ಅವರಿಬ್ಬರ ಮಧ್ಯೆ ಜಗಳ ಆಗುತ್ತದೆ. ಅವನು ಹಮ್ಮಿನಿಂದ ಹೇಳುತ್ತಾನೆ 'ನಿನಗೆ ಸ್ವಾತಂತ್ರ್ಯ ಕೊಟ್ಟಿದ್ದೇನೆ ನೀನು ಏನು ಮಾಡಲೂ ಶಕ್ಯಳಿದ್ದೀಯ'. ಹೆಂಡತಿಗೆ ನೋವಾಗುತ್ತದೆ. ಅವಳು ಹೇಳುತ್ತಾಳೆ 'ಸ್ವಾತಂತ್ರ್ಯ ಕೊಟ್ಟೆ ಎಂದೆಯಲ್ಲಾ! ಕೊಡಲು ಅದೇನು ಕಡಲೇಬೀಜವೇ?' ❑

# ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ, ಮಂಡ್ಯ

ದಿನಾಂಕ 24 ಹಾಗೂ 25ರ ನವೆಂಬರ್ 2007ರಂದು ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು ಹಾಗೂ ಸ್ವಾಗತ ಸಮಿತಿ ಮಂಡ್ಯದವರು ಯೋಜಿಸಿದ 6ನೇ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ ಮಂಡ್ಯದಲ್ಲಿ ಅದ್ದೂರಿಯಾಗಿ ನಡೆಯಿತು. ಸಂಚಿ ಹೊನ್ನಮ್ಮ ವೇದಿಕೆಯಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಸಮ್ಮೇಳನದ ರೂವಾರಿ ಎನಿಸಿಕೊಂಡ ಶಾಸಕ ಎಂ.ಶ್ರೀನಿವಾಸ್‌ರವರು ಲೇಖಕಿಯರಿಗೆ, ಅಲ್ಲಿ ಸೇರಿದ್ದ ರಾಜಕಾರಣಿಗಳಿಗೆ ಹಾಗೂ ಇತರರಿಗೆ ಸ್ವಾಗತ ಕೋರಿದರು. (ಅಂದಾಜು 12ಲಕ್ಷ ರೂ ವೆಚ್ಚದ ಈ ಸಮ್ಮೇಳನಕ್ಕೆ ಇವರೇ ಆಧಾರವಾಗಿದ್ದರು ಎಂದು ಹೇಳಲಾಗಿದೆ). ಇದಕ್ಕೆ ಮೊದಲು ಸಮ್ಮೇಳನಾಧ್ಯಕ್ಷರನ್ನು ನಗರದ ಸಿಲ್ವರ್ ಜುಬಿಲಿ ಪಾರ್ಕ್‌ನಿಂದ ರೈತ ಸಭಾಂಗಣದ ಅವರಣದಲ್ಲಿ ನಿರ್ಮಿತವಾದ ಸಂಚಿ ಹೊನ್ನಮ್ಮ ವೇದಿಕೆಗೆ ವಿವಿಧ ಜಾನಪದ ತಂಡದ ಕುಣಿತಗಳೊಂದಿಗೆ ಕರೆತರಲಾಯಿತು. ಎಂ.ಶ್ರೀನಿವಾಸ್‌ರವರು ಸ್ವಾಗತ ಕೋರಿದ ಮೇಲೆ 'ಹಚ್ಚೇವು ಕನ್ನಡದ ದೀಪ', ಹಾಡಿನೊಂದಿಗೆ ಪ್ರಾರಂಭವಾಯಿತು. ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಜಿ.ನಾರಾಯಣ್‌ರವರು ಲೇಖಕಿಯರ ಸಂಘ ಅಸ್ತಿತ್ವಕ್ಕೆ ಬರುವಲ್ಲಿ ವಹಿಸಿದ ಮುಖ್ಯ ಪಾತ್ರವನ್ನು ವೇದಿಕೆಯಲ್ಲಿ ಬಹಳ ಮಂದಿ ಗಣ್ಯರು ನೆನಪಿಸಿಕೊಂಡರು. ಪ್ರಾಸ್ತಾವಿಕ ನುಡಿಯಾಡಿದ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಕೆ.ಆರ್.ಸಂಧ್ಯಾರೆಡ್ಡಿಯವರು'ಲೇಖಕಿಯರ ಸಂಘಧ ಚರಿತ್ರೆಯನ್ನು ಕುರಿತು ಮಾತನಾಡಿದರು.ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಜಿ.ನಾರಾಯಣರು ಜಾನಪದ ಕ್ಷೇತ್ರದಲ್ಲಿ ಮಹಿಳೆಯರು ಸಲ್ಲಿಸಿರುವ ಕೊಡುಗೆಯನ್ನು ಕುರಿತು ಮಾತನಾಡಿದರು. ಜಾನಪದ ಸಾಹಿತ್ಯದ ಪ್ರಕಾರಗಳನ್ನು ಲೇಖಕಿಯರು ಇಂದು ಬಳಸಿಕೊಳ್ಳಬೇಕಾಗಿದೆ ಎಂದೂ ನುಡಿದರು. ಸ್ತ್ರೀಯರ ಅಭಿವೃದ್ಧಿ ಯೋಜನೆಗಳನ್ನು ಕುರಿತು ಗ್ರಾಮೀಣ ಮಹಿಳೆಯರಲ್ಲಿ ಅರಿವು ಮೂಡಿಸಬೇಕು, ಗ್ರಾಮೀಣ ಮಹಿಳೆಯರನ್ನು ಒಳಗೊಂಡು ಇಂತಹ ಕಾರ್ಯಕ್ರಮಗಳು ನಡೆಯಬೇಕು ಎಂದೂ ಅಭಿಪ್ರಾಯಪಟ್ಟರು.

ಸಮ್ಮೇಳನದ ಅಧ್ಯಕ್ಷೆಯಾದ ನೀಳಾದೇವಿ ಮನಸ್ಸಿನ ಹಿತ, ನೆಮ್ಮದಿಗಾಗಿ ತಾವು ಬರವಣಿಗೆ ಹಮ್ಮಿಕೊಂಡುದಾಗಿ ನುಡಿದರು. ತಮ್ಮ ಹಾಗೂ ಇತರ ಲೇಖಕಿಯರ ಸಾಹಿತ್ಯವನ್ನು ಅಡುಗೆಮನೆಯ ಸಾಹಿತ್ಯ ಎಂದು ಹೀಯಾಳಿಸಿದ ಸಂದರ್ಭದಲ್ಲೂ ತಾವು ಧೃತಿಗೆಡದಿರುವುದನ್ನು ಅವರು ಜ್ಞಾಪಿಸಿಕೊಂಡರು. ಈಗಿನ ಲೇಖಕಿ ಪ್ರಚಲಿತ ವಿದ್ಯಾಮಾನಗಳನ್ನು ಮೈಗೂಡಿಸಿಕೊಂಡು ಬರೆಯುತ್ತಿದ್ದಾಳೆ. ಕಲ್ಪನೆ ಮತ್ತು ವಾಸ್ತವ ಮಿತವಾಗಿ ಮೇಳೈಸಿದರೆ ಮಾತ್ರ ಒಳ್ಳೆಯ ಸಾಹಿತ್ಯ ಸಾಧ್ಯ ಎಂದು ಅಭಿಪ್ರಾಯಪಟ್ಟರು. ಗ್ರಾಮೀಣ ಮಹಿಳೆಯ ಉಸಿರಿನಲ್ಲೇ ಸಾಹಿತ್ಯ ಅಡಗಿದೆ, ಅದರ ಅಭಿವ್ಯಕ್ತಿ ಭಿನ್ನ ಭಿನ್ನ ಪ್ರಕಾರಗಳಲ್ಲಿ ಅಗಬೇಕು ಎಂದು ನುಡಿದರು.

ಮಂಡ್ಯ ಜಿಲ್ಲಾ ಸ್ಮರಣ ಸಂಚಿಕೆ 'ಸ್ತ್ರೀ ವಿಮುಕ್ತಿ ಚಿಂತನೆ ಒಂದು ಅಧ್ಯಯನ' 'ವಿಶೇಷ ಲೇಖಕಿ' 'ನಮ್ಮ ಬದುಕಿನ ಪುಟಗಳು' ಗಳೊಂದಿಗೆ ಇನ್ನೂ ಅನೇಕ ಲೇಖಕಿಯರ ಕೃತಿಗಳು ಇಲ್ಲಿ ಬಿಡುಗಡೆಯಾದವು. ಬಾನು ಮುಷ್ತಾಕ್ ಸೆನ್ಸಾರ್ ಶಿಪ್ ವಿರುದ್ಧ, ಧರ್ಮದ ರಾಜಕಾರಣದ ವಿರುದ್ಧ ಮಹಿಳೆಯರು ಹೋರಾಡುವ ಅಗತ್ಯವನ್ನು ಕುರಿತು ಮಾತನಾಡಿದರೆ–ಸಾರಾ ಅಬೂಬಕರ್, ತಸ್ಲೀಮಾ ನಜರೀನ್ ಕುರಿತು, ಮೂಲಭೂತವಾದದ ವಿರುದ್ಧ ನಾವು ಹೋರಾಡಬೇಕಾದ, ಧ್ವನಿ ಎತ್ತಬೇಕಾದುದರ ಕುರಿತು ಮಾತನಾಡಿದರು.

ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಮಹಿಳೆಯರು ಜಾನಪದ ಸಾಹಿತ್ಯದಲ್ಲಿ ಸಲ್ಲಿಸಿದ ಕೊಡುಗೆಯನ್ನು ಸ್ಮರಿಸಿದರು. ಇರಾನ್, ಇರಾಕ್‌ಗಳ ರಾಜಕೀಯ ಬಿಕ್ಕಟ್ಟಿನೊಳಗೆ ರಚಿತವಾದ ಲೇಖಕಿಯ ಬರಹವೊಂದನ್ನು ಓದಿದರು. ಶಾಂತಾನಾಗರಾಜ್ ಗಂಡು ಮಕ್ಕಳ ಹಿಂಸಾವಾದಿಗಳಾಗದಂತೆ ಬೆಳೆಸಬೇಕು ಎಂದು ಮಹಿಳೆಯರಿಗೆ ಕರೆಕೊಟ್ಟರು. ವಿಧಾನ ಪರಿಷತ್ತಿನ ಸದಸ್ಯೆ ಮಹಿಳೆಯರ ಪ್ರಗತಿಯನ್ನು ಕುರಿತು ಮಾತನಾಡಿದರು.

ಗೋಷ್ಠಿ–1ರಲ್ಲಿ ಕೌಟುಂಬಿಕ ಮತ್ತು ಸಾಮಾಜಿಕ ನೆಲೆಯಲ್ಲಿ ದೌರ್ಜನ್ಯ ಕುರಿತು ಮಾತನಾಡಿದ ಡಾ. ಮೀನಾಕ್ಷಿಬಾಳಿ ಗಂಡು–ಹೆಣ್ಣಿನ ನಡುವಿನ ಅಸಮಾನತೆಯನ್ನು, ಕೋಮುದೌರ್ಜನ್ಯವನ್ನು, ವಿಧವೆಯರ ಸಮಸ್ಯೆಯನ್ನು ಕುರಿತು ಮಾತನಾಡಿದರು. ಕಾಶಿ, ಮಥುರಾದಲ್ಲಿ ಗೋಮಾತೆ ಅಂತ ಪೂಜಿಸ್ತಾರೆ. ಗೋ–ಪಿತಾ ಅಂತ ಯಾರೂ ಇಲ್ಲವಾ ಅಂತ ವಿಡಂಬನೆ ಮಾಡಿದರು. ಶ್ರೀಲತಾರು ಮಹಿಳೆಯರ ಸ್ಥಿತಿ–ಗತಿ ಕುರಿತು, ಮಹಿಳೆ ಮತ್ತು ಕಾನೂನನ್ನು ಕುರಿತು ಮಾತನಾಡಿದರು. ಈ ಗೋಷ್ಠಿ ಹಲವಾರು ಲೇಖಕಿಯರ ಪ್ರತಿಕ್ರಿಯೆಯನ್ನು ಒಳಗೊಂಡಿತ್ತು. ಡಾ. ಸಬಿಹಾ ಭೂಮಿಗೌಡ ಈ ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದರು. ಕಾವ್ಯ–ಗೀತೆ –ಚಿತ್ರದಲ್ಲಿ ಲಯಕ್ಕನುಗುಣವಾಗಿರುವ ಹಲವಾರು ಕವನಗಳನ್ನು ಲೇಖಕಿಯರು ಓದಿದ್ದಲ್ಲದೇ–ಇವುಗಳನ್ನು ಹಾಡುವ ಮೂಲಕ ಗಾಯಕಿಯರು ರಂಜಿಸಿದರೆ, ಡಾ! ಪ್ರಭಾಶಂಕರ್ ಈ ಕವನಗಳಿಗೆ ಚಿತ್ರ ರಚಿಸಿದರು.

ನವಂಬರ್ 25ರಂದು "ಆಧುನಿಕೋತ್ತರ ಮಹಿಳಾ ಸಾಹಿತ್ಯ ಗೋಷ್ಠಿಯಲ್ಲಿ" ಎಲ್.ಜಿ.ಮೀರ ಕಾವ್ಯ ಕುರಿತು, ಶ್ರೀಮತಿ ಎಸ್ ಪ್ರಭಾವತಿ ಕಥಾ ಸಾಹಿತ್ಯ ಕುರಿತು, ಕೆ.ಎಂ.ಜಯಲಕ್ಷ್ಮಿ ಇತರ ಪ್ರಕಾರ ಕುರಿತು ಮಾತನಾಡಿದರು. ಸವಿತಾ ನಾಗಭೂಷಣ್ ಈ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು.

'ಮಂಡ್ಯ ಜಿಲ್ಲೆ ಮತ್ತು ಮಹಿಳೆ' ಗೋಷ್ಠಿಯಲ್ಲಿ ಕೆ.ಜಿ. ಉಷಾರಾಣಿ ಮಂಡ್ಯದ ಮಹಿಳಾ ರಾಜಕಾರಣಿಗಳು ಹಾಗೂ ಸಾಮಾಜಿಕ ಕಾರ್ಯಕರ್ತೆಯರನ್ನು ಕುರಿತು ಮಾತನಾಡಿದರೆ. ಕೆ.ಸಿ. ಜಯಶೀಲ ಮಂಡ್ಯದ ಮಹಿಳೆಯರ ಮೂಢನಂಬಿಕೆಯ ಆಚರಣೆಯನ್ನು ಹಾಗೂ ಶ್ರೀಮತಿ ಅನಸೂಯ ಮಹಿಳೆಯರ ಶಿಕ್ಷಣ, ಉದ್ಯೋಗ ಕುರಿತು ಮಾತನಾಡಿದರು. ಸುನಂದ ಜಯರಾಂ ಅಧ್ಯಕ್ಷೀಯ ಭಾಷಣ ಮಾಡಿದರು.

ಶ್ರೀಮತಿ ಶಶಿಕಲಾ ವೀರಯ್ಯಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕವಿಗೋಷ್ಠಿಯಲ್ಲಿ ಸುಮಾರು ಇಪ್ಪತ್ತಕಿಂತ ಹೆಚ್ಚು ಕವಯಿತ್ರಿಯರು ತಮ್ಮ ಕವನ ವಾಚನ ಮಾಡಿದರು.

6ನೇ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ ಅನೇಕ ಹಿರಿಯ ಲೇಖಕಿಯರಿಗೆ, ಮಂಡ್ಯ ಜಿಲ್ಲೆಯ ಸಾಧಕಿಯರಿಗೆ ಸನ್ಮಾನ ಸಮಾರಂಭವನ್ನು ಕೂಡಾ ಹಮ್ಮಿಕೊಂಡಿತ್ತು.

*–ಚಂಪಾವತಿ*

# ಮಹಿಳಾ ಸಾಹಿತ್ಯ ಸಮ್ಮೇಳನಗಳು; ಒಂದು ಮರುಚಿಂತನೆ

● ಬೀನಸು

ಕಳೆದ ಶತಮಾನದ ಎಂಬತ್ತರ ದಶಕದ ಆರಂಭದ ಹೊತ್ತಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನಗಳೊಳಗೆ ಮಹಿಳಾಸಾಹಿತ್ಯದ ಚರ್ಚೆಗೇ ಮೀಸಲಾದ 'ಮಹಿಳಾ ಗೋಷ್ಠಿ'ಗಳನ್ನು ಜೋಡಿಸುವುದು ರೂಢಿಗೆ ಬಂದಿತ್ತು. ಸಾಹಿತ್ಯ-ಸಾಂಸ್ಕೃತಿಕ ವಿದ್ಯಮಾನಗಳು, ಭಾಷೆ, ಪ್ರಾಂತ ಮುಂತಾದ "ಗಂಭೀರ" ಚರ್ಚೆಗಳಿರುವ ಗೋಷ್ಠಿಗಳಿಗೆಲ್ಲ ಪುರುಷರನ್ನು ಒಳಗೊಳ್ಳುವುದು, ಇವುಗಳ ಮಗ್ಗುಲಲ್ಲಿ ಯಾರೂ ಲೆಕ್ಕಕ್ಕೆತಂದುಕೊಳ್ಳದೆ, ಮಹಿಳೆಯರಿಂದ ಮಹಿಳೆಯರಿಗಾಗಿಯೇ ಎಂಬಂತಿರುತ್ತಿದ್ದ ಮಹಿಳೆಯರ ಗೋಷ್ಠಿಗಳಲ್ಲಿ ನಡೆದ ಚರ್ಚೆಗಳಾಗಲಿ, ಇಲ್ಲಿದ್ದ ಮಹಿಳೆಯರು ತಲುಪುತ್ತಿದ್ದ ತೀರ್ಮಾನಗಳಾಗಲೀ ಎಂದೂ ಗಂಭೀರವಾಗಿ ಪರಿಗಣಿತ ವಾದದ್ದಿಲ್ಲ. ಆದರೂ ಮಹಿಳೆಯರ ಬರಹಕ್ಕೂ ಸ್ಥಾನ ಕಲ್ಪಿಸಬೇಕೆಂಬ ಆಶಯವಂತೂ ಇದರ ಹಿಂದೆ ಇತ್ತು.

ಕೇವಲ ಒಂದೊಂದು ಗೋಷ್ಠಿಯಲ್ಲಿ ಹೆಚ್ಚು ಲೇಖಕಿಯರನ್ನು ಒಳಗೊಳ್ಳಲು ಸಾಧ್ಯವಿಲ್ಲ, ಒಟ್ಟಾರೆ ಮಹಿಳಾ ಬರಹಗಳ ವ್ಯಾಪಕವಾದ ಚರ್ಚೆಗೂ ಅವಕಾಶವಿರುವುದಿಲ್ಲ ಎಂಬುದನ್ನು ಅರಿತು ಅಂದಿನ ಕಸಾಪ ಅಧ್ಯಕ್ಷರುಗಳಾಗಿದ್ದ ಶ್ರೀ.ಜಿ. ನಾರಾಯಣ, ಡಾ॥ ಹಾ.ಮಾ. ನಾಯಕ ಹಾಗೂ ಡಾ॥ ಹಂಪನಾ ಅಂಥವರು ಮಹಿಳಾ ಸಾಹಿತ್ಯಕ್ಕಾಗಿಯೇ ಪ್ರತ್ಯೇಕ ಸಮ್ಮೇಳನವನ್ನು ನಡೆಸುವ ಯತ್ನಮಾಡಿದರು. 1976ರಲ್ಲಿ ಮೈಸೂರಿನ ಮಾನಸಗಂಗೋತ್ರಿಯ ಸೆಂಟಿನರಿ ಹಾಲಿನಲ್ಲಿ ಅಖಿಲ ಕರ್ನಾಟಕ ಲೇಖಕಿಯರ ಮೊಟ್ಟ ಮೊದಲ ಸಮ್ಮೇಳನವೊಂದನ್ನು ಅವರುಗಳು ನಡೆಸಿದರು. ಈ ಸಮ್ಮೇಳನದ ವ್ಯವಸ್ಥಾಪಕರೆಲ್ಲ ಪುರುಷರೇ ಆಗಿದ್ದರಾದರೂ ಅವರೇ ನಿರ್ದೇಶಿಸಿದ ಮಾದರಿಗಳಲ್ಲಿ ಸಮ್ಮೇಳನದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದವರೆಲ್ಲ ಮಹಿಳೆಯರಾಗಿದ್ದರು. ಒಟ್ಟಿನಲ್ಲಿ ಇದು ಕಸಾಪ ದ ಸುಪ್ರಸಿದ್ಧ 'ಮಹಿಳಾ ಗೋಷ್ಠಿ'ಯನ್ನೇ ವಿಸ್ತರಿಸಿದ ರೀತಿಯಲ್ಲಿತ್ತು. ಇಂಥ ಸಮ್ಮೇಳನಕ್ಕೆ ನಿರ್ದಿಷ್ಟ ಆಕೃತಿಯಾಗಲಿ, ಆಶಯವಾಗಲಿ ಇಲ್ಲದಿದ್ದುದನ್ನು ಕಂಡು ಪ್ರಗತಿಪರ ಚಿಂತಕಿಯರಾದ ಡಾ॥ ಅನುಪಮಾ ನಿರಂಜನರೂ, ಡಾ॥ ವಿಜಯಾ ದಬ್ಬೆಯವರೂ ಅದರ ವಿರುದ್ಧ ಪ್ರತಿಭಟನೆಯ ಧ್ವನಿಯೆತ್ತಿದ್ದರು. ಆ ಬಗ್ಗೆ ಅನೇಕ ವಾದ-ವಿವಾದಗಳು ನಡೆದವು. ಡಾ॥ ವಿಜಯಾ ದಬ್ಬೆ ತಮ್ಮ ವೈಚಾರಿಕ ನಿಲುವನ್ನು ಖಚಿತಪಡಿದುವುದಕ್ಕಾಗಿ ಪ್ರತ್ಯೇಕ ಲೇಖನವನ್ನೇ ಬರೆಯ ಬೇಕಾಗಿ ಬಂತು.

"ಮ.ಸಾ ಮತ್ತು ಮ.ಸಾ.ಸ, ಕೆಲವು ವಿಚಾರಗಳು" ಎಂಬ ಆ ಪ್ರಸಿದ್ಧ ಲೇಖನ ಮುಖ್ಯವಾಗಿ "ಮಹಿಳಾಸಾಹಿತ್ಯ" ಎಂಬ ಪ್ರತ್ಯೇಕ ಪರಿಗಣನೆಗೂ ಪಿತೃಸಂಸ್ಕೃತಿಯ ಲಿಂಗತಾರತಮ್ಯ ಧೋರಣೆಗೂ ಇರುವ ಸಂಬಂಧವನ್ನು ಗುರುತಿಸುತ್ತದೆ. ಇಂಥ ಲಿಂಗತಾರತಮ್ಯದ ವಿರುದ್ಧವಾದ ತಾತ್ವಿಕ ನಿಲುವೇ ಸ್ತ್ರೀವಾದಿ ದೃಷ್ಟಿಕೋನವೆಂಬುದನ್ನು ಪ್ರತಿಪಾದಿಸುತ್ತದೆ ಹಾಗೂ ಮಹಿಳಾ ಸಾಹಿತ್ಯದ ಅಧ್ಯಯನಗಳಾಗಲೀ ಮಹಿಳಾ ಸಾಹಿತ್ಯ ಸಮ್ಮೇಳನಗಳಾಗಲೀ ಪರಂಪರೆಯಲ್ಲಿ ಚಾರಿತ್ರಿಕವಾಗಿ ಬೇರೂರಿರುವ ಸ್ತ್ರೀಯರನ್ನು ಕುರಿತ ಅಸಮಾನ ಧೋರಣೆ, ನಂಬಿಕೆ ಆಚರಣೆಗಳ ಮೇಲೆ ಬೆಳಕು ಬೀರಬೇಕು; ಆ ಮೂಲಕವಾಗಿ ಸಮಾನತೆಯ ಪರಿಕಲ್ಪನೆಯ ಬಗ್ಗೆ ತಿಳಿವಳಿಕೆ ಉಂಟುಮಾಡುವಂತಾಗಬೇಕು. ಹಾಗೆ ಮಾಡದೆ ಕೇವಲ ಪುರುಷಸಂಸ್ಕೃತಿಯ ಸಂಘ ಸಂಸ್ಥೆಗಳ ಕುರುಡು ಅನುಕರಣೆಗಷ್ಟೇ ಮ.ಸಾ.ಸ ಗಳು ಯತ್ನಿಸಿದರೆ ಈಗಿರುವ ಲಿಂಗ ಅಸಮಾನತೆಯನ್ನೇ ಮುಂದುವರಿಸಲು ಮಾತ್ರ ಅವು ದುಡಿಯು ತ್ತಿರುತ್ತವೆ-ಎಂದು ವಿಜಯಾ ಎಚ್ಚರಿಸಿದ್ದರು. (ನೋಡಿ; ಮಹಿಳೆ ಸಾಹಿತ್ಯ ಸಮಾಜ; ಲೇ: ವಿಜಯಾ ದಬ್ಬೆ, ರಚನಾ ಪ್ರಕಾಶನ, ಪು: 103+111, 1989)

ಲಿಂಗತಾರತಮ್ಯದ ಧೋರಣೆಯಲ್ಲಿನ ಅಮಾನವೀಯ ಲಕ್ಷಣ ಗಳನ್ನು 'ಮಹಿಳಾ ಸಾಹಿತ್ಯ'ದಲ್ಲಿ ಮಾತ್ರ ಗುರುತಿಸದೆ ಸಮಗ್ರ ಸಾಹಿತ್ಯ ದೊಳಗೂ ಅಂತಹ ವೈಲಕ್ಷಣ್ಯಗಳ ಮೇಲೆ ಬೆಳಕು ಬೀರಬೇಕು. ಇದು ನಿಜವಾಗಿ ಅರ್ಥಯುಕ್ತ ಆಗಬೇಕೆಂದರೆ ಇಂಥ ಚರ್ಚೆ-ಜಿಜ್ಞಾಸೆಗಳಲ್ಲಿ ಪುರುಷರೂ ಪಾಲ್ಗೊಳ್ಳುವಂತಾಗಬೇಕು. ಎಲ್ಲಾ ಚರ್ಚೆ, ಅಧ್ಯಯನ, ಚಿಂತನೆಗಳೂ ಸ್ತ್ರೀವಾದಿ ದೃಷ್ಟಿಕೋನದಿಂದ ನಡೆದಾಗ ಮಾತ್ರವೇ ಅಂಥ ಲಿಂಗಭೇದ ವ್ಯವಸ್ಥೆಯ ಅಡಿಪಾಯ ಸಡಿಲಗೊಳ್ಳಲು ಸಾಧ್ಯ ಎಂಬುದನ್ನು ತುಂಬ ಖಚಿತವಾದ ಮಾತುಗಳಲ್ಲಿ ಪ್ರತಿಪಾದಿಸುವ ವಿಜಯಾ ದಬ್ಬೆಯವರ ಆ ಲೇಖನದ, ಹಾಗೆಯೇ ಅದೇ ನಿಟ್ಟಿನಿಂದ ವಿಚಾರಮಾಡುವ ಅನೇಕ ಮಹಿಳಾ ಬರಹಗಾರರು ಪುರುಷರೂಪಿತ ಸಾಹಿತ್ಯ ಸಂಸ್ಥೆಗಳ ಚೌಕಟ್ಟುಗಳನ್ನೂ ಪ್ರಶ್ನಿಸುವಂತಾದದ್ದು ಅಖಿಲ ಕರ್ನಾಟಕ ಲೇಖಕಿಯರ ಸಂಘಧ ಚರಿತ್ರೆಯಲ್ಲಿ ಒಂದು ವಿಶಿಷ್ಟ ಘಟ್ಟವಾಗಿದೆ. ಶ್ರೀಮತಿ ಹೇಮಲತಾ ಮಹಿಷಿ, ಎನ್. ಗಾಯತ್ರಿ, ಶಾಂತಾ ನಾಗರಾಜ್, ನೇಮಿಚಂದ್ರ ರಂಥ ಸಮಾನ ಮನಸ್ಕರೂ ಸ್ತ್ರೀವಾದದ

*ಮಂಡ್ಯದಲ್ಲಿ ಮೂರು ವರುಷ ಬರಗಾಲ ಇತ್ತು. ಆನಂತರ ಒಂದೆರಡು ಹನಿ ಮಳೆ ಬಂತು. ರೈತ ಮಹಿಳೆ ಗೌರಿಯು ಸುನಂದ ಜಯರಾಂರವರ ಬಳಿ ಹೇಳಿದ್ದು: 'ಅಕ್ಕಾ, ಎರೆಡು ಹನಿ ಮಳೆ ಬಂತಲ್ಲ ಸಾಕು, ನನ್ಗೆ ಉದ್ಯೋಗ ಸಿಕ್ತು'. ಮನಸ್ಸಿಗೆ ಮುದ ಕೊಡುವ ನುಡಿ.*

* * *

*ವೇದಿಕೆಯ ಮೇಲಿದ್ದ ಲೇಖಕಿಯರ ಸಮ್ಮೇಳನದ ಬ್ಯಾನರ್‌ನಲ್ಲಿ ರಾಜಕಾರಣಿಗಳ ಚಿತ್ರಗಳು ಅದ್ದೂರಿಯಾಗಿ ವಿಜೃಂಭಿಸುತ್ತಿದ್ದವು. ಕೆಳಗೆ ನಮ್ಮ ಕೆಲವು ಲೇಖಕಿಯರ ಚಿತ್ರಗಳು. ಹೀಗಿದೆ ನೋಡಿ, ನಮ್ಮ ಸ್ವಾಯತ್ತತೆಯ ಚಿತ್ರಣ!*

* * *

*'ಮಂಡ್ಯದವರು ನಾವು ದಿನಕ್ಕೆ 6 ಸಲ ಊಟ ಮಾಡೋಲ್ಲ. ಬರಗಾಲ ಬಂದಾಗ ನಾವು ಎದುರಿಸಿದೀವಿ. ಊಟಕ್ಕೆ ಹೋಗಿ. ಅದ್ರೆ ಇಲ್ಲಿ ಮಾತಾನಾಡುವವರ ಮಾತುಗಳನ್ನು ಕೇಳಿಸಿಕೊಳ್ಳಿ. ಇಲ್ಲಿ ಏನ್ ಮಾತನಾಡ್ತಾರೆ ಅದನ್ನ ಕೇಳಿಸಿಕೊಳ್ಳೋದು ನಮಗೆಲ್ಲರಿಗೂ ಮುಖ್ಯ'. (ಊಟಕ್ಕೆ ಎದ್ದು ಹೋಗುತ್ತಿದ್ದ ಗ್ರಾಮೀಣ ಮಹಿಳೆಯರ ಕುರಿತು ಸುನಂದಾ ಜಯರಾಂ ರವರ ಕಳಕಳಿಯ ಮನವಿ.)* **–ಚಂಪಾ**

ಪರವಾಗಿದ್ದವರೂ ಪದಾಧಿಕಾರಗಳನ್ನು ವಹಿಸಿಕೊಂಡ ಅವಧಿ ಅದಾಗಿತ್ತು. 'ಕಲೇಸಂ'ನ ಒಟ್ಟು ಕಾರ್ಯವಿಧಾನಗಳಲ್ಲಿ ಹಲವಾರು ಮಾರ್ಪಾಡುಗಳಾದವು. ಸಂಘವು ಕೈಗೆತ್ತಿಕೊಳ್ಳುತ್ತಿದ್ದ ಕಾರ್ಯಗಳಲ್ಲಿ ವಿಚಾರ ಸಂಕಿರಣಗಳಿರಲಿ, ಪುಸ್ತಕ ಪ್ರಕಟಣೆಗಳಿರಲಿ, ಸಾಹಿತ್ಯ ರಚನೆಯ ಕಮ್ಮಟಗಳೇ ಇರಲಿ, ಅಥವಾ ಸಾಹಿತ್ಯ ಸಮ್ಮೇಳನಗಳೇ ಆಗಿರಲಿ– ಎಲ್ಲದರಲ್ಲೂ ಸ್ತ್ರೀವಾದಿ ದೃಷ್ಟಿಕೋನದ ವಿಶಿಷ್ಟ ಛಾಪೊಂದು ಮೂಡಿರುತ್ತಿತ್ತು. ಕೆಲವೊಂದು ವೈಚಾರಿಕ, ನೈತಿಕ ನಿಲುವುಗಳನ್ನು ಉಪ–ನಿಯಮಾವಳಿಗಳನ್ನು ಸಂಘವು ರೂಪಿಸಿಕೊಂಡಿತು. ಉದಾಹರಣೆಗೆ ಹೇಳುವುದಾದರೆ,

ಪುರುಷರು ರೂಢಿಸಿರುವ ಸಾಹಿತ್ಯ ಸಮ್ಮೇಳನಗಳು ಬಹುಮಟ್ಟಿಗೆ ಸರ್ಕಾರಗಳ ಮರ್ಜಿಗೆ ಅನುಗುಣವಾಗಿ ರೂಪುಗೊಳ್ಳುವುವು. ರಾಜಕಾರಣಿಗಳಿಗೆ ವಿಪರೀತ ಪ್ರಾಮುಖ್ಯ ಕೊಡುವುದೂ ಮಾಮೂಲಿ. ಹಾಗೆಯೇ ಸಾರ್ವಜನಿಕರ ಹಣವನ್ನು ತುಂಬ ಅದ್ದೂರಿಯಾದ ಮೆರವಣಿಗೆ, ಆಡಂಬರಗಳಿಗಾಗಿ ಪೋಲುಮಾಡಲಾಗುತ್ತದೆ. ಮಹಿಳಾ ಸಾಹಿತ್ಯ ಸಮ್ಮೇಳನಗಳು ಇಂಥಾದ್ದರ ಕುರುಡು ಅನುಕರಣೆಗಳನ್ನು ಬಿಟ್ಟು ಮುಖ್ಯವಾಗಿ ಸಾಹಿತ್ಯ–ಸಂಸ್ಕೃತಿ ಮೀಮಾಂಸೆಗೆ ಒತ್ತು ನೀಡಿ, ಜನಜಾಗೃತಿಗಾಗಿ ಶ್ರಮಿಸಬೇಕು ಎಂಬ ತಾತ್ವಿಕ ನಿಲುವಿಗೆ ಬದ್ಧವಾಗಿ ಕಲೇಸಂ ಸಮ್ಮೇಳನಾಧ್ಯಕ್ಷರುಗಳ ಅದ್ದೂರಿ ಮೆರವಣಿಗೆ ಮಾಡುವ ಪದ್ಧತಿಯನ್ನು ರದ್ದುಪಡಿಸಿತು.

ಸಾಮುದಾಯಿಕವಾದ ಪ್ರಜ್ಞಾ ಜಾಗೃತಿಯೇ ಮ.ಸಾ.ಸ ಗಳಿಗೆ ಮುಖ್ಯ ಗುರಿ. ಆದ್ದರಿಂದ ಮಹಿಳೆಯರಿಂದ – ಮಹಿಳೆಯರಿಗಾಗಿ ಅವುಗಳಿರದೆ, ಅದರಲ್ಲಿ ಪುರುಷರ ಅಭಿಪ್ರಾಯದ ಅಭಿವ್ಯಕ್ತಿಗೂ ಆಸ್ಪದ ನೀಡಬೇಕು. ಬಿಡಿ ಲೇಖಕಿಯರ ಕವಿತೆ, ಕಥೆ, ಕಾದಂಬರಿಗಳ ಪ್ರಕಟಣೆ, ಬಿಡುಗಡೆಗಿಂತ ಹೆಚ್ಚಾಗಿ, ಸಾಮೂಹಿಕವಾದ, ಯೋಜನಾಬದ್ಧವಾದ ಸಂಶೋಧನೆ, ಅಧ್ಯಯನಗಳುಳ್ಳ ಗ್ರಂಥಗಳನ್ನು ಕಾಲಕಾಲಕ್ಕೆ ಪ್ರಕಟಿಸಬೇಕು. ಸಂಘದ ಪದಾಧಿಕಾರದಲ್ಲಿ ಇರುವವರೆಗೂ ಆ ಲೇಖಕಿಯರು ಸಂಘದ ಪ್ರಶಸ್ತಿ, ಬಹುಮಾನ, ಸನ್ಮಾನಗಳನ್ನು ಪಡೆಯಲು ಯತ್ನಿಸುವಂತಿಲ್ಲ– ಮುಂತಾದ ಜನತಾಂತ್ರಿಕ ನೈತಿಕ ಜವಾಬ್ದಾರಿಗಳುಳ್ಳ ನಿಯಮಾವಳಿಗಳನ್ನು ರೂಪಿಸಿಕೊಂಡು ಕಲೇಸಂ ಕಾರ್ಯ ನಿರ್ವಹಿಸುತ್ತಿತ್ತು. ಇಂಥ ನಿರ್ದಿಷ್ಟವಾದ ಸ್ತ್ರೀವಾದಿ ದೃಷ್ಟಿಕೋನಕ್ಕೆ ಸಂಘವು ಬದ್ಧವಾಗಿದ್ದ ಅವಧಿಯಲ್ಲೇ ಚರಿತ್ರೆಯಲ್ಲಿ ಮಸುಕಾಗಿಹೋಗಿದ್ದ ಹಳೆಯ ಬರಹಗಾರರನ್ನು ಶೋಧಿಸಿ ಅಧ್ಯಯನ ಮಾಡುವ ಯತ್ನ, ಸ್ತ್ರೀವಾದದ ಬಹುಮುಖೀಯ ತಾತ್ವಿಕ ನಿಲುವುಗಳನ್ನು ಪರಿಚಯಿಸುವ ಯತ್ನಗಳು, ಅರ್ಥಪೂರ್ಣಗ್ರಂಥಗಳ ಪ್ರಕಟಣೆಯೂ ಸಂಘಕ್ಕೆ ಸಾಧ್ಯವಾಗಿತ್ತು ಎಂಬುದು ಇದೀಗ ಚರಿತ್ರೆಯಾಗಿದೆ.

ಕಳೆದೆರಡು ದಶಕಗಳಲ್ಲಿ, ಅಂದು ತೀವ್ರವಾಗಿದ್ದ ಮಹಿಳಾ ಚಳವಳಿಯು ಅದರ ಕಾವನ್ನು ಕಳೆದುಕೊಂಡಿದೆ. ಸ್ತ್ರೀವಾದಿ ಮಿಮರ್ಶೆಯು 'ಮಹಿಳಾ ಅಧ್ಯಯನ' ಎಂಬ ವಿಶಾಲ ಶೀರ್ಷಿಕೆ ತಳೆದು ವಿವಿಧ ವಿಶ್ವವಿದ್ಯಾಲಯದ ಶೈಕ್ಷಣಿಕ ಪೀಠ, ಸಂಸ್ಥೆಗಳಲ್ಲಿ ಸೇರಿಕೊಂಡಿದೆ. ಮೊದಲಿಗೆ ಸ್ತ್ರೀವಾದಿ ವಿಮರ್ಶೆಯನ್ನು ಚಾಲ್ತಿಗೆ ತರುವ ಯತ್ನಮಾಡಿದ್ದ ಲೇಖಕಿಯರಿಗೆ ಸಂಸ್ಕೃತಿ ಮೀಮಾಂಸೆ ಕೂಡ ಮಹಿಳಾ ಚಳವಳಿಯದೇ ಒಂದು ಅಂಗವೆಂದು ಕಂಡಿತ್ತು. ಆದರೆ ವಿಶ್ವವಿದ್ಯಾಲಯದ ತಣ್ಣನೆಯ ಪಠ್ಯಪುಸ್ತಕಗಳ ಮೂಲಕ ಕಲಿಯುವ ಶಾಸ್ತ್ರವಾಗಿ ಇಂದು ಅದು ಬದಲಾಗಿದೆ. ಪುರುಷ ಚಿಂತಕರನ್ನೂ ಸಾಕಷ್ಟು ಕುತೂಹಲದಿಂದ ಕಣ್ಣುಹಾಯಿಸುವಂತೆ ಆಕರ್ಷಿಸಿದ್ದ 'ಸ್ತ್ರೀನಿಷ್ಠ ಸಂಸ್ಕೃತಿ ಮೀಮಾಂಸೆ' ಈಗ ಆಧುನಿಕೋತ್ತರ ಚಿಂತನೆಗಳ ಬಗ್ಗೆ ಆಸಕ್ತಿಯುಳ್ಳವರಿಗಷ್ಟೇ ತಲೆ ಬಿಸಿಮಾಡಿಕೊಳ್ಳಬೇಕಾದ ಒಂದು ಪಂಥವೆನಿಸಿದೆ. ಹಾಗಾಗಿ ಸ್ತ್ರೀವಾದದ ರಾಜಕೀಯಾರ್ಥಿಕ ಚಳವಳಿಯೂ, ಸಂಸ್ಕೃತಿಮೀಮಾಂಸೆಯ ವಿದ್ವತ್ತೂ ಒಂದೇ ನಾಣ್ಯದ ಇಮ್ಮುಖಗಳೆಂಬ ಅರಿವೇ ಇಂದು ಮಸುಕಾಗುತ್ತಿದೆ.

ಚಳವಳಿಯು ಅರ್ಥಕಳೆದುಕೊಳ್ಳಲಿಕ್ಕೆ ಬೇರೆ ಕಾರಣಗಳೂ ಇವೆ. ಮಹಿಳೆಯರ ಯಾವೆಲ್ಲ ಸಮಸ್ಯೆಗಳ ವಿರುದ್ಧವಾಗಿ ಸ್ವಾಯತ್ತ ಮಹಿಳಾ ಸಂಘಟನೆಗಳು ಹೋರಾಟಕ್ಕೆ ತೊಡಗಿದ್ದುವೋ ಆ ಸಮಸ್ಯೆಗಳೆಲ್ಲ ಸರ್ಕಾರಗಳ ಮಹಿಳಾ ಅಭಿವೃದ್ಧಿ ಯೋಜನೆಗಳೊಳಗೆ ಈಗ Co-option ಗೆ ಒಳಗಾಗಿವೆ. ಮಹಿಳಾ ಸಾಕ್ಷರತೆ, ಆರ್ಥಿಕ ಸ್ವಾವಲಂಬನೆ ಸ್ವಂತ ಉದ್ಯೋಗ, ಮಹಿಳೆಯರ ಮತ್ತು ಆರೋಗ್ಯ ಸಂರಕ್ಷಣೆ, ಸ್ತ್ರೀ ಶಿಕ್ಷಣಕ್ಕೆ ಒತ್ತಾಸೆ, ಸ್ತ್ರೀ ಭ್ರೂಣಹತ್ಯೆ ನಿಷೇಧಕ್ಕೆ ಎಚ್ಚರವಹಿಸುವುದು, ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ, ಮಹಿಳಾ ಸಬಲೀಕರಣ ಮುಂತಾದವು ಸರ್ಕಾರಿ ಕಾರ್ಯಕ್ರಮದ್ದೇ ಭಾಗಗಳಾಗಿ ಈಗ ಕಾಣಿಸುತ್ತವೆಯಾಗಿ ಇವುಗಳೆದುರು ಎನ್‌ಜಿಓಗಳು ನಡುವೆ ಪ್ರವೇಶಿಸಿ, ಆ ಯೋಜನೆಗಳು ನಿಜವಾಗಿ ಅಗತ್ಯವಿರುವ ಮಹಿಳೆಯರಿಗೆ ದಕ್ಕುವಂತೆ ಶ್ರಮಿಸುವುದೇ ಇಂದಿನ ಹೋರಾಟವೆನಿಸಿದೆ. ಎಲ್ಲಕ್ಕಿಂತ ಬಲವಾಗಿ

*ಕಥಾ ಸಾಹಿತ್ಯದ ಬಗ್ಗೆ ಮಾತನಾಡಿದ ಶ್ರೀಮತಿ ಎಸ್. ಪ್ರಭಾವತಿ ತಮ್ಮ ಲೇಖನದಿಂದ ಹಾಗೆ ಹಾಗೆಯೇ 2–3 ಪ್ಯಾರಗಳನ್ನು ಎತ್ತಿದ್ದಾರೆ, ತಮ್ಮ ಹೆಸರುಗಳನ್ನು ಸೂಚಿಸಿಯೂ ಸಹ ಇಲ್ಲವೆಂದು ಹೇಮಾ ಪಟ್ಟಣಶೆಟ್ಟಿ ಹಾಗೂ ಎಲ್.ಜಿ. ಸುಮಿತ್ರರವರು ಪ್ರಭಾವತಿಯವರನ್ನು ವೇದಿಕೆಯ ಆಚೆ ತರಾಟೆಗೆ ತೆಗೆದುಕೊಂಡದ್ದು ಕಂಡು ಬಂದ ದೃಶ್ಯ.*

* * *

*ಶಾಂತಾ ನಾಗರಾಜ್‌ರವರು ತಮ್ಮ ಭಾಷಣದುದ್ದಕ್ಕೂ ಗಂಡು ಮಕ್ಕಳನ್ನು ಹೇಗೆ ಬೆಳೆಸಬೇಕೆಂದು,(ಗಂಡು ಮಕ್ಕಳು ಕಲ್ಲು ಹೊಡೆಯದಂತೆ, ಹಿಂಸೆಗೆ ಪ್ರಚೋದಿಸದಂತೆ ಇತ್ಯಾದಿ) ತಾಯ್ತನದ ಹಿರಿಮೆಯ ಅರಿವು ಮೂಡಿಸಿದರು. ಹೀಗಿದೆ ನಮ್ಮ ಸ್ತ್ರೀವಾದಿ ಕಲ್ಪನೆ!*

* * *

*'ಸಾಮಾಜಿಕ ಬದುಕು ಮತ್ತು ಮಹಿಳೆ' ಕುರಿತು ಚನ್ನಾಗಿಯೇ ಮಾತನಾಡಿದ ಕೆ.ಜಿ. ಉಷಾರಾಣಿ–ಸುನಂದಾ ಜಯರಾಂ ತಮ್ಮನ್ನು ಸಾಮಾಜಿಕವಾಗಿ ಹೆಚ್ಚು ತೊಡಗಿಸಿಕೊಂಡಿದ್ದಾರೆ. ಮಧ್ಯರಾತ್ರಿ ಕರೆದ್ರೂ ಅನ್ಯಾಯ ಆಗಿರೋ ಮಹಿಳೆಗೆ ಸಾಂತ್ವನ ಮಾಡಿ ಕಾರ್ಯೋನ್ಮುಖರಾಗ್ತಾರೆ. ಇವರ ಮಗನಿಗೆ ಸಮಯ ಕೊಡೋಕೆ ಇವರಿಗೆ ಎಷ್ಟು ಸಾಧ್ಯವಾಗುತ್ತೋ, ಅವರು ಅಷ್ಟೊಂದು ಕಾಳಜಿ ಇರುವ ಮಹಿಳೆ ಎನ್ನುವ ಮಾತಿಗೆ,–'ಒಳ್ಳೆಯ ತಾಯಿ' –ಹಾಗೆಂದರೇನು ಎಂಬ ಕಡೆ ಮಾತು ತಿರುಗಿ, ಒಳ್ಳೆಯ ತಾಯ್ತನ ಎಂದರೇನು? ಎಂಬ ಪ್ರಶ್ನೆಗಳನ್ನು ಸ್ತ್ರೀವಾದಿಗಳಿಂದ ಎದುರಿಸಬೇಕಾಯಿತು. ನಮ್ಮೊಳಗೇ ರೂಢಿಗತವಾಗಿ ಅಂಟಿಕೊಂಡಿರುವ ನಮ್ಮ ಅನಿಸಿಕೆಗಳು ಹೇಗಿರುತ್ತವೆ ಎಂಬುದಕ್ಕೆ ಇದೊಂದು ನಿದರ್ಶನ.*

*–ಚಂಪಾ*

ಸಾಂಸ್ಕೃತಿಕ ಧಾಳಿಯಿಟ್ಟ ಜಾಗತೀಕರಣದ ಫಲವಾಗಿ ಮಹಿಳೆಯರ ಸಮಸ್ಯೆಗಳೇ ಜಾಳಾಗಿ ಕೊಚ್ಚಿಹೋಗುವ, ಬಂಡವಾಳಶಾಹಿಯ ಪರಿಚರ್ಯೆಗೆ ದುಡಿವ ಸಾಧನಗಳಾಗಿ ಬಿಟ್ಟಿವೆ. ಇಂತಹ ಪರಿಸರದಲ್ಲಿ ಮಹಿಳೆಯರ ಬಗ್ಗೆ ಹೇಳುವ ಯಾವುದೇ ಮಾತಿರಲಿ, ಹಾಗೆ ಹೇಳು ಬಹುದಾದವರು ಯಾರೇ ಆಗಿರಲಿ, ಅದಕ್ಕೆಲ್ಲ ಸ್ತ್ರೀಪರತೆಯ ಲೇಬಲ್ಲು ಹಚ್ಚಲು ಕಷ್ಟಪಡಬೇಕಿಲ್ಲ. ತನಗೆ ಇಷ್ಟವಾದ ವಿಷಯುಗಳನ್ನೇ ಆರಿಸಿಕೊಂಡು ಉನ್ನತ ಶಿಕ್ಷಣಕ್ಕೆ ತೆರಳುವ ಹೆಣ್ಣುಮಗಳೆಷ್ಟು ಸ್ವಾಯತ್ತ ವ್ಯಕ್ತಿಯಾಗಿ ಬೆಳೆಯಬಹುದೋ ಅದೇ ರೀತಿಯಲ್ಲಿ ಅತ್ಯಲ್ಪ ವಸ್ತ್ರ ತೊಟ್ಟು, ದೇಹಸಿರಿ, ರೂಪ ದರ್ಶಿಸಿ, ಕೈಗಾರಿಕಾ ಉತ್ಪನ್ನಗಳ ಬಿಕರಿಗೆ ಏಜೆಂಟಾಗುವ ಹುಡುಗಿ ಕೂಡ ಅಷ್ಟೇ ಸ್ವಾಯತ್ತ ಹೆಣ್ತನದ ಪ್ರತೀಕವೆಂದು ಇಂದು ಪ್ರಚಾರ ಪಡೆಯುತ್ತಾಳೆ. ಹೀಗೆ ಹೆಣ್ಣಿನ ಬದುಕಿನ, ವ್ಯಕ್ತಿತ್ವದ, ಸ್ವಾತಂತ್ರ್ಯ, ಸ್ವಾಯತ್ತತೆಯ ಮೌಲ್ಯಗಳೆಲ್ಲ ಮಸುಕಾಗಿ ಕರಗಿ ಬಿಡುತ್ತಿರುವ ಇವತ್ತಿನ ಪರಿಸರದಲ್ಲಿ ಮಹಿಳಾ ಸಾಹಿತ್ಯ ಸಮ್ಮೇಳನವೊಂದು ಕಲೇಸಂ ನಂಥ ಸಂಸ್ಥೆಯಿಂದ ನಡೆಯಬಹುದಾದರೆ ಅದರ ಸ್ವರೂಪ ಹೇಗಿರಬೇಕು?

ಇತ್ತೀಚೆಗಷ್ಟೆ ಮಂಡ್ಯದಲ್ಲಿ ಇಂಥದೊಂದು ಸಮ್ಮೇಳನ ಜರುಗಿದೆ. "ಆರನೆಯ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ" ವನ್ನು ಕರ್ನಾಟಕ ಲೇಖಕಿಯರ ಸಂಘವು ಮಂಡ್ಯದ ಕನ್ನಡ ಸಂಘ ಶಕ್ತಿಯ ನೆರವಿನಿಂದ ನಡೆಸಿ, ಕೃತಾರ್ಥವಾಗಿದೆ. ಸರ್ಕಾರದಿಂದ ನಿಗದಿತವಾಗಿದ್ದ ಸಹಾಯಧನವಿನ್ನೂ ಕೈಗೆ ಬಾರದಿದ್ದಾಗ, ಚುನಾಯಿತ ಜನಪ್ರತಿನಿಧಿಗಳುಳ್ಳ ಸರ್ಕಾರವೇ ಇಲ್ಲದಿರುವ ಅತಂತ್ರ ವ್ಯವಸ್ಥೆಯಲ್ಲಿ ಲೇಖಕಿಯರ ಸಂಘವು ತುರ್ತಾಗಿ ಈ ಸಮ್ಮೇಳನ ನಡೆಸುವ ಸಾಹಸಕ್ಕೆ ಕೈಹಾಕಿದ್ದರೆ ಅದಕ್ಕೆ ಮಂಡ್ಯದ ಜನರ ಸ್ವಾಭಿಮಾನ, ರಾಜಕೀಯ ಹಾಗೂ ಆರ್ಥಿಕ ಬಲ ಮತ್ತು ಅವರ ಸಂಘಟನಾ ಸಾಮರ್ಥ್ಯಗಳೇ ಬೆನ್ನೆಲುಬಾಗಿತ್ತು. ಸಹಜವಾಗಿಯೇ ಸಮ್ಮೇಳನದ ಸ್ವರೂಪ, ಅದರಲ್ಲಿ ಪಾಲ್ಗೊಳ್ಳಬೇಕಾದವರು, ಅಲ್ಲಿ ಚರ್ಚೆಗೆ ಬರುವ ವಿಷಯಗಳು ಹಾಗೂ ಅವೆಲ್ಲ ಕಾರ್ಯಗಳೂ ಹೇಗೆ ನಡೆಯಬೇಕು ಎಂಬುದನ್ನು ನಿರ್ಧರಿಸುವ ಮತ್ತು ನಿರ್ದೇಶಿಸುವ ಅಧಿಕಾರವನ್ನು ಮಂಡ್ಯದ ಕನ್ನಡ ಸಂಘದ ಪರಿಚಾರಕರೆಂದುಕೊಳ್ಳುವ ನಾಯಕವರ್ಗದವರೇ ವಹಿಸಿಕೊಂಡಿದ್ದುದು. ಅವರಿಗೇ ಒಪ್ಪಿಸಿಬಿಟ್ಟ ಅಸಹಾಯಕತೆಯಲ್ಲಿ ಒಂದಲ್ಲ ಒಂದು ರೀತಿಯಲ್ಲಿ ತೊಡಗಿಸಿಕೊಳ್ಳಲಾಗಿದ್ದ ದೊಡ್ಡ ಸಂಖ್ಯೆಯ ಲೇಖಕಿಯರು ಉಸಿರೆತ್ತದೆ ತಮಗೆ ವಹಿಸಿಕೊಡಲಾದ ಕೆಲಸಗಳನ್ನು ನಿರ್ವಂಚನೆಯಿಂದ ಮಾಡಿ ಮುಗಿಸುತ್ತಿದ್ದರು.

ಈ ವ್ಯವಸ್ಥೆ ಕಛೇರಿಯೊಂದರಲ್ಲೋ, ಕುಟುಂಬಗಳ ಒಳಗೋ ಯಾಜಮಾನ್ಯದ ಚೌಕಟ್ಟಿನಲ್ಲೇ ತಂತಮ್ಮ ಕರ್ತವ್ಯವನ್ನು ಮೌನವಾಗಿ ನಿಭಾಯಿಸುವ ಪರಂಪರಾಗತ ರೂಢಿಯ ಫಲಿತಾಂಶವೇ ಇರಬಹುದು. ಇಡೀ ಸಮ್ಮೇಳನದಲ್ಲಿ ಕಲೇಸಂನ ನೀತಿನಿಯಮಾವಳಿಗಳೆಲ್ಲ ಮೂಲೆ ಗುಂಪಾಗಿದ್ದರೂ, ಎಲ್ಲವೂ ಕೇವಲ ಕಸಾಪದ ವಿಜೃಂಭಣೆಯ ಸಾಹಿತ್ಯ ಸಮ್ಮೇಳನಗಳ ಅನುಕರಣೆಯಲ್ಲೇ ನಡೆದಿದ್ದರೂ ಯಾರೊಬ್ಬರೂ ಪ್ರತಿರೋಧಿಸಲು ಶಕ್ತರಾಗಿರಲಿಲ್ಲ. ಸಮ್ಮೇಳನಾಧ್ಯಕ್ಷರಾಗಿದ್ದ ಹಿರಿಯ ಲೇಖಕಿ, ಸಂಘದ ಅಧ್ಯಕ್ಷರು, ಊರಿನ ರಾಜಕೀಯ ಮುಖಂಡರುಗಳು ಯಾರಿಗೂ ವ್ಯತ್ಯಾಸವೇ ಇಲ್ಲದಂಥ ರೀತಿಯಲ್ಲಿ ಅವರ ದಿಬ್ಬಣವನ್ನು ಊರಿನ ತುಂಬ ಮೆರವಣಿಗೆಯಲ್ಲಿ ಕರೆದುಕೊಂಡು ಬರಲಾಯಿತು. ವೇದಿಕೆತುಂಬ ಮುಖಂಡರೂ ಲೇಖಕಿಯರೂ ಕಿಕ್ಕಿರಿದಿದ್ದು ಉದ್ಘಾಟನೆಯೆಂಬುದೊಂದು ವಿಧಿಯನ್ನು, ಪುಸ್ತಕಾದಿಗಳ ಬಿಡುಗಡೆಗಳನ್ನು ಮುಗಿಸಿದ ಕೂಡಲೆ, ಆ ಸಮಾರಂಭದ ಅಧ್ಯಕ್ಷರು ಭಾಷಣಮಾಡಿ ಮುಗಿಸಿ, ತುರ್ತಾಗಿ ಬೇರೆ ಕೆಲಸಕ್ಕೆ ಹೋದರು. ಅನಂತರ ಸಮ್ಮೇಳನಾಧ್ಯಕ್ಷರ ಭಾಷಣದ ಮಂಡನೆ ಮುಂತಾದ ಕಲಾಪಗಳು ಮಧ್ಯಾಹ್ನದವರೆಗೂ ಮುಂದುವರೆದುವು.

ರಾಜಕಾರಣಿಗಳೇ ಸಮ್ಮೇಳನವನ್ನು ನಿರ್ದೇಶಿಸುತ್ತಿದ್ದ ಅಧಿಕಾರಯುತ ರೀತಿ, ಮತ್ತು ಅಸಹಾಯಕ ಮೌನದಲ್ಲಿ ತೆಪ್ಪನೆ ಕುಳಿತ ಲೇಖಕಿಯರ ವರ್ಗವನ್ನು ಕಂಡಾಗ ಮಹಿಳಾ ಚಳವಳಿ ಸುತ್ತಿ ಸುತ್ತಿ ಬಂದು ಪುರುಷ ಪ್ರಧಾನ ವ್ಯವಸ್ಥೆಯಲ್ಲೇ ಶಾಮೀಲಾಗಿ ಹೋಯಿತೇ ಅನ್ನಿಸಿ ವ್ಯಥೆಯಾಯಿತು. ಹೀಗೆ ಹೇಳಿದ ಮಾತ್ರಕ್ಕೆ ಈ ಮಾತುಗಳನ್ನು ಹತಾಶೆಯಿಂದ ಇಲ್ಲವೆ ಸಿನಿಕತನದಿಂದ ಬರೆದೆನೆಂದು ಅರ್ಥವಲ್ಲ, ಈ ಸಮ್ಮೇಳನವನ್ನು ಹಿಂದಿನ ಎಲ್ಲಾ ಮ.ಸಾ.ಸ ಗಳನ್ನೂ ಮೀರಿಸುವಂಥ ವೈಭವದಿಂದ ಅದ್ದೂರಿಯಾಗಿ ನಡೆಸಲೇಬೇಕೆಂದು ಮಂಡ್ಯದ ನಾಯಕರು ಪಣತೊಟ್ಟಿದ್ದರು. ಹಾಗೆಯೇ ನಡೆಸಿದರು. ಹಿಂದೆಂದೂ ಇರದಷ್ಟು ದೊಡ್ಡ ಪ್ರಮಾಣದಲ್ಲಿ ಗ್ರಾಮೀಣ ಮಹಿಳೆಯರು, ರೈತ ಮಹಿಳೆಯರನ್ನು ಅಲ್ಲಿ ಕರೆತಂದು ಕೂರಿಸಲಾಗಿತ್ತು. ಸಾಹಿತ್ಯ ಲೋಕದಲ್ಲೇ ವಿಹರಿಸುವ ಲೇಖಕಿಯರಿಗೆ ಮಣ್ಣಿನ ಹೆಣ್ಣುಮಕ್ಕಳೊಂದಿಗೆ ಮುಖಾಮುಖಿಯಾಗುವ ಮೂಲಕ ಪರಸ್ಪರ ಅರಿವನ್ನು ಬೆಳೆಸುವ, ಸಂವಾದವನ್ನು ಹುಟ್ಟುಹಾಕುವ ಆಶಯ ತಮ್ಮದೆಂದು ಕಲೇಸಂ ಅಧ್ಯಕ್ಷರು ತಮ್ಮ ಪ್ರಾಸಾವಿಕ ನುಡಿಯಲ್ಲಿ ಹೇಳಿದ್ದರು. ಆದರೆ ನಿಜವಾಗಿ ನಡೆದದ್ದು ಇನ್ನೂ ಕಠಿಣ ವಾಸ್ತವವನ್ನು ಪ್ರೇಕ್ಷಕರಿಗೆ ಸೂಚಿಸುವಂತಿತ್ತು. ಅಧ್ಯಕ್ಷ ಭಾಷಣ ಮೊದಲೇ ಮುಗಿಸಿ ನಾಯಕರೊಬ್ಬರು ನಿರ್ಗಮಿಸಿದ ಕೂಡಲೆ ಆ ಸಾವಿರಾರು ಮಹಿಳೆಯರೂ ಮಕ್ಕಳೂ ಹಸಿವಿನ ಬಾಧೆಯನ್ನು

*ಕೆ.ಜಿ. ಉಷಾದೇವಿಯವರ ತಾಯ್ತನದ ಮಾತಿಗೆ ಉತ್ತರವಾಗಿ ಸುನಂದಾ ಜಯರಾಂ (ಭಾಷಣದಲ್ಲಿ) :*
*ಅಡಿಗೆ ಮಾಡೋಲ್ಲ ಅನ್ನೋ ಕಾರಣಕ್ಕೆ ಯಾರೂ ನಮ್ಮ ಕುಟುಂಬದವರು ಹೊರಗೆ ಹೋಗಿ ಊಟ ಮಾಡಿಲ್ಲ. ಅದ್ರೆ ನಾವೆಲ್ಲ ಒಟ್ಟಿಗೇ ಹೊರಗೆ ಹೋಗಿ ಊಟ ಮಾಡಿರೋದು ಬೇರೆ. ನಮ್ಮ ಕುಟುಂಬದಲ್ಲಿ ಇನ್ನೂ ಬೇರೆ ರೀತಿಯ ಚಿತ್ರಣ ಇದೆ. 'ಹೊರಡಿ, ನಿಮಗೆ ಲೇಟಾಯ್ತು' ಅಂತಾರೆ ಅಥವಾ ಯಾವುದಾದರೂ ನನ್ನ ಕಾರ್ಯದ ಬಗ್ಗೆ 'ನೀವು ಹೀಗೆ ಮಾಡಬಹುದಿತ್ತಲ್ಲ' 'ಹೀಗೆ ಹೇಳಬಹುದಿತ್ತಲ್ಲ' ಅಂತ ಸಲಹೆ-ಸೂಚನೆ ಕೊಡ್ತಾರೆ (ಇದನ್ನ ಕುಟುಂಬದಲ್ಲಿ ಆಗುತ್ತಿರುವ ಸಕಾರಾತ್ಮಕ ಬದಲಾವಣೆಯ ಸೂಚನೆ ಎಂದು ತೆಗೆದುಕೊಳ್ಳೋಣವೇ?)*

* * *

*ಸಾರಾ ಅಬೂಬಕರ್ ತಮ್ಮ ಭಾಷಣದಲ್ಲಿ ಮಹಿಳೆಯರ ಕೃತಿಗಳ ಹಕ್ಕುಗಳನ್ನು ಗೌರವಿಸದೇ ದುರ್ಬಳಕೆ ಆಗುತ್ತಿರುವುದರ ಬಗ್ಗೆ ಎಚ್ಚರಿಕೆ ನೀಡಿ ತಮ್ಮದೇ ಉದಾಹರಣೆ ನೀಡಿದರು. 'ಚಂದ್ರ ಗಿರಿಯ ತೀರದಲ್ಲಿ' ಅನುವಾದಿತ ಕೃತಿಗೆ ಪುರುಷ ಲೇಖಕನಿಗೆ ಕೇಂದ್ರ ಅಕಾಡಮಿ ಪ್ರಶಸ್ತಿ ದೊರಕಿರುವುದು, ಅವರ ಅನುಮತಿ ಇಲ್ಲದೇ ಅವರ ಕಥೆಯೊಂದು ದೂರದರ್ಶನದಲ್ಲಿ ಪ್ರಸಾರವಾಗಿರುವುದು ಇತ್ಯಾದಿ. ಇಂತಹವುಗಳ ಬಗ್ಗೆ ಮಹಿಳೆಯರು ಜಾಗೃತರಾಗಿರುವುದು ಅಗತ್ಯವಾಗಿದೆ.*

**– ಚಂಪಾ**

ಮೊದಲು ತೀರಿಸಿಕೊಳ್ಳಲು ಭೋಜನ ಶಾಲೆಯತ್ತ ಧಾವಿಸಿದ್ದು ನೂಕುನುಗ್ಗಲನ್ನು ಸೃಷ್ಟಿಸಿತು. ರೈತ ಮಹಿಳಾ ನಾಯಕಿಯೊಬ್ಬರು ಭಾಷಣ ಕೇಳಲೆಂದು ಬಂದಿದ್ದಲ್ಲಿ ಕುಳಿತುಕೇಳಿರಿ, ಊಟಕ್ಕೇ ಬಂದವರಾದರೆ ಊಟದ ಕಡೆಗೆ ಹೋಗಿರಿ ಎಂದು ಮನವಿ/ಗದರಿಕೆ ಬೆರೆಸಿ ಹೇಳಿದ ರಾದರೂ, ಆ ಹೆಣ್ಣುಮಕ್ಕಳೆಲ್ಲ ಎರಡನೆಯದನ್ನೇ ಆಯ್ಕೆಮಾಡಿಕೊಂಡರು! ಹೀಗಾಗಿ ಸಮ್ಮೇಳನಾಧ್ಯಕ್ಷೆಯಾಗಿ ಅಷ್ಟೆಲ್ಲ ವೈಭವದಿಂದ ಮೆರೆಸಲ್ಪಟ್ಟಿದ್ದ ನೀಳಾದೇವಿ ತಮ್ಮ ಅಧ್ಯಕ್ಷ ಭಾಷಣ ಓದುವಾಗ ಅದಕ್ಕೆ ಉಳಿದಿದ್ದ ನಿಜವಾದ ಕೇಳುಗರೆಂದರೆ ಬೇರೆ ಬೇರೆ ಊರುಗಳಿಂದ ಬಂದಿದ್ದ ಲೇಖಕಿಯರ ವೃಂದ ಮಾತ್ರ. ಇಂತಹ ಪರಿಸ್ಥಿತಿಯಲ್ಲಿ ಸಂವಾದ ವೆಂಥಾದ್ದು? ಮುಖಾಮುಖಿ ಎಂದರೇನು ಎಂದು ಯಾರೂ ಯೋಚಿಸಲು ಸಾಧ್ಯವಾಗುವಂತೆ ಕಾಲ ಮಧ್ಯಾಹ್ನದ ಮೂರು ಗಂಟೆಯತ್ತ ಧಾವಿಸುತ್ತಿತ್ತು.

ಈ ಪರಿಯಲ್ಲಿ ಸಮ್ಮೇಳನದ ಆರಂಭವಾಗಿದ್ದರೂ, ಮೊದಲನೆಯ ಗೋಷ್ಠಿ 'ಪ್ರಸ್ತುತ ಮಹಿಳಾ ಸಮಸ್ಯೆಗಳು' ಎಂಬ ವಿಷಯ ಕುರಿತು ನಿಧಾನವಾಗಿ ನಡೆದು ಮೂವರು ಪ್ರಬಂಧ ಮಂಡಕರು ಮತ್ತು ಸುಮಾರು ಹತ್ತು ಜನ ಪ್ರತಿಕ್ರಿಯೆ ವ್ಯಕ್ತಪಡಿಸುವ ಮಹಿಳೆಯರು ಮತ್ತು ಪುರುಷರ ಮಾತುಗಳಿಂದ ವಿಜೃಂಭಿಸಿತು. ಮಹಿಳೆಯರಲ್ಲಿ ಈಗ ಸ್ತ್ರೀಸಂಘಟನೆಗಳಲ್ಲಿ ಕ್ರಿಯಾಶೀಲರಾಗಿ ತೊಡಗಿಕೊಂಡಿರುವವರೇ ಭಾಷಣ ಮಾಡಿದ್ದರಿಂದ, ಪ್ರಚಲಿತ ಮಹಿಳಾ ಸಮಸ್ಯೆಗಳ ರಾಜಕೀಯ–ಆರ್ಥಿಕ ಆಯಾಮಗಳ ಚರ್ಚೆ ತೀವ್ರವಾಗಿಯೇ ಇತ್ತು. ಆದರೆ ಪ್ರತಿಕ್ರಿಯಿಸಿದ ಹಲವು ಪುರುಷ ಚಿಂತಕರು 'ಹೆಣ್ಣಿಗೆ ಹೆಣ್ಣೇ ಶತ್ರು' 'ನಾವು ಮಹಿಳೆಯರನ್ನು ಚೆನ್ನಾಗಿಯೇ ರಕ್ಷಿಸಿಕೊಂಡಿದ್ದೇವೆ' ಮುಂತಾದ ರೀತಿಯಲ್ಲಿ ಪುರುಷರ ಪರಂಪರಾಗತ ಮಾತುಗಳನ್ನೇ ಆಡಿದ್ದು ಆ ಗೋಷ್ಠಿಯ ವಿಷಯದೊಂದಿಗೆ ಸ್ಪಂದಿಸುವುದಕ್ಕಿಂತ ಹೆಚ್ಚಾಗಿ ಚರ್ವಿತ ಚರ್ವಣವೇ ಆದಂತೆ ಭಾಸವಾಯಿತು.

ಆಧುನಿಕೋತ್ತರ ಮಹಿಳಾಸಾಹಿತ್ಯ ಕುರಿತ ಚರ್ಚೆ, 'ಆಧುನಿಕೋತ್ತರ' ಎಂಬ ಪರಿಭಾಷೆಯ ಅರ್ಥವನ್ನು, ಮಹಿಳಾ ಬರಹದ ಇಂದಿನ ವಿಶಿಷ್ಟಾಂಶಗಳನ್ನು ಹೇಳುಬಹುದಿತ್ತೇನೋ. ಆದರೆ ಒಬ್ಬಿಬ್ಬರ ಹೊರತು ವಿಷಯಗಳ ಅಸ್ಪಷ್ಟ ಗ್ರಹಿಕೆ, ಗೊಂದಲಗಳಲ್ಲೇ ಆ ಗೋಷ್ಠಿ ಮುಕ್ತಾಯವಾಯಿತು. ಯಾರೂ ಪ್ರಶ್ನಿಸಲಾಗದಂಥ ಅಸ್ಖಲಿತವಾದ ನಾವೀನ್ಯವುಳ್ಳ ಸಮರ್ಥ ಕೃತಿಯೊಂದು ಎಲ್ಲರೂ ಮೆಚ್ಚಿ ಪ್ರಶಸ್ತಿ ಬಹುಮಾನಗಳನ್ನು ನೀಡಲೇಬೇಕಾದಂಥ ಅನಿವಾರ್ಯತೆಯನ್ನು ಸೃಷ್ಟಿಸುವಂತೆ ಹೊರಬರಲಿ ಎಂದು ಗೋಷ್ಠಿಯ ಅಧ್ಯಕ್ಷೆ ಗೀತಾ ನಾಗಭೂಷಣ್ ಆಶಿಸಿದ್ದು ಮನನೀಯವಾಗಿತ್ತು.

ಮಹಿಳೆಯರ ಕವಿತೆಗಳನ್ನು ಹಾಡಿಸಿ, ಅವುಗಳಿಗೆ ಸ್ಥಳದಲ್ಲೇ ಚಿತ್ರಬರೆಸುವ ಯತ್ನ, ಮಹಿಳಾ ಕವಿಗೋಷ್ಠಿಗಳು ಸಾಕಷ್ಟು ರಂಜನೆಯನ್ನು ನೀಡಿದವು. 'ಮಂಡ್ಯದ ಮಹಿಳೆಯರ' ನಿಜವಾದ ಸ್ಥಿತಿಗತಿಗಳನ್ನು ಪ್ರತಿಪಾದಿಸಿದ ಗೋಷ್ಠಿಯೊಂದು ಹೊಸಪೀಳೀಗೆಯ ಮಹಿಳಾ ಕಾರ್ಯಕರ್ತೆಯರಿಂದ ಶುದ್ಧಾಂಗವಾಗಿ ಗ್ರಾಮೀಣ ಮಹಿಳೆಯರ ನೈಜ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಮೂಲಕ ಅರ್ಥಪೂರ್ಣ ವೆನಿಸುವಂತಿತ್ತು.

ಸಮ್ಮೇಳನದ ಸಮಾರೋಪಕ್ಕೆ ಮುನ್ನ ಅನೇಕ ಹಿರಿಯ ಹೆಸರಾಂತ ಲೇಖಕಿಯರನ್ನು ಸನ್ಮಾನಿಸುವ ಕಾರ್ಯಕ್ರಮ ನಡೆಯಬೇಕಿತ್ತು. ಆದರೆ ಪತ್ರಿಕೆ ಹಾಗೂ ಮಾಧ್ಯಮದ ಮಂದಿ ಸನ್ಮಾನ ಬೇಕಾದರೆ ಆ ಮೇಲೆ ಮಾಡಿಕೊಳ್ಳಿ, ಸಮಾರೋಪ ಭಾಷಣ ಮೊದಲು ಮುಗಿಸಿಬಿಡಿ, ನಾವು ವರದಿ ಮಾಡಬೇಕು ಎಂದು ಆಗ್ರಹ ಮಾಡಿದರು. ಲೇಖಕಿಯರ ಸನ್ಮಾನ ಮೊದಲು ನಡೆಯಬೇಕೆಂದು ಹಲವಾರು ಕಲೇಸಂ ಪ್ರತಿನಿಧಿಗಳು ಒತ್ತಾಯ ಮಾಡಿದರು. ಆಗ ನಡುವೆ ಪ್ರವೇಶಿಸಿದ ಮಂಡ್ಯದ ಕನ್ನಡ ಸಂಘದ ನಾಯಕರೊಬ್ಬರು ಲೇಖಕಿಯರ ಸಂಘವೂ ಪತ್ರಿಕೆಯವರೂ ತಮ್ಮನ್ನು ಚೆಂಡಿನಂತೆ ಅತ್ತಿತ್ತ ಆಡಿಸುತ್ತಿದ್ದಾರೆಂದೂ, ಮೂವತ್ತು ವರ್ಷಗಳಿಂದ ತಾವು ಕನ್ನಡ ಸಾಹಿತ್ಯದ ಪರಿಚಾರಕರಾಗಿಯೇ ದುಡಿಯುತ್ತಿದ್ದು, ಮನಸ್ಸುಮಾಡಿ ಬರವಣಿಗೆಗೆ ತೊಡಗಿದ್ದರೆ ಈ ವೇಳೆಗೆ ದೊಡ್ಡ ಲೇಖಕನೇ ಆಗಬಹುದಿತ್ತೆಂದೂ ಉದ್ಧಟತನದಿಂದ ನುಡಿದದ್ದು "ಲೇಖಕಿಯರ ಬರವಣಿಗೆ" ಬಗ್ಗೆ ತೋರಿಸಿದ ಅಗೌರವವೆಂದೇ ಅನ್ನಿಸಿತು. ಪತ್ರಿಕಾ ಮಾಧ್ಯಮದವರ ಅನುಕೂಲಕ್ಕಾಗಿ ಕಾರ್ಯಕಲಾಪ ವನ್ನೇ ಪಲ್ಲಟ ಮಾಡಿ, ಲೇಖಕಿಯರನ್ನು ಅವಮಾನಿಸಿ ಮಾಡುವ ಸನ್ಮಾನವೇ ತಮಗೆ ಬೇಡವೆಂದು ಕೆಲವರು ಅದನ್ನು ಧಿಕ್ಕರಿಸಿ ಹೊರ ನಡೆದರು. ಎಪ್ಪತ್ತು ಎಂಬತ್ತರ ಗಡಿಯಲ್ಲಿದ್ದವರಿಗೆ ಪಾಪ ಇಂತಹ ಪ್ರತಿಭಟನೆಗೂ ಶಕ್ತಿ ಇದ್ದಿರಲಾರದು. ಅವರು ಬಂದದ್ದೆಲ್ಲಾ ಬರಲಿ ಎಂದು ಅದನ್ನು ಸಹಿಸಿಕೊಂಡಿರಬೇಕು.

ಒಟ್ಟಾರೆಯಾಗಿ ನೋಡಿದರೆ ಅಬ್ಬರದಿಂದ ನಡೆಸಲಾದ ಈ ಸಮ್ಮೇಳನದಿಂದ ಮಹಿಳಾ ಚಳವಳಿಗೆ ಹೊಸ ಅರ್ಥವಾಗಲಿ, ಲೇಖಕಿಯರ ಸಾಹಿತ್ಯಕ್ಕೆ ಮಾನ್ಯತೆಯಾಗಲಿ ನಿಜವಾಗಿ ದೊರೆಯಿತೆ ಎಂಬುದು ಪ್ರಶ್ನೆಯಾಗಿಯೆ ಉಳಿಯುತ್ತದೆ, ಇಂತಹ ಸಮ್ಮೇಳನಗಳು ಯಾರ ಹಿತಕ್ಕೆ? ಆ ಸಾವಿರಾರು ಸಾಮಾನ್ಯ ಹೆಣ್ಣುಮಕ್ಕಳ ವರ್ತಮಾನದ ಸಮಸ್ಯೆ ಸಂಕಟಗಳನ್ನು ಇದು ತಲುಪಿದ್ದಾದರೂ ಎಷ್ಟು? ಎಂಬ ಪ್ರಶ್ನೆಗಳು ಇಂತಹ ಸಮ್ಮೇಳನಗಳ ಬಗ್ಗೆ ಮರುಚಿಂತನೆಗೆ ಲೇಖಕಿಯರಿಗೆ ಪ್ರೇರಣೆ ನೀಡಬೇಕಷ್ಟೆ. ❑

ರಾಜಕಾರಣಿಗಳನ್ನು ತಳಕು ಹಾಕಿಕೊಂಡು, ಅವರ ಆಶ್ರಯದಲ್ಲಿ ನಡೆಯುವಂತಹ ಇಂತಹ ಸಮ್ಮೇಳನಗಳು ಎಷ್ಟರ ಮಟ್ಟಿಗೆ ಸ್ವಾಯತ್ತತೆ ಕಾಯ್ದುಕೊಳ್ಳಬಹುದು ಎಂಬುದು ಪ್ರಶ್ನೆಯೇ ಎಂದು ಉದ್ಘಾಟನಾ ಸಮಾರಂಭದಲ್ಲಿ ವೇದಿಕೆಯ ಮೇಲಿದ್ದ ಹಲವಾರು ಪುರುಷ ರಾಜಕಾರಣಿಗಳನ್ನು ನೋಡಿ ಸ್ತ್ರೀವಾದಿಯೊಬ್ಬರು ಉದ್ಗಾರ ತೆಗೆದರು!

* * *

**ಸುನಂದಾ ಜಯರಾಂ** (ತಮ್ಮ ಭಾಷಣದಲ್ಲಿ)

ನಾವು 33% ಮೀಸಲಾತಿ ಅಂತ ಯಾಕೆ ಕೇಳಬೇಕು? ಪಾರ್ಲಿಮೆಂಟ್‌ನಲ್ಲಿ ಒಟ್ಟು 227 ಸೀಟುಗಳು ಅಂತ ಇದ್ರೆ ನಾವು 113 ಮಹಿಳೆಯರಿರಬೇಕು. ಪುರುಷರೂ ಅಷ್ಟೇ ಇರಬೇಕು. ಅದರೊಳಗಡೆ ಜಾತಿ, ವರ್ಗದ ಹಿನ್ನಲೆಯಲ್ಲಿ ಸಮಾನ ಹಂಚಿಕೆಯಾಗಲಿ. ಈ ತರಹದ ಸಮಾಜಾನ ನಾವು ಸಾಯೋದ್ರೊಳಗೆ ನೋಡಬೇಕಲ್ಲ (ಮನದಾಳದ ಮಾತು).

* * *

**ಮಂಡ್ಯ ಸಮ್ಮೇಳನದಲ್ಲಿ 150ಕ್ಕೂ ಹೆಚ್ಚು ಲೇಖಕಿಯರಿದ್ದರು ರಾಜಕಾರಣಿಗಳ, ಚಳಿವಳಿಗಳ ದಬ್ಬಾಳಿಕೆ ಇತ್ತು. ಸಮ್ಮೇಳನಾಧ್ಯಕ್ಷೆ ನೀಳಾದೇವಿಯರನ್ನೇ ಹಿಂದಕ್ಕೆ ತಳ್ಳಿ ರಾಜಕಾರಣಿಗಳು ಉದ್ಘಾಟನೆಯಲ್ಲಿ ಮೆರೆದರು. ಪಾಪದ ನೀಳಾದೇವಿ! ಎನ್ನುತ್ತಾರೆ ಒಬ್ಬ ಲೇಖಕಿ. – ಚಂಪಾ**

# ಲಿಂಗತ್ವ (ಜೆಂಡರ್) ಎಂದರೇನು?

ಇಂಗ್ಲಿಷ್ ಮೂಲ :
ಅಂಡರ್‌ಸ್ಟ್ಯಾಂಡಿಂಗ್ ಜೆಂಡರ್

ಲೇಖಕರು : ಕಮಲಾ ಭಾಸಿನ್
ಕನ್ನಡಕ್ಕೆ : ವೆಂ. ವನಜ

*(ಹಿಂದಿನ ಸಂಚಿಕೆಯಿಂದ)*

"ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ನಾಯಕತ್ವ ಅಧಿಕಾರಕ್ಕೆ ಬಂತೆಂದರೆ, ಅದು ಜನತೆಗೆ ಕೊಡುವ ಮೊದಲ ಸೂಚನೆ 'ಪುರುಷರು ಟೋಪಿಗಳನ್ನು ಧರಿಸಬೇಕು, ಗಡ್ಡವನ್ನು ಬೆಳೆಸಬೇಕು. ಮಹಿಳೆಯರು ತಮ್ಮ ದೇಹವನ್ನು ಸಂಪೂರ್ಣವಾಗಿ ಮುಚ್ಚಿಕೊಳ್ಳಬೇಕು, ಮನೆಯ ಒಳಗಿರಬೇಕು ಎಂದಾಗಿರುತ್ತದೆ. ಮಹಿಳೆಯರು ಮನೆಯ ಹೊರಗೆ ದುಡಿಯುವುದನ್ನು ಅಥವಾ ಸಾರ್ವಜನಿಕ ಶೌಚಾಲಯಗಳನ್ನು ಬಳಸುವುದನ್ನು ನಿಷೇಧಿಸಲಾಗುತ್ತದೆ. ಒಂದು ಹೊಸ ರಾಜಕೀಯ ಆಳ್ವಿಕೆ ಜಾರಿಗೆ ಬರುವ ಮತ್ತು ಲಿಂಗತ್ವದ ಶ್ರಮ ವಿಭಜನೆಯ ಮರುಸ್ಥಾಪನೆಯಾಗುವ ವಿಧಾನಗಳೊಂದಿಗಿರುವ ಸಂಬಂಧ ಕುತೂಹಲಕಾರಿಯಾಗಿದೆ. ಆದ್ದರಿಂದ ಈ ಲಿಂಗಾಧರಿತ ಶ್ರಮ ವಿಭಜನೆಯು ತನ್ನಷ್ಟಕ್ಕೆ ತಾನೇ ಆದ ಸಂರಚನೆಯಲ್ಲ. ಇದು ಲಿಂಗತ್ವದಿಂದ ರಚಿತವಾದ ವ್ಯವಸ್ಥೆಯ ಒಂದು ಭಾಗವಾಗಿದೆ (ವಸಂತ ಕಣ್ಣಾಬಿರನ್)".

ಈ ಲಿಂಗಾಧರಿತ ಶ್ರಮವಿಭಜನೆ ಈ ಕೆಳಗಿನ ಅಂಕಿಅಂಶಗಳಿಗೆ ದಾರಿಮಾಡಿಕೊಟ್ಟಿದೆ. ವಿಶ್ವದಲ್ಲಿ ನಿರ್ವಹಣೆಯ ಹಿರಿಯ ಪದಾಧಿಕಾರವನ್ನು ಶೇಕಡ 14 ಮಹಿಳೆಯರು ಮಾತ್ರ ಹೊಂದಿದ್ದಾರೆ. ಅಮೆರಿಕದಲ್ಲಿ ಮಹಿಳೆ ಮತ್ತು ಪುರುಷರ ವೇತನಗಳಲ್ಲಿ ವ್ಯತ್ಯಾಸ ಸರಾಸರಿ ಶೇಕಡ 3.5. ಇದು ಹಿಂದಿನ ನೂರು ವರ್ಷಗಳಿಂದ ಸ್ವಲ್ಪವೂ ಬದಲಾಗಿಲ್ಲ, ವಿಶ್ವದ ಅತ್ಯಂತ ಬಡವರ ಮತ್ತು ಅನಕ್ಷರರಲ್ಲಿ ಶೇಕಡ 70 ಮಂದಿ ಮಹಿಳೆಯರಾಗಿದ್ದಾರೆ. (ಯುಎನ್‌ಡಿಪಿ: ಮಾನವ ಅಭಿವೃದ್ಧಿ ವರದಿ, 1995)

ಮರಿಯಾಮೀಸ್‌ರವರ ಪ್ರಕಾರ, ಲಿಂಗಾಧರಿತ ಶ್ರಮವಿಭಜನೆಯನ್ನು ನಾವು ಕುಟುಂಬದೊಳಗಿನ ಸಮಸ್ಯೆಯಾಗಿ ಕಾಣುವ ಬದಲಿಗೆ ಅದನ್ನೊಂದು ಇಡೀ ಸಮಾಜದ ರಾಚನಿಕ ಸಮಸ್ಯೆಯನ್ನಾಗಿ ಇನ್ನುಮುಂದೆ ಕಾಣಬೇಕಿದೆ. ಪುರುಷರು ಮತ್ತು ಮಹಿಳೆಯರ ನಡುವಿನ ಏಣಿಶ್ರೇಣಿಯ ಶ್ರಮವಿಭಜನೆ ಮತ್ತದರ ಚಲನಶೀಲತೆಗಳು ಪ್ರಧಾನ ಉತ್ಪಾದನಾ ಸಂಬಂಧಗಳ ಒಂದು ಅಖಂಡ ಭಾಗವಾಗಿವೆ. ಅಂದರೆ ಅದೊಂದು ನಿರ್ದಿಷ್ಟ ಕಾಲಾವಧಿ ಮತ್ತು ಆಯಾ ಸಮಾಜಗಳ ವರ್ಗಸಂಬಂಧಗಳು ಮತ್ತು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ವ್ಯಾಪಿಸಿರುವ ಶ್ರಮವಿಭಜನೆಯಾಗಿದೆ(1988).

ಸ್ತ್ರೀವಾದಿ ಚರಿತ್ರಕಾರರಾದ ಜೋನ್ ಕೆಲ್ಲಿಯವರ ಅಭಿಪ್ರಾಯದಲ್ಲಿ ಆಸ್ತಿಸಂಬಂಧಗಳು ಮತ್ತು ದುಡಿಮೆಗಳೊಂದಿಗೆ ಮಹಿಳೆಯರಿಗಿರುವ ಸಂಬಂಧಗಳು ಲಿಂಗಾಧರಿತ ಶ್ರಮವಿಭಜನೆ ಮತ್ತು ಲೈಂಗಿಕ ವ್ಯವಸ್ಥೆಗಳ ಮೂಲನಿರ್ಧಾರಕಗಳಾಗಿವೆ. ಕುಟುಂಬ ಮತ್ತು ಸಾರ್ವಜನಿಕ ಕ್ಷೇತ್ರಗಳನ್ನು ಹೆಚ್ಚೆಚ್ಚು ಪ್ರತ್ಯೇಕಗೊಳಿಸಿ ದುಡಿಮೆ ಹೆಚ್ಚಾಗುತ್ತದೆ. ಇದರಿಂದ ಆಸ್ತಿಯನ್ನು ಸ್ಪಷ್ಟವಾಗಿ ಜೀವನೋಪಾಯಕ್ಕಾಗಿ ಉತ್ಪಾದನೆ ಮತ್ತು ವಿನಿಮಯಕ್ಕಾಗಿ ಉತ್ಪಾದನೆ ಎಂದು ಎರಡು ರೀತಿಯಾಗಿ ಪ್ರತ್ಯೇಕಿಸಬಹುದಾಗಿದೆ. ಇದು ಲಿಂಗಾಧರಿತ ಶ್ರಮವಿಭಜನೆಯನ್ನು ಪ್ರಭಾವಿಸುತ್ತದೆ.

**ಹೆಚ್ಚಿನವರು ಈ ಲಿಂಗತ್ವದ ಶ್ರಮವಿಭಜನೆಯನ್ನು ಸಹಜವಾದುದೆಂದು ತಿಳಿಯುತ್ತಾರೆ. ಮಹಿಳೆಯರು ಮಕ್ಕಳನ್ನು ಹೆರುತ್ತಾರೆ, ಹಾಲುಣಿಸುತ್ತಾರೆ. ಅಂದಮೇಲೆ, ಆರೈಕೆ ಮತ್ತು ಪೋಷಣೆಯ ಚಟುವಟಿಕೆಗಳಿಗೆ ಅವರು ಹೆಚ್ಚು ಸಮರ್ಥರು ಎಂದಾಗುವುದಿಲ್ಲವೆ?**

ನೀವು ಬಳಸಿದ 'ಹೆಚ್ಚು ಸಮರ್ಥರು' ಎಂಬ ಶಬ್ದ ಕುತೂಹಲಕರವಾಗಿದೆ. ಮಹಿಳೆಯರಿಗೆ ಒಂದು ಗರ್ಭಕೋಶ ಮತ್ತು ಒಂದು ಜೊತೆ ಸ್ತನಗಳಿರುವುದೇನೋ ನಿಜ. ಆದರೆ ಆರೈಕೆಮಾಡುವ, ಶುಚಿಮಾಡುವ ಅಥವಾ ಪೋಷಣೆ ಮಾಡುವ ಯಾವುದೇ ಹೆಚ್ಚುವರಿ ಸಾಧನ ಅವರೊಂದಿಗಿಲ್ಲ. ಆದ್ದರಿಂದ ಎಲ್ಲರನ್ನೂ ನೋಡಿಕೊಳ್ಳುವುದು ಅವರಿಗೆ 'ಸಹಜ'ವಾದುದೇನಲ್ಲ. ಗುಡಿಸುವ, ಒರೆಸುವ, ತೊಳೆಯುವ ಮತ್ತು ಅಡಿಗೆ ಮಾಡುವ ಕೆಲಸಗಳಿಗೆ ಸಂಬಳ ಕೊಡುವುದಾದರೆ ಈ ಕೆಲಸಕಾರ್ಯಗಳನ್ನು ಪುರುಷರೂ ಮಾಡುತ್ತಾರೆನ್ನುವುದನ್ನು ನಾವು ಮರೆಯುವಂತಿಲ್ಲ. ಅಂದಮೇಲೆ ಪುನರುತ್ಪಾದನೆಯ ಕೆಲಸವನ್ನು ಮಾಡಲು ಅಥವಾ ಮಾಡದಿರಲು ಜೈವಿಕ ಅಥವಾ ಸಹಜವಾದ ಕಾರಣಗಳಿರಲು ಸಾಧ್ಯವೇ ಇಲ್ಲ.

ಆದರೆ ಮಹಿಳೆಯರ ದೇಹರಚನೆಯನ್ನಾಧರಿಸಿ ಇಂದಿನ ಲಿಂಗತ್ವದ ಸಂಬಂಧಗಳು ಮತ್ತು ಲಿಂಗತ್ವಾಧರಿತ ಶ್ರಮವಿಭಜನೆಗಳನ್ನು 'ಸಹಜ' ಎಂದು ನಂಬಬೇಕೆನ್ನುವವರು ದೇಹಗಳಾಚೆ ನಿಂತು ಯೋಚಿಸುವುದು ಕಷ್ಟವೆಂದುಕೊಳ್ಳುತ್ತಾರೆ. ಅಲ್ಲದೆ, ಪ್ರತಿಯೊಂದನ್ನೂ ಪ್ರಕೃತಿಯ ಮಟ್ಟಕ್ಕಿಳಿಸಿಬಿಡುವುದು ಬಹಳ ಅನುಕೂಲಕರವೂ ಹೌದು. ಏಕೆಂದರೆ, ಪುರುಷ ಪ್ರಧಾನತೆಯ ವಿಶೇಷಾನುಕೂಲತೆಗಳನ್ನು ಪ್ರಶ್ನಿಸುವ ಅಥವಾ ಅದಕ್ಕೆ ಸವಾಲು ಹಾಕುವ ಅಗತ್ಯ ನಿಮಗಿರುವುದಿಲ್ಲ. ಎಲ್ಲಾ ಜವಾಬ್ದಾರಿಗಳಿಂದ ನೀವು ಕಳಚಿಕೊಂಡುಬಿಡುತ್ತೀರಿ. ಲಿಂಗತ್ವವು ಸಾಮಾಜಿಕ ಸೃಷ್ಟಿ, ಲಿಂಗತ್ವದ ಸಂಬಂಧಗಳು ಮತ್ತು ಲಿಂಗತ್ವಾಧರಿತ ಶ್ರಮವಿಭಜನೆಗಳು ಸಹಜವಾದುವಲ್ಲವೆಂದು ಲಿಂಗತ್ವದ ಕಾರ್ಯಾಗಾರಗಳಲ್ಲಿ ನಿರೂಪಿಸಿದಾಗ ಪುರುಷರು ಅತೀವವಾಗಿ ಗಲಿಬಿಲಿಗೊಳ್ಳುತ್ತಾರೆ, ಉದ್ರೇಕಗೊಳ್ಳುತ್ತಾರೆ ಅಥವಾ ಕಾದಾಟಕ್ಕಿಳಿಯುತ್ತಾರೆನ್ನುವುದನ್ನು ಪದೇ ಪದೇ ಗಮನಿಸಿದ್ದೇವೆ. ಅವುಗಳಿಗೆ ಆರಂಭ ಇತ್ತಾದ್ದರಿಂದ ಅಂತ್ಯವೂ ಸಾಧ್ಯವಿದೆ. ಸ್ತ್ರೀವಾದದ ಸವಾಲು ಮತ್ತು ಮಹಿಳಾ ಚಳವಳಿಯ ರಾಜಕೀಯ ದುಡಿಮೆಯೆಂದರೆ, ಜೈವಿಕ ವ್ಯತ್ಯಾಸಗಳನ್ನಾಧರಿಸಿದ ಅಸಮಾನತೆಗೆ ಒಂದು ಅಂತ್ಯ ಹಾಡುವುದು. ಈ 'ಸಹಜ' ಎನ್ನುವ ವ್ಯತ್ಯಾಸಗಳು ಮತ್ತು ಶ್ರಮವಿಭಜನೆಯು ಹಲವು ಸಮಾಜಗಳಲ್ಲಿ ಬದಲಾಗಿರುವ ಉದಾಹರಣೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿವಾದರೂ ಕಾಣಬಹುದು.

**ಈ ಶ್ರಮವಿಭಜನೆ ಸಾಮಾಜಿಕ ನಿಬಂಧನೆಗೊಳಪಡಿಸುವಿಕೆಯ ಪರಿಣಾಮವಾಗಿರಲು ಸಾಧ್ಯವೆ? ಏಕೆಂದರೆ ಮಹಿಳೆಯರು ಕುಟುಂಬಗಳಿಗೆ ಸೀಮಿತಗೊಂಡರೆ ಪುರುಷರು ಬಾಹ್ಯಪ್ರಪಂಚದೊಂದಿಗೆ ವ್ಯವಹರಿಸುತ್ತಾರೆ.**

ಇದು ಬಹುಮುಖ್ಯವಾದ, ಆದರೆ ಸಂಕೀರ್ಣವಾದ ಪ್ರಶ್ನೆ. ಇದಕ್ಕೆ ನೇರ ಉತ್ತರ ಪಡೆಯುವುದು ಸುಲಭವಲ್ಲ. ಮೊದಲಿಗೆ ಈ ಖಾಸಗಿ ಮತ್ತು ಸಾರ್ವಜನಿಕ ಸ್ವಾಮ್ಯಗಳ ನಡುವಿನ ವಿಭಾಗವನ್ನು ಅರ್ಥಮಾಡಿಕೊಳ್ಳಬೇಕಿದೆ. ಮಹಿಳೆಯರು ಖಾಸಗಿ ಸ್ವಾಮಿತ್ವದಲ್ಲಿ ಉಳಿದುಕೊಳ್ಳಬೇಕು, ಪುರುಷರು ಸಾರ್ವಜನಿಕವಾಗಿ ಕಾರ್ಯೋನ್ಮುಖರಾಗುವುದರೊಂದಿಗೆ ಖಾಸಗಿ ಬದುಕನ್ನು ಕೂಡ ನಿಯಂತ್ರಿಸಬೇಕೆಂದು

ನಿರೀಕ್ಷಿಸಲಾಗುತ್ತದೆ. ಔದ್ಯೋಗಿಕ ಕ್ರಾಂತಿಗೆ ಮೊದಲು, ಅವೆರಡರ ನಡುವಿನ ಪ್ರತ್ಯೇಕತೆ ಎದ್ದುಕಾಣುವಂತಿರಲಿಲ್ಲ. ಹೆಚ್ಚಿನ ಉತ್ಪಾದನೆಗಳು ಕೌಟುಂಬಿಕ ಪರಿಸರದಲ್ಲೇ ನಡೆಯುತ್ತಿದ್ದವು. ಅದರಲ್ಲಿ ಕುಟುಂಬದ ಸದಸ್ಯರೆಲ್ಲರೂ ಪಾಲ್ಗೊಳ್ಳುತ್ತಿದ್ದರು. ಪ್ರತಿಯೊಬ್ಬರೂ "ಅನ್ನ ಸಂಪಾದಿಸುವವರಾಗಿದ್ದರು." ಕುಟುಂಬವು ಉತ್ಪಾದನೆ ಮತ್ತು ಪುನರುತ್ಪಾದನೆಗಳೆರಡರ ಒಂದು ತಾಣವಾಗಿತ್ತು. ಅಲ್ಲಿ **ಪುರುಷರು ಮತ್ತು ಮಹಿಳೆಯರ ನಡುವೆ ಸಹಕಾರ ಮತ್ತು ಪೂರಕತೆಗಳಿದ್ದವು**. ಮುಂದಿನ ಪೀಳಿಗೆಯನ್ನು ಮರುಉತ್ಪಾದಿಸಲು ಮಹಿಳೆಯರಿಗಿರುವ ಕೌಶಲಗಳು, ತಿಳಿವಳಿಕೆ ಮತ್ತವರ ಸಾಮರ್ಥ್ಯಗಳನ್ನು ಹೆಚ್ಚು ಮೌಲ್ಯೀಕರಿಸಲಾಗಿತ್ತು. ಏಕೆಂದರೆ ಮಾನವನ ಬದುಕಿಗೆ ಅವರು ಅತ್ಯವಶ್ಯವಾಗಿದ್ದರು. ಈ ಹಳೆಯ ವ್ಯವಸ್ಥೆ ಹಲವು ರೀತಿಗಳಲ್ಲಿ ಮಹಿಳಾ ಕೇಂದ್ರಿತ (gynocentric) ವಾಗಿತ್ತು. ವಸಾಹತುಶಾಹಿ ಅಮೆರಿಕದಲ್ಲಿ ಕುಟುಂಬದ ಆರ್ಥಿಕತೆಯಲ್ಲಿ ಮಹಿಳೆಯರು ಪ್ರಮುಖ ಪಾತ್ರವನ್ನು ವಹಿಸಿದ ಕಾರಣದಿಂದಾಗಿ ಸಾಮಾನ್ಯವಾಗಿ ಅವರನ್ನು "ಯಜಮಾನಿ-ಹೆಣ್ಣು" (husband-woman) ಅಥವಾ "ಯಜಮಾನಿ"(ಅಂದರೆ ಕುಟುಂಬದ ಆಗುಹೋಗುಗಳನ್ನು ನೋಡಿಕೊಳ್ಳುವ, ನಿರ್ವಹಿಸುವ, ನಿಯಂತ್ರಿಸುವ ಅಥವಾ ಯಜಮಾನಿಕೆ ನಡೆಸುವವಳು) ಎಂಬ ಶಬ್ದವನ್ನು ಬಳಸುತ್ತಿದ್ದರು.

ಮಾರುಕಟ್ಟೆಯ ಆರ್ಥಿಕತೆ ಮತ್ತು ಉದ್ಯಮೀಕರಣಗಳ ನಾಟಕೀಯ ಆಗಮನ ಖಾಸಗಿ ಮತ್ತು ಸಾರ್ವಜನಿಕಗಳ ನಡುವಿನ ಏಕತೆ ಮತ್ತು ಮಾನವರ ನಡುವಿನ ಸಾಮರಸ್ಯಗಳನ್ನು ಹಾಳುಗೆಡವಿತು. ಉತ್ಪಾದನೆ ಜೀವನಾವಶ್ಯಕತೆಗಾಗಿ ಮಾತ್ರವಾಗುಳಿಯಲಿಲ್ಲ. ಅದು ಮಾರುಕಟ್ಟೆ ಮತ್ತು ಲಾಭೋದ್ದೇಶಿತವಾಗಿ ಕೂಡ ಮಾರ್ಪಟ್ಟಿತು. ಕ್ರಮೇಣ ಉತ್ಪಾದನೆಯು ಕುಟುಂಬದಿಂದ ಕಾರ್ಖಾನೆ, ವಾಣಿಜ್ಯ ಪ್ರದೇಶ ಮುಂತಾದ ಕಡೆಗಳಿಗೆ ಚಲಿಸತೊಡಗಿತು. ಸಾಮಾನ್ಯ ಜನರ ಬದುಕಿನಲ್ಲಿ ಪ್ರಕೃತಿಗೆ ಬದಲಾಗಿ ಮಾರುಕಟ್ಟೆಯು ನಿಯಂತ್ರಕ ಶಕ್ತಿಯಾಯಿತು.

'ಆರ್ಥಿಕ ಮಾನವ' ಮನೆಯಿಂದ ಹೊರನಡೆದ, 'ಮನೆಯ ಮಹಿಳೆ' ಅಲ್ಲೇ ಉಳಿದಳು. ಬಾಹ್ಯಜಗತ್ತಿನಲ್ಲಿ ಚಲಾವಣೆಯಾಗುವ ಜ್ಞಾನ ಮತ್ತು ಕೌಶಲಗಳನ್ನು ಪಡೆದುಕೊಳ್ಳಲು ಹುಡುಗರು ಶಾಲೆ ಮತ್ತು ವಿಶ್ವವಿದ್ಯಾನಿಲಯಗಳಿಗೆ ಹೋದರು. ಆದರೆ ಹುಡುಗಿಯರು ಮನೆಯ ಜಗತ್ತಿಗೆ ಬೇಕಾದ ಕೌಶಲಗಳನ್ನು ಪಡೆಯಲು ಮನೆಯಲ್ಲೇ ಉಳಿದರು.

> **"ಮಹಿಳೆಯ ಉತ್ಪಾದನಾ ಕೌಶಲಗಳು ಮಾತ್ರವೇ ಅವಳಿಗೆ ಹಳೆಯ ವ್ಯವಸ್ಥೆಯಲ್ಲಿ ಪ್ರಾಮುಖ್ಯ ನೀಡಿರಲಿಲ್ಲ. ಅವಳಿಗೆ ಗುಣಕಾರಕ ಗಿಡಮೂಲಿಕೆಗಳು, ಗರ್ಭಾವಸ್ಥೆಯಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು ತಿಳಿದಿದ್ದವು. ಒಂದು ವೇಳೆ ಅವಳು ಅಸಾಧಾರಣ ಕೌಶಲವನ್ನು ಪಡೆದಿದ್ದಲ್ಲಿ ಅವಳು ಸೂಲಗಿತ್ತಿ, ಗಿಡಮೂಲಿಕೆ ವೈದ್ಯೆ ಅಥವಾ ಮನೆಮನೆಯಲ್ಲಿ ಹಳ್ಳಿ-ಹಳ್ಳಿಯಲ್ಲಿ ಹೆಸರಾದ ಜಾಣ-ಮಹಿಳೆಯಾಗಿರುತ್ತಿದ್ದಳು. ಮಹಿಳೆಯರೆಲ್ಲರೂ ತಮ್ಮ ತಾಯಿ-ಅಜ್ಜಿಯರಿಂದ ಮಕ್ಕಳನ್ನು ಬೆಳೆಸುವ, ಸಾಮಾನ್ಯ ಕಾಯಿಲೆ-ಕಸಾಲೆಗಳನ್ನು ಗುಣಪಡಿಸುವ, ರೋಗಿಗಳ ಆರೈಕೆಮಾಡುವ ಕೌಶಲಗಳನ್ನು ಕಲಿತಿರಬೇಕೆಂದು ನಿರೀಕ್ಷಿಸಲಾಗುತ್ತಿತ್ತು**
>
> *(ಬಾರ್ಬರ, ಉಹ್ರೆನ್‌ರಿಚ್ ಮತ್ತು ಡೇಯಿಡರ್ ಇಂಗ್ಲಿಷ್ : ಪು.11)*

ಈ ಮಾರ್ಕೆಟ್ಟೀಕರಣ ಮತ್ತು ಉದ್ಯಮೀಕರಣಗಳಿಂದಾಗಿ ಯುರೋಪಿನಲ್ಲಾದದ್ದೇ ದಕ್ಷಿಣ ಏಷ್ಯಾದಲ್ಲೂ ಆಯಿತು. ಇಲ್ಲೂ ಶಿಕ್ಷಣದಂತೆಯೇ ಉತ್ಪಾದನೆಯು ಮನೆಯಿಂದ ಹೊರಟಿತು. ಇದಕ್ಕೆ ಮುನ್ನ ಹುಡುಗರು-ಹುಡುಗಿಯರು ತಮ್ಮ ಉತ್ಪಾದನಾ ಜ್ಞಾನ-ಕೌಶಲಗಳನ್ನು, ತಮ್ಮ ಬದುಕಿಗೆ ಅಗತ್ಯವಾದ ಕೌಶಲಗಳನ್ನು ಮತ್ತು ಚಟುವಟಿಕೆಗಳ ಮೂಲಕ ಶಿಕ್ಷಣವನ್ನು ಮನೆಯಲ್ಲೇ ಪಡೆದುಕೊಳ್ಳುತ್ತಿದ್ದರು.

ದಕ್ಷಿಣ ಏಷ್ಯಾದ ಗುಡ್ಡಗಾಡು ಜನರು, ಕಾಡಿನವಾಸಿಗಳು ದೂರದೂರಗಳಲ್ಲಿ ವಾಸಿಸುವ ರೈತರು ಇಂದಿಗೂ ಉತ್ಪಾದನೆಯನ್ನು ಹೆಚ್ಚಾಗಿ ಮನೆಯಲ್ಲೇ ಮಾಡುತ್ತಾರೆ. ಅವರ ಆರ್ಥಿಕತೆ ಮೂಲತಃ ಇನ್ನೂ ಜೀವನೋಪಾಯದ ಆರ್ಥಿಕತೆಯಾಗಿದೆ. ಉತ್ಪಾದನಾ ಹೆಚ್ಚಳವನ್ನು ಸ್ಥಳೀಯ ಮಾರುಕಟ್ಟೆಯಲ್ಲಿ ಮನೆಯಲ್ಲಿ ಉತ್ಪಾದಿಸದ ವಸ್ತುಗಳಿಗೆ ಬದಲಿಸಿಕೊಳ್ಳಲಾಗುತ್ತದೆ. ಮನೆಯ ಕೆಲಸಕಾರ್ಯಗಳಲ್ಲಿ ಮಹಿಳೆ-ಪುರುಷರಿಬ್ಬರೂ ಭಾಗವಹಿಸುತ್ತಾರೆ. ಇಲ್ಲಿ ಖಾಸಗಿ-ಸಾರ್ವಜನಿಕ ವಲಯಗಳ ನಡುವೆ ಯಾವುದೇ ವ್ಯತ್ಯಾಸವಿರುವುದಿಲ್ಲ. ಇತರೆ ವರ್ಗ ಅಥವಾ ಸಮುದಾಯಗಳಿಗೆ ಹೋಲಿಸಿದಾಗ ಇಲ್ಲಿ ಪುರುಷರು ಮತ್ತು ಮಹಿಳೆಯರ ನಡುವೆ ಹೆಚ್ಚಿನ ಅಸಮಾನತೆ ಇರುವುದಿಲ್ಲ. ಇತ್ತೀಚೆಗೆ ಕ್ರಮೇಣ ಈ ಸಮುದಾಯಗಳು ಕೂಡ ಮಾರುಕಟ್ಟೆಯ ಆರ್ಥಿಕತೆಗೆ ಸೇರಿಹೋಗುತ್ತಿದ್ದಾರಲ್ಲದೆ ತಾವು ಮೊದಲಿಗಿಂತ ಹೆಚ್ಚು ಪುರುಷಪ್ರಧಾನವಾದಿಗಳಾಗುತ್ತಿದ್ದಾರೆ.

ಉತ್ಪಾದನಾ ವಿಧಾನದಲ್ಲಿನ ಬದಲಾವಣೆಗಳಿಂದಾಗಿ ಮನೆಯನ್ನು ಉತ್ಪಾದನಾ ಕೇಂದ್ರವನ್ನಾಗಿ ನೋಡುವ ದೃಷ್ಟಿ ಈಗ ಬದಲಾಗಿದೆ. ಅದನ್ನೊಂದು ಆರ್ಥಿಕ ಉತ್ಪಾದನೆಯ ಹೊರಗಿರುವ ಆಶ್ರಯಧಾಮವೆಂದು, ಹೃದಯಹೀನ ಜಗತ್ತಿಗೆ ಹೊರತಾದ ನಿಲ್ದಾಣವೆಂದು, ನಗರದಿಂದ ಹಿಂದೆಗೆತವೆಂದೂ ಕಾಣಲಾಗುತ್ತದೆ. ಮರುಉತ್ಪಾದನೆ ಮಾತ್ರ ಕುಟುಂಬದಲ್ಲಿ ಉಳಿದು, ಉತ್ಪಾದನೆ ಹೊರಹೋಗಿದೆ. ಮನೆಯ ನಿರ್ವಹಣೆ ತನ್ನ ಸಾರ್ವಜನಿಕ ಗುಣ ಲಕ್ಷಣವನ್ನು ಕಳೆದುಕೊಂಡಿದೆ, ಅದಕ್ಕೆ ಸಮಾಜದೊಂದಿಗೆ ಸಂಬಂಧವಿರುವುದಿಲ್ಲ. ಅದೊಂದು ಖಾಸಗಿ ಸೇವೆಯಾಗಿಬಿಟ್ಟಿದೆ. ಏಂಗಲ್ಸ್ ಹೇಳಿದಂತೆ, ಹೆಂಡತಿ ಮುಖ್ಯ ಸೇವಕಿಯಾಗುತ್ತಾಳೆ. ಅವಳು ಸಾಮಾಜಿಕ ಉತ್ಪಾದನೆಯಲ್ಲಿ ಪಾಲ್ಗೊಳ್ಳುವುದಕ್ಕೆ ಹೊರತಾಗುತ್ತಾಳೆ. (ಆ್ಯಲಿಸನ್, ಎಂ.ಜಾಗರ್: ಫೆಮಿನಿಸ್ಟ್ ಪಾಲಿಟಿಕ್ಸ್ ಅಂಡ್ ಹ್ಯೂಮನ್ ನೇಚರ್:1993)

'ಸಾರ್ವಜನಿಕ' ಮತ್ತು 'ಖಾಸಗಿ'ಗಳ ನಡುವಿನ ಪ್ರತ್ಯೇಕತೆ ಪುರುಷರಿಗೆ ಹೊಸದಿಗಂತಗಳನ್ನು ಮತ್ತು ಅವಕಾಶಗಳನ್ನು ತೋರಿಸುತ್ತದೆ. ಆದರೆ ಮಹಿಳೆಯರಿಗೆ ಸ್ಥಳ ಮತ್ತು ಕೆಲಸಕಾರ್ಯಗಳನ್ನು ಸೀಮಿತಗೊಳಿಸುತ್ತದೆ. ಒಂದು ರೀತಿಯಲ್ಲಿ ಇದು ಮಹಿಳಾ ಕೇಂದ್ರಿತ ವ್ಯವಸ್ಥೆಯ ಅಂತ್ಯವಾಗಿದೆ. ಈ ಸಾರ್ವಜನಿಕ-ಖಾಸಗಿಗಳ ನಡುವಿನ ಪ್ರತ್ಯೇಕತೆಯ ಮತ್ತೊಂದು ಪರಿಣಾಮವೆಂದರೆ, ಮಹಿಳೆಯರ ಸಾಪೇಕ್ಷವಾದ ಏಕಾಂತ ಮತ್ತು ಒಂಟಿತನಗಳು. ಮಹಿಳೆಯರು ಸಮಾಜದಿಂದ ಹೊರನಿಲ್ಲುತ್ತಾರೆ, ಇತರ ಮಹಿಳೆಯರು - ಪುರುಷರಿಂದ ಪ್ರತ್ಯೇಕಗೊಳ್ಳುತ್ತಾರೆ.

ಬಟ್ಟೆ ತಯಾರಿಕೆ, ಉಡುಪು ತಯಾರಿಕೆ, ಆಹಾರ ಸಂಸ್ಕರಣೆಯಂಥ ಮಹಿಳೆಯರ ಸಾಂಪ್ರದಾಯಿಕ ಉತ್ಪಾದನಾ ಕೌಶಲಗಳು ಕಾರ್ಖಾನೆ ವ್ಯವಸ್ಥೆಗೆ ವರ್ಗಾವಣೆಯಾದವು. ಕಾರ್ಮಿಕ ಮಹಿಳೆಯರು ತಮ್ಮ ಅದೇ ದುಡಿಮೆಯನ್ನು ಹೊಸ ಔದ್ಯಮಿಕ ಜಗತ್ತಿನಲ್ಲಿ ಮುಂದುವರೆಸಬಹುದು. ಆದರೆ ಆ ಉತ್ಪಾದನಾ ಪ್ರಕ್ರಿಯೆಯನ್ನು ಅವರು ಹಿಂದಿನಂತೆ ನಿಯಂತ್ರಿಸಲಾಗುವುದಿಲ್ಲ. ಅವರು ತಮ್ಮ ಹಳೆಯ ಕೌಶಲ್ಯಗಳನ್ನು ಮರೆಯಬಹುದು. ಕಾಲಾನುಕ್ರಮದಲ್ಲಿ ಗುಣಾತ್ಮಕವಾಗಿ ಹೆಣ್ತನದ ಚಟುವಟಿಕೆಯಾದ ಗುಣಪಡಿಸುವಿಕೆಯನ್ನು ಒಂದು ವಸ್ತುವನ್ನಾಗಿಸಿ ಮಾರುಕಟ್ಟೆಯಲ್ಲಿ ತೂರಿಬಿಡಬಹುದು. ಗೃಹತಯಾರಿಕೆಯಾದ ಗಿಡ ಮೂಲಿಕೆಯ ಟಾನಿಕ್ಕಿನ ಸ್ಥಾನವನ್ನು ಬಹುರಾಷ್ಟ್ರೀಯ ಔಷಧ ಕಂಪನಿಗಳ ರಾಸಾಯನಿಕ ಉತ್ಪನ್ನಗಳು ತುಂಬಿಬಿಟ್ಟಿವೆ. ಸೂಲಗಿತ್ತಿಯರ ಸ್ಥಾನವನ್ನು

ಶಸ್ತ್ರಚಿಕಿತ್ಸಾತಜ್ಞರು ತುಂಬಿದ್ದಾರೆ. "(ಬಾರ್ಬರ, ಎಹ್ರೆನ್‌ರಿಕ್ ಮತ್ತು ಡ್ಯೇಡರ್ ಇಂಗ್ಲಿಷ್ : 1988 : ಪು.11).

**"ಸಾರ್ವಜನಿಕ" ಮತ್ತು "ಖಾಸಗಿ"ಗಳ ಪ್ರತ್ಯೇಕತೆ ಪುರುಷ ಮಹಿಳೆಯರ ನಡುವಿನ ಅಸಮಾನತೆಗಳನ್ನು ಹೆಚ್ಚಿಸಿದೆಯೇ?**

ಹೌದು, ಅದು ಹೆಚ್ಚಿಸಿದೆ. ಇವೆರಡರ ಪ್ರತ್ಯೇಕತೆ ಇವುಗಳ ನಡುವೆ ಏಣಿ-ಶ್ರೇಣಿಯನ್ನು ಬೆಳೆಸಿದೆ. ಖಾಸಗಿ ಅಥವಾ ಕೌಟುಂಬಿಕ ವಲಯ ತನ್ನದಾದ ಆರ್ಥಿಕ, ರಾಜಕೀಯ ಮತ್ತು ಚಾರಿತ್ರಿಕ ಮಹತ್ವವೆಲ್ಲವನ್ನೂ, ದಿನೇ ದಿನೇ ತನ್ನ ಪ್ರಾಮುಖ್ಯತೆಯನ್ನೂ ಕಳೆದುಕೊಂಡಿತು. ಯಾವುದು ಮಾರುಕಟ್ಟೆಯನ್ನು ಪ್ರವೇಶಿಸುವುದಿಲ್ಲವೋ, ಅದನ್ನು 'ದುಡಿಮೆ' ಅಥವಾ ಕೆಲಸವೆಂದು ಪರಿಗಣಿಸುವುದಿಲ್ಲ, ಯಾವುದು ಅದರಲ್ಲಿ ಚಲಾವಣೆಯಾಗುವುದಿಲ್ಲವೋ ಅದಕ್ಕೆ ಆರ್ಥಿಕ ಮೌಲ್ಯ ಇರುವುದಿಲ್ಲ. ಮಹಿಳೆಯರು ಆರ್ಥಿಕವಾಗಿ ಮಹತ್ವದ್ದಲ್ಲದ ಮನೆಯಲ್ಲೇ ಉಳಿದ ಕಾರಣದಿಂದ ತಮ್ಮ ಪ್ರಾಮುಖ್ಯತೆಯನ್ನು, ತಮ್ಮ ಮೌಲ್ಯವನ್ನು ಕಳೆದುಕೊಂಡರು. ಪುರುಷರು ಮಾಡುವ ಕೆಲಸ ಮಹತ್ವದ್ದಾಯಿತು, ಮಹಿಳೆ-ಪುರುಷರ ನಡುವಿನ ವ್ಯತ್ಯಾಸಗಳು ಹೆಚ್ಚುತ್ತಾ ಹೋದವು, ಪುರುಷ ಪ್ರಧಾನತೆ ಹೆಚ್ಚು ಸಶಕ್ತವಾಯಿತು. ಮಹಿಳಾ ಕೇಂದ್ರಿತವಾಗಿದ್ದ ಕುಟುಂಬಗಳು ಸಾರ್ವಜನಿಕ ಕ್ಷೇತ್ರವನ್ನೊಳಗೊಂಡಂತೆ ಪುರುಷ ಕೇಂದ್ರಿತವಾದವು, ಪುರುಷಾಧಿಪತ್ಯಕ್ಕೊಳಗಾದವು.

ಕೌಟುಂಬಿಕ ಮತ್ತು ಸಾರ್ವಜನಿಕ ವಲಯಗಳನ್ನು ಆಳುವ ಪ್ರಧಾನ ಮೌಲ್ಯಗಳನ್ನು ಕೂಡ ತೀಕ್ಷ್ಣವಾಗಿ ವಿಭಾಗಿಸಲಾಗಿದೆ. ವಾಸ್ತವದಲ್ಲಿ, ಅವು ಒಂದಕ್ಕೊಂದು ವಿರುದ್ಧವಾದವುಗಳೆಂದು ಯಾರಾದರೂ ಹೇಳುವಂತಿವೆ. ಖಾಸಗಿ ವಲಯದಲ್ಲಿ ಪ್ರೀತಿ, ಕಾಳಜಿ, ನಿಸ್ವಾರ್ಥತೆ, ತಿಳಿವಳಿಕೆಗಳನ್ನು ಪ್ರಶಂಸಿಸಲಾಗುತ್ತದೆ, ಸಾರ್ವಜನಿಕ ವಲಯಕ್ಕೆ ಅಗತ್ಯವಾದ ಸ್ಪರ್ಧೆ, ಆಕಾಂಕ್ಷೆ, ಹೋರಾಟ, ವ್ಯಕ್ತಿವಾದವನ್ನು ಮೆಚ್ಚಲಾಗುತ್ತದೆ. ಮಾರುಕಟ್ಟೆಯ ನಿರ್ದಯತೆಯಿಂದ ದೂರವಿರುವ ಮನೆಯಲ್ಲಿ ಪುರುಷರಿಗೆ ಮಹಿಳೆಯರು ಆಶ್ರಯ ನೀಡಬೇಕೆಂದು ನಿರೀಕ್ಷಿಸಲಾಗುತ್ತದೆ.

ಅರ್ಥಶಾಸ್ತ್ರ, ವಿಜ್ಞಾನ ಅಥವಾ ತಂತ್ರಜ್ಞಾನಗಳಲ್ಲಿ ಧರ್ಮಾಧರಿತ ನೈತಿಕತೆ ಮತ್ತು ಮೌಲ್ಯಗಳಿಗೆ ಸ್ಥಾನವಿರುವುದಿಲ್ಲ. ಈ ಬಿರುಕನ್ನು ಬಾರ್ಬರ ಎಹ್ರೆನ್‌ರಿಕ್ ಮತ್ತು ಡ್ಯೇಡರ್ ಇಂಗ್ಲಿಷ್ ಚೆನ್ನಾಗಿ ವರ್ಣಿಸಿದ್ದಾರೆ: ವಿಶ್ವದ ಈ ಹೊಸ ವ್ಯವಸ್ಥೆಯನ್ನು ಯಾವುದೋ ಕೆಲವು ಅಸ್ಪಷ್ಟ ವಿಭಜನರೇಖೆಯೊಡನಿರುವ ಕೇವಲ ಒಂದು ವಿಂಗಡಣೆಯೆಂದು ಭಾವಿಸಬೇಕಾಗಿಲ್ಲ. ಈ ಎರಡು ವಲಯಗಳು ಮೂಲ ಮೌಲ್ಯಗಳಿಗೆ ಸಂಬಂಧಿಸಿದಂತೆ ಒಂದಕ್ಕೊಂದು ವಿರುದ್ಧವಾಗಿವೆ. ಅವುಗಳ ನಡುವಿನ ಗೆರೆಯಲ್ಲಿ ನೈತಿಕ ಸಂಘರ್ಷವಿರುತ್ತದೆ. ಆದರೆ ಶತಮಾನಗಳಿಂದ (ಕನಿಷ್ಠ ತನ್ನ ನೀತಿಯಲ್ಲಿ) ಪರಹಿತ ಚಿಂತನೆ ಮತ್ತು ನಿಸ್ವಾರ್ಥ ಗುಣಗಳನ್ನು ಉನ್ನತ ಮಟ್ಟದ್ದೆಂದು ಪ್ರಶಂಸಿಸುತ್ತಾ, ದುರಾಸೆ ಮತ್ತು ಲೋಭಗಳನ್ನು ಖಂಡಿಸುತ್ತಾ ಬಂದ ಧರ್ಮಶಾಸ್ತ್ರ/ನೀತಿಶಾಸ್ತ್ರವನ್ನು ಮಾರುಕಟ್ಟೆ ತನ್ನ ಮೂಲಭೂತವಾದ ಚಲನಶೀಲತೆಯಿಂದಾಗಿ ನಿರ್ಭಯವಾಗಿ ಉಲ್ಲಂಘಿಸುತ್ತದೆ. ಪುರಾತನ ವ್ಯವಸ್ಥೆಯಲ್ಲಿ ವಾಣಿಜ್ಯಕ್ಕೆ ಅಗೌರವದ ಕಳಂಕವಿತ್ತು. ಬಡ್ಡಿಗಾಗಿ ಸಾಲನೀಡುವುದನ್ನು ಖಂಡಿಸಲಾಗುತ್ತಿತ್ತು. ಆದರೆ ಹೊಸ ವ್ಯವಸ್ಥೆಯನ್ನು ತನ್ನ ಹಿಡಿತಕ್ಕೆ ಒಳಪಡಿಸಿಕೊಳ್ಳುತ್ತಾ ಹೋದ ಮಾರುಕಟ್ಟೆ ಎಲ್ಲಾ ನೈತಿಕ ವಿಭಾಗಗಳನ್ನು ತಣ್ಣಗಿನ ತಾಟಸ್ಥ್ಯದಿಂದ ತಳ್ಳಿಹಾಕುತ್ತದೆ. ಲಾಭವನ್ನು ಕೆಲವರು ಬೇರೆಯವರ ಬಡತನದಿಂದ ಪಡೆದುಕೊಳ್ಳಬಹುದು. ಅಲ್ಲದೆ, ಮಾನವ ಪ್ರೀತಿ ಉದಾರತೆ ಅಥವಾ ಪ್ರಾಮಾಣಿಕತೆಗಳಿಗೆ ಅಲ್ಲಿ ಜಾಗವಿರುವುದಿಲ್ಲ...... (ಬಾರ್ಬರ, ಎಹ್ರೆನ್‌ರಿಕ್ ಮತ್ತು ಡಿ. ಇಂಗ್ಲಿಷ್:ಪು.11)

**ನೀವು ಇದುವರೆಗೆ ಹೇಳಿದ್ದನ್ನೇ ಆಧರಿಸಿ ಹೇಳುವುದಾದರೆ, ಖಾಸಗಿ ಮತ್ತು ಸಾರ್ವಜನಿಕಗಳ ನಡುವೆ ಪ್ರತ್ಯೇಕತೆ ಹೆಚ್ಚಿದಷ್ಟೂ ಮಹಿಳೆಯರ ಸ್ಥಾನ ಕೆಳಕ್ಕಿಳಿಯುತ್ತದೆಂದು ಕಾಣುತ್ತದೆ. ಅದು ನಿಜವೆ?**

ಸ್ತ್ರೀವಾದಿ ಇತಿಹಾಸಕಾರರನೇಕರ ಪ್ರಕಾರ (ಹಾಗೂ ಏಂಗೆಲ್ಸ್‌ರವರ ಪ್ರಕಾರ) ಇದು ನಿಜವೆಂದು ಕಾಣುತ್ತದೆ. ಉತ್ಪಾದನೆ ಮನೆಯಲ್ಲಿ ನಡೆಯುವ ಮತ್ತು ಕುಟುಂಬ ಮತ್ತು ಸಾರ್ವಜನಿಕ ವಲಯಗಳೆಂಬ ಪ್ರತ್ಯೇಕತೆಯಿರದ ಸಮಾಜಗಳಲ್ಲಿ ಮಹಿಳೆಯರು ಹೆಚ್ಚು ಸಮಾನ/ಸ್ಥಾನಮಾನವನ್ನು ಹೊಂದಿದ್ದಾರೆ. ಆದರೆ ಈ ಖಾಸಗಿ-ಸಾರ್ವಜನಿಕಗಳ ವಿಭಾಗವು ಮೂಲತಃ ಉತ್ಪಾದನೆಯ ಎರಡು ಬೇರೆ ಬೇರೆ ವಿಧಾನಗಳು ಮತ್ತು ಮಹಿಳೆಯರು ಬೇರೆ ಬೇರೆಯೇ ಆದ ಪಾತ್ರಗಳನ್ನು ವಹಿಸುವ ಆರ್ಥಿಕ ವ್ಯವಸ್ಥೆಗಳನ್ನಾಧರಿಸಿವೆ. ವಾಸ್ತವದಲ್ಲಿ, ದುಡಿಮೆ ಮತ್ತು ಆಸ್ತಿಗಳೊಂದಿಗೆ ಮಹಿಳೆಯರಿಗಿರುವ ಸಂಬಂಧವೇ ಅವರ ಸ್ಥಾನಮಾನವನ್ನು ನಿರ್ಧರಿಸುತ್ತದೆ. ಇತಿಹಾಸದಲ್ಲಿ ಮಹಿಳೆಯರ ಎರಡನೇ ದರ್ಜೆಯ ಸ್ಥಾನಮಾನಕ್ಕೆ ಕಾರಣವನ್ನು ಅರ್ಥವ್ಯವಸ್ಥೆಯಲ್ಲಿ ಗುರುತಿಸಬಹುದು. ಹೆಚ್ಚು ಕಡಿಮೆ ಎಲ್ಲಾ ಸಮಾಜಗಳಲ್ಲಿ ಮಹಿಳೆಯರು ಒಂದು ಗುಂಪಾಗಿ ಉತ್ಪಾದನೆ ಮತ್ತು ಆಸ್ತಿಗಳೊಂದಿಗೆ ಒಂದು ವಿಶೇಷ ರೀತಿಯ ಸಂಬಂಧವನ್ನು ಹೊಂದುತ್ತಾ ಬಂದಿದ್ದಾರೆ, ದುಡಿಮೆಯೊಂದಿಗಿರುವ ಈ ವಿಶೇಷ ಸಂಬಂಧದಿಂದಲೇ ಎರಡನೆಯ ದರ್ಜೆಯ ಸ್ಥಾನಮಾನದಿಂದಾಗುವ ವೈಯಕ್ತಿಕ ಮತ್ತು ಮಾನಸಿಕ ಪರಿಣಾಮಗಳುಂಟಾಗುತ್ತವೆಂದು ಸಮಾಜವಾದಿ ಸ್ತ್ರೀವಾದಿಗಳು ಅಭಿಪ್ರಾಯಪಡುತ್ತಾರೆ.

*(ಮುಂದುವರಿಯುತ್ತದೆ)*

## ದ್ವಂದ್ವ

ಬೆಳಕಿನಂತಿವಳು
ಒಮ್ಮೊಮ್ಮೆ ಕಣರೂಪಿ
ಮತ್ತೊಮ್ಮೆ ಬಳುಕು ಅಲೆ

ಇದ್ದಲ್ಲೇ ನೇರಪಥ
ಮಧ್ಯವರ್ತಿ
ಬದಲಾಯಿಸಿದಾಗ
ಮಾತ್ರ
ವಕ್ರ ನಡೆ
ರಾಚಿದ ಮೇಲ್ಮೈಯ
ಬಣ್ಣವನ್ನೇ
ಬಯಲುಮಾಡಲೂ
ಇಲ್ಲ ಬಿಡೆ

ತಲೆಮಾರಿನಿಂದ ಬಂದ
ಮಡಿ ಮೈಲಿಗೆ
ವ್ರತ ನೇಮ
ಸ್ವಂತಿಕೆ ಹೋಮ

ಹಿರಿಯರಿಗೆ
ತಗ್ಗಿ ಬಗ್ಗಿ
ನವಪೀಳಿಗೆಯ
ನಾಸ್ತಿಕತೆಗೂ ಒಗ್ಗಿ
ಸಾಗುವ
ಪೀಳಿಗೆಯಂತರದ ಸೇತು
ಏಕ ದ್ವಂದ್ವ ಸ್ವಭಾವ
ಎನುವ ಮಾತು?

**ಪ್ರಭಾಮಣಿ ನಾಗರಾಜ**

*Edited, Printed, Published and owned by Rajeshwari H.S., No. 114/5, 9th Cross*
*2nd Main, Chamarajpet, Bangalore - 560 018.*
*Printed at ILA Mudrana, No. 36, 40 Ft. Road, Raghavanagara, New Timberyard Layout, Bangalore - 560 026.*
*Published at No. 114/5, 9th Cross, 2nd Main, Chamarajpet, Bangalore - 560 018. Editor : Rajeshwari H.S.*

# ಮಹಿಳಾ ಸಾಹಿತ್ಯದಲ್ಲಿ 'ಮಾದರಿ'ಗಳು

*ಸಂವಾದ-1*

## 'ಮಾದರಿ ಹೆಣ್ಣು' ರೂಪುಗೊಳ್ಳುತ್ತಿದ್ದಾಳೆ

'ನಮ್ಮ ಮಾನಸ'ದ ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟವಾದ 'ಹೊಸಕಾಲದ ಬರಹಗಾರ್ತಿಯರಿಂದ 'ಮಾದರಿ'ಗಳು ಇನ್ನೂ ಬಂದಿಲ್ಲ' ಎಂಬ ಕೆ.ಸತ್ಯನಾರಾಯಣ ಅವರ ಲೇಖನ, ಮತ್ತು ಡಾ.ಪಿ.ಚಂದ್ರಿಕಾ ಅವರ 'ಈಗ ಬೇಕಿರುವುದು 'ಮಾದರಿ'ಯಾಗಬಲ್ಲ ಹೆಣ್ಣಿನ ಚಿತ್ರಣವಲ್ಲ' ಎಂಬ ಎರಡೂ ಲೇಖನಗಳನ್ನು ಓದಿದೆ. ಈ ಲೇಖನಗಳ ಬಗ್ಗೆ ನನ್ನ ಒಂದೆರಡು ಅಭಿಪ್ರಾಯಗಳು ಹೀಗಿವೆ:

ಹೆಂಗಸರು ಬರೆದಿರುವ ಈ ವರೆಗಿನ ಸಾಹಿತ್ಯದಲ್ಲಿ, ಇಡೀ ಸ್ತ್ರೀ ಸಮುದಾಯಕ್ಕೆ 'ಮಾದರಿ' ಎನ್ನಿಸಿಕೊಳ್ಳುವಂತಹ ಹೆಣ್ಣಿನ ಚಿತ್ರಣ ಬಂದಿರಲಿಕ್ಕಿಲ್ಲ. ಹಾಗೆ ನೋಡಿದರೆ, ಲೇಖಕರ ಸಾಹಿತ್ಯದಲ್ಲೂ ಇಡೀ ಪುರುಷ ಸಮುದಾಯಕ್ಕೆ 'ಮಾದರಿ' ಎನ್ನುವಂತಹ ಗಂಡಸಿನ ಚಿತ್ರಣವಿದೆಯೇ?

ತ್ರಿವೇಣಿ, ಅನುಪಮಾ ನಿರಂಜನ, ಸಾವಿತ್ರಮ್ಮ-ಇಂತಹ ಲೇಖಕಿಯರಿಂದ ಹೊರಹೊಮ್ಮಿದ ಸ್ತ್ರೀ ಪಾತ್ರಗಳು ಹೊಸಕಾಲದ ಸಂವೇದನೆಯಿಂದಲೇ ಕೂಡಿವೆ. ಅನಂತರ, ಅದರಲ್ಲೂ ಎಪ್ಪತ್ತರ ದಶಕದ ನಂತರ ಬರೆಯುತ್ತಿರುವ ಹಲವು ಕಾದಂಬರಿಕಾರ್ತಿಯರು, ಕವಯತ್ರಿಯರು ಒಟ್ಟಾರೆಯಾಗಿ ಸ್ತ್ರೀಯರ ಬದಲಾಗುತ್ತಿರುವ ಸ್ವರೂಪಗಳನ್ನು ಕುರಿತೇ ಬರೆದಿದ್ದಾರೆ. ಹಲವು ಶತಮಾನಗಳಿಂದ ದನಿಯಿರದಿದ್ದ ಸ್ತ್ರೀಯರು ಶತಮಾನಗಳ ತಮ್ಮ ಕತ್ತಲಿನ ಜೀವನವನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ. 21ನೆಯ ಶತಮಾನದ ಹೆಣ್ಣಿನ ಸ್ವರೂಪ ಏನು? ಎಂಬುದು ಸಾಹಿತ್ಯದಲ್ಲಿ ರೂಪಪಡೆಯಬೇಕಾದರೆ ಇನ್ನೂ 10-15 ವರ್ಷಗಳಾದರೂ ಬೇಕು.

ಕೆ.ಷರೀಫಾ, ಪ್ರತಿಭಾ ನಂದಕುಮಾರ್, ಸವಿತಾ ನಾಗಭೂಷಣ, ಹೇಮಾ ಪಟ್ಟಣಶೆಟ್ಟಿ, ಮಾಲತಿ ಪಟ್ಟಣಶೆಟ್ಟಿ, ಹಾ.ಮ.ಕನಕ, ಮಮತಾಸಾಗರ ಇನ್ನೂ ಮುಂತಾದವರ ಕವನಗಳು-ಈ ಕಾಲದಲ್ಲಿ ಹೆಣ್ಣು ಅನುಭವಿಸುತ್ತಿರುವ ತವಕ-ತಲ್ಲಣಗಳ ಅಭಿವ್ಯಕ್ತಿಯಾಗಿವೆ. ಬಿ.ಟಿ.ಜಾಹ್ನವಿ, ಬಿ.ಟಿ.ಲಲಿತಾ ನಾಯಕ್, ನಾಗವೇಣಿ, ಬಾನು ಮುಷ್ತಾಕ್, ಸಾರಾ ಅಬೂಬಕರ್, ಗೀತಾ ನಾಗಭೂಷಣರಂತಹ ಕಾದಂಬರಿಕಾರ್ತಿಯರು ಮತ್ತು ಕತೆಗಾರ್ತಿಯರು ಕನ್ನಡ ಸಾಹಿತ್ಯಲೋಕದಲ್ಲಿ ಹೆಣ್ಣಿನ ನೋವುಗಳನ್ನು ಆಧುನಿಕ ದೃಷ್ಟಿಕೋನದಲ್ಲಿ ನೋಡಿದ್ದಾರೆ.

ಕನ್ನಡ ಸಾಹಿತ್ಯಲೋಕದಲ್ಲಿ ಲೇಖಕಿಯರಿಂದ 'ಮಾದರಿ' ಸೃಷ್ಟಿಯಾಗಿರಲಿಕ್ಕಿಲ್ಲ. ಆದರೆ, ಕನ್ನಡ ಸಮಾಜದಲ್ಲಿ ಹೊಸ ಹೆಣ್ಣಿನ ಉದಯವಾಗುತ್ತಿದೆ. ನನಗೆ ಗೊತ್ತಿರುವ ಹಲವು ಲೇಖಕಿಯರು, ಹಲವು ವಿಮರ್ಶಕಿಯರು, ಹಲವು ಕಲಾವಿದೆಯರು, ಹಲವು ಚಳವಳಿಗಾರ್ತಿಯರು, ಹಲವು ಪತ್ರಕರ್ತೆಯರು ಬಿರುಗಾಳಿಯಂತಹ ಬದುಕನ್ನು ಬದುಕಿದ್ದಾರೆ. ಈ ಪ್ರತಿಯೊಬ್ಬರೂ ತಮ್ಮ ತಮ್ಮ ಆತ್ಮಕಥೆಯನ್ನು ಬರೆದರೆ, ಹಲವು 'ಮಾದರಿ' ಹೆಣ್ಣುಗಳ ಸೃಷ್ಟಿಯಾಗುತ್ತದೆ.

ಚಂಪಾವತಿಯವರ 'ಶಿವಗಂಗಾ', ತಾರಾಭಟ್ ಅವರ 'ಅನನ್ಯ', ಕಮಲಾ ನರಸಿಂಹ ಅವರ 'ಭೂಗರ್ಭ' ಮುಂತಾದವುಗಳಲ್ಲಿ ಹೆಣ್ಣು ಆಧುನಿಕ ಕಾಲದಲ್ಲಿ ಹೊಸಜಗತ್ತೊಂದನ್ನು ಪ್ರವೇಶಿಸಿರುವ ದಾಖಲೆಗಳಿವೆ. ಆದರೆ, 21ನೇ ಶತಮಾನದ ಸವಾಲುಗಳು ಹೆಣ್ಣಿಗೆ ಇನ್ನೂ ಸಂಕೀರ್ಣವಾಗಿವೆ. ಕೊಳ್ಳುಬಾಕತನ, ಜಾಗತೀಕರಣ ಮುಂತಾದವು ಸ್ತ್ರೀತ್ವದ ನೆಲೆಗಳನ್ನು ಮಸುಕಾಗಿಸುತ್ತಿವೆ. ದಲಿತ, ಬಂಡಾಯ, ಸ್ತ್ರೀವಾದಿ ಚಳವಳಿಗಳಲ್ಲಿ ಒಮ್ಮೆ ಸಿಡಿದೆದ್ದಿದ್ದ ಸ್ತ್ರೀ-ಸಮುದಾಯ, ಈಗ ಇನ್ನೊಮ್ಮೆ ಹೊಸ ತಿಳಿವಿನೊಂದಿಗೆ ಸಿಡಿದೇಳಬೇಕಾಗಿದೆ. ಆದ್ದರಿಂದ, ನಮ್ಮ ಸಮಾಜದಲ್ಲಿ ಆಧುನಿಕ ಹೆಣ್ಣು ಇನ್ನೂ ರೂಪುಗೊಳ್ಳುತ್ತಿದ್ದಾಳೆ; ಪ್ರಕ್ರಿಯೆ ಸಾಗಿದೆ; ಅದು ಅತ್ಯಂತ ಸಂಕೀರ್ಣ-ಎಂಬುದೇ ನನ್ನ ಅಭಿಪ್ರಾಯ.

***-ಎಸ್.ಮಾಲತಿ, ಸಾಗರ***

*ಸಂವಾದ-2*

## 'ಮಾದರಿ'ಯಿಂದ ಸಾಧಿಸುವುದು ಏನನ್ನು?

'ಹೊಸಕಾಲದ ಬರಹಗಾರ್ತಿಯರಿಂದ ಇನ್ನೂ 'ಮಾದರಿ'ಗಳು ಬಂದಿಲ್ಲ' ಎನ್ನುವ ಕೆ. ಸತ್ಯನಾರಾಯಣ ಅವರ ಮಾತು ಒಂದು ಚಿಂತನೆಯಾಗದೆ ಆಕ್ಷೇಪದ 'ದನಿ'ಯಲ್ಲಿರುವುದೇ ಪ್ರತಿಕ್ರಿಯೆಗೆ ಕಾರಣ. ಅವರು ಎತ್ತಿದ ಪ್ರಶ್ನೆಯಲ್ಲಿರುವ 'ಹೊಸಕಾಲದ ಬರಹಗಾರ್ತಿಯರು' ಎನ್ನುವುದು ಹಳೆಕಾಲದ ಬರಹಗಾರ್ತಿಯರು ಪುರುಷ ನಿರ್ದೇಶಿತ ಮಾದರಿಯನ್ನು ಒಪ್ಪಿದ್ದರು ಎಂದು ಸೂಚಿಸುತ್ತದೆಯಲ್ಲವೇ? ಪುರುಷನ ಅಭಿವ್ಯಕ್ತಿಯ ಕುರಿತಂತೆ ಮಹಿಳೆ ಇಂಥ ಪ್ರಶ್ನೆಯನ್ನು ಎತ್ತುವ ಸಾಮಾಜಿಕ ಸನ್ನಿವೇಶ ಇದೆಯೇ? ಪ್ರಧಾನ ನೆಲೆ ತಮ್ಮದು ಎನ್ನುವುದನ್ನು ಸಾಬೀತು ಪಡಿಸಲು ಈ ರೀತಿಯಲ್ಲಿ ಪ್ರಶ್ನಿಸುವುದೂ ಒಂದು ವಿನ್ಯಾಸವೇ ಎನ್ನುವ ಭಾವನೆ ಮೂಡಿದರೆ ತಪ್ಪೇ? ಇಂಥ ಅಭಿಪ್ರಾಯಗಳಿಗೆ ಪ್ರತಿಕ್ರಿಯಿಸಲು ಮಹಿಳೆಯರು ತಮ್ಮ ಶಕ್ತಿಯನ್ನು, ಸಮಯವನ್ನು ವ್ಯಯಿಸಬೇಕೇ?

ಪುರುಷನ ಅಭಿವ್ಯಕ್ತಿಗೆ ಅವಕಾಶವಿರುವುದು ಮುಕ್ತವಲಯದಲ್ಲಿ. ಪುರುಷ ನಿರ್ಮಿತ ಚೌಕಟ್ಟನ್ನು, ಮಾದರಿಗಳನ್ನು ಒಡೆದು ಹೊಸ ಮಾದರಿಯನ್ನು ನಿರ್ಮಿಸಬೇಕಾದ ಸವಾಲು ಮಹಿಳೆಯ ಮುಂದಿದೆ. ಹೊಸಕ್ಯಾನವಾಸಿನ ಮೇಲೆ ಚಿತ್ರ ಮೂಡಿಸುವುದು ಸುಲಭ. ಈಗಾಗಲೇ ಕ್ಯಾನವಾಸಿನ ಮೇಲೆ ಮೂಡಿರುವ ಚಿತ್ರವನ್ನು ಅದರ ಲವಲೇಶವೂ ಉಳಿಯದಂತೆ ಅಳಿಸಿ ಹೊಸ ಚಿತ್ರ ಮೂಡಿಸುವುದು ಸುಲಭವಲ್ಲ. ಆಕೆಯ ಹೆಚ್ಚಿನ ಶ್ರಮ ಹಳೆ ಮಾದರಿಯ ಒಡೆಯುವಿಕೆಗೆ ವಿನಿಯೋಗ ವಾಗುತ್ತಿದೆ. ಸಾಹಿತ್ಯದ ಮಾಧ್ಯಮವೇ ಭಾಷೆ. ಮಹಿಳೆ ಪುರುಷಪ್ರಧಾನವಾದ ಭಾಷೆಯಲ್ಲಿಯೇ ಅಭಿವ್ಯಕ್ತಿಸಬೇಕಿದೆ. ಇದು ಕೂಡ ಆಕೆಗೆ ಸವಾಲೇ.

ಸ್ತ್ರೀವಾದ ಸಿದ್ಧಮಾದರಿಯನ್ನು ನಿರಾಕರಿಸುತ್ತದೆ. ಒಂದು ಮಾದರಿ ರೂಪಿತವಾಗಿ ಅದನ್ನು ಅನುಸರಿಸ ಹೊರಟಾಗ ಸಮಾಜದ ಕ್ರಿಯಾಶೀಲತೆ ಮುರಟಿಹೋಗುವ ಅಪಾಯವಿದೆ. ಇತರ ಸಾಧ್ಯತೆಯ ಶೋಧಕ್ಕೆ ಅವಕಾಶವೇ ಇಲ್ಲದಂತಾಗುತ್ತದೆ. ವಿಭಿನ್ನ ಬದುಕಿನ ನೆಲೆಯಲ್ಲಿ, ಆಯಾ ಕಾಲಘಟ್ಟದಲ್ಲಿ ಮಾದರಿಗಳು ತಾನಾಗಿ ರೂಪುಗೊಳ್ಳಬೇಕೇ ವಿನಾ ಮಾದರಿಯನ್ನು ನಿರ್ಮಿಸಿ ಚಾಲ್ತಿಗೆ ತಂದರೆ ಅದು ನಿಂತ ನೀರಾಗುವ ಸಂಭವ ಹೆಚ್ಚು. ಹಾಗೆಂದು ಮಹಿಳೆಯಿಂದ ಮಾದರಿ ಸೃಷ್ಟಿಯಾಗಿಲ್ಲ ಎಂದಲ್ಲ. ಬದುಕಿನ ಇಕ್ಕಟ್ಟಿನ ಸಂದರ್ಭವನ್ನು ವಿಭಿನ್ನ ಒತ್ತಡಗಳನ್ನು ಮಹಿಳೆ ಎದುರಿಸಿದ ರೀತಿಯುನ್ನು ಸಾಹಿತ್ಯ ಕೃತಿಗಳು ಅನಾವರಣಗೊಳಿಸಿವೆ. ಇಂಥಲ್ಲಿ ಸಹಜ ಮಾದರಿಯೊಂದು ತಾನಾಗಿಯೇ ರೂಪುಗೊಳ್ಳುತ್ತದೆ. ಆದರೆ ಅದರ ಗ್ರಹಿಕೆಗೆ ಪೂರ್ವಗ್ರಹ ಹಿಡಿದಿದೆ ಅಷ್ಟೆ. (ಮೇಧಾ ಪಾಟ್ಕರ್ ಆಗಲಿ ಮಹಾಶ್ವೇತಾದೇವಿಯವರಾಗಲಿ ಮಾದರಿಯಾಗಲು ಹೋರಾಟಕ್ಕಿಳಿದವರಲ್ಲ. ಅವರ ಕ್ರಿಯಾಶೀಲತೆ ಮಾದರಿಯಾಗಿದೆ ಅಷ್ಟೆ.)

'ಹೊಸಕಾಲದ ಹೆಂಗಸಿನಿಂದ ನಾವು ನಿರೀಕ್ಷಿಸುವುದಾದರೂ ಏನನ್ನು?' ಎನ್ನುವ ಅವರ ಇನ್ನೊಂದು ಪ್ರಶ್ನೆ ಅಸಂಗತವಾದ್ದು. ಶತಮಾನಗಳಿಂದ ಪಿತೃಪ್ರಧಾನ ಸಮಾಜದ ನಿರೀಕ್ಷೆಗಳನ್ನು ಪೂರೈಸಲು ಶ್ರಮಿಸುತ್ತ ಬಂದಿರುವ ಮಹಿಳೆಯಿಂದ ಮತ್ತೆ ಏನನ್ನೋ ನಿರೀಕ್ಷಿಸುವ ಹಂಬಲ ಯಾಕೆ? 'ಪಾಲನಾ ವೃತ್ತಿಯನ್ನು ಅವಳ ಸ್ವಭಾವ ನಿರಾಕರಿಸುವುದಿಲ್ಲ' ಎನ್ನುವ ಮಾತಿನ ಅರ್ಥವೇನು? ಇದನ್ನು ಒಪ್ಪಿಕೊಂಡು ಆಕೆ ಹೊಸ ಸವಾಲುಗಳನ್ನು ಸ್ವೀಕರಿಸಬೇಕು ಎಂದೇ? ಹಳೆಯ ಮಾದರಿಗೆ ಒಂದಿಷ್ಟು ಬಣ್ಣ ಹಚ್ಚುವುದೇ? ಒಂದು ಮಾದರಿಯನ್ನು ಸೃಷ್ಟಿಸಿ ಅದರಂತೆ ನಡೆಯಲು ಆಕೆ ಪ್ರಯತ್ನಿಸುತ್ತಿರಬೇಕು ಎನ್ನುವ ಧೋರಣೆಯೇ? ಅವಳನ್ನು ಇಕ್ಕಟ್ಟಿಗೆ, ಒತ್ತಡಕ್ಕೆ ಸಿಲುಕಿಸುವ ತಂತ್ರಗಾರಿಕೆ. ಯಾರೋ ಹೊಲಿದ ಅಂಗಿಯಲ್ಲಿ ತನ್ನನ್ನು ತೂರಿಸಿ ಕೊಳ್ಳುವುದಕ್ಕೆ ಹೊರತಾಗಿ ತನಗೆ ಹಿತವೆನಿಸುವ ವಿನ್ಯಾಸದಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು, ಅಸ್ಮಿತೆಯನ್ನು ಪ್ರಚುರಪಡಿಸಲು ಅವಕಾಶ ದೊರಕಿಸಿಕೊಳ್ಳುವ ಹೋರಾಟದಲ್ಲಿ ಅವಳೀಗ ತೊಡಗಿಕೊಳ್ಳಬೇಕಿದೆಯೇ ವಿನಾ ಹೊಸಮಾದರಿಯ ರೂಪಣೆಯಲ್ಲಲ್ಲ.

***-ಚಂದ್ರಮತಿ ಸೋಂದಾ,*** ಮೈಸೂರು

# ಕೇಂದ್ರ ಸಾಹಿತ್ಯ ಅಕಾಡೆಮಿ

ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜ್ ಆವರಣ
ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560 001

## ಹೊಸ ಕನ್ನಡ ಪ್ರಕಟಣೆಗಳು

**ಕಾದಂಬರಿಗಳು :**

- ಆ ದೀರ್ಘ ಮೌನ (ಇಂಗ್ಲಿಷ್ ಮೂಲ : ಶಶಿ ದೇಶಪಾಂಡೆ, ಅನು : ವಿಜಯ ಕಣೇಕಲ್) 120.00
- ಆರು ಅಡಿ ಭೂಮಿ (ಉರ್ದು ಮೂಲ : ಅಬ್ದುಸ್ಸಮದ್ ; ಅನು : ಪಂಚಾಕ್ಷರಿ ಹಿರೇಮಠ) 150.00
- ಅರ್ಧನಾರೀಶ್ವರ (ಹಿಂದಿ ಮೂಲ : ವಿಷ್ಣು ಪ್ರಭಾಕರ್ ; ಅನು : ಎಸ್.ಎಮ್. ರಾಮಚಂದ್ರಸ್ವಾಮಿ) 250.00
- ನೀಲಿಚಂದಿರ (ಹಿಂದಿ ಮೂಲ : ಶಿವಪ್ರಸಾದ ಸಿಂಹ ; ಅನು : ಪಿ. ಶಶಿಕಲಾ) 350.00
- ಚಿಟ್ಟಾಲಹು (ಪಂಜಾಬೀ ಮಲ : ನಾನಕ್ ಸಿಂಗ್ ; ಅನು : ಲವ್‌ಲೀನ್ ಜಾಲಿ, ವಿಜಯಲಕ್ಷ್ಮಿ ಅರಸ್) 85.00
- ಗೋಡೆಯಲ್ಲಿ ಒಂದು ಕಿಟಕಿ ಇರುತ್ತಿತ್ತು (ಹಿಂದಿ ಮೂಲ: ವಿನೋದಕುಮಾರ್ ಶುಕ್ಲ; ಅನು: ತೇಜಸ್ವಿ ಕಟ್ಟಿಮನಿ) 100.00

**ಕಥಾ ಸಂಕಲನ**

- ಸ್ವರ್ಣ ಕಮಲಗಳು (ತೆಲುಗು ಮೂಲ : ಇಲ್ಲಿಂದಲ ಸರಸ್ವತೀದೇವಿ ; ಅನು–ಪಿ. ವೇಣುಗೋಪಾಲ್) 300.00
- ಸಿ.ವಿ. ಶ್ರೀರಾಮನ್ ಕತೆಗಳು (ಮಲಯಾಳಂ; ಅನು–ಅಶೋಕ್ ಕುಮಾರ್) 300.00
- ದೇವರ ಮನೆ ಇತರ ಕತೆಗಳು (ಒರಿಯಾ; ಅನು ಸೀತಾರಾಮಯ್ಯ ಸೋಮನಾಥ್) 125.00
- ತಂದೆಯ ಸ್ನೇಹಿತ (ತಮಿಳು; ಅಶೋಕ ಮಿತ್ರನ್; ಅನು: ಶೇಷನಾರಾಯಣ) 100.00
- ಸಮಕಾಲೀನ ಭಾರತೀಯ ಇಂಗ್ಲಿಷ್ ಸಣ್ಣ ಕಥೆಗಳು (ಸಂ: ಶಿವ್.ಕೆ. ಕುಮಾರ್; ಅನು ಮಹಾಬಲೇಶ್ವರ ಕಾಟ್ರಹಳ್ಳಿ 150.00
- ಉಲ್ಲಂಘನ (ಒರಿಯಾ; ಪ್ರತಿಭಾ ರಾಯ್; ಅನು ಸ್ನೇಹಲತಾ ರೋಹಿಟೇಕರ್) 160.00
- ಶಾಂಬ (ಬಂಗಾಳಿ : ಸಮರೇಶ ಬಸು; ಅನು: ಜಿ. ಕುಮರಪ್ಪ) 10[illegible].00
- ಹಗ್ಗ (ತಕಳಿ ಶಿವಶಂಕರಪಿಳ್ಳೈರವರ ಮಲಯಾಳ ಕೃತಿ – ಮೂರು ಭಾಗಗಳು – ಅನುವಾದ ಕೆ.ಕೆ. ನಾಯರ್ ಮತ್ತು ಅಶೋಕ್‌ಕುಮಾರ್) ಭಾಗ ಒಂದು – 325.00; ಭಾಗ ಎರಡು – 250; ಭಾಗ ಮೂರು – 250

**ಕಾವ್ಯ**

- ಕನ್ನಡ ಸಾನೆಟ್ ಸಂಗ್ರಹ (ಸಂ. ಹೆಚ್.ಎಸ್. ವೆಂಕಟೇಶಮೂರ್ತಿ) 85.00
- ಶಬ್ದ ಗರ್ಭಿತ ಆಕಾಶ (ಒರಿಯಾ ಮೂಲ : ಸೀತಾಕಾಂತ್ ಮಹಾಪಾತ್ರ; ಅನು: ಕಮಲಾ [illegible]ಗೆ) 90.00
- ಸಂಬಂಧ (ಇಂಗ್ಲಿಷ್ : ಜಯಂತ ಮಹಾಪಾತ್ರ; ಅನು: ಲಕ್ಷ್ಮೀನಾರಾಯಣಭಟ್) 50.00
- ತಮಿಳು ಕವಿತೆಗಳು (ಸಂಪಾದಕರು; ಚಂದ್ರಶೇಖರ ಕಂಬಾರ ಮತ್ತು ಓ.ಎಲ್. ನಾಗಭೂಷಣ ಸ್ವಾಮಿ) 40.00
- ಆಧುನಿಕ ಮಹಾಭಾರತ (ಗುಂಟೂರು ಶೇಷೇಂದ್ರಶರ್ಮರ ತೆಲುಗು ಆಧುನಿಕ ಮಹಾಕಾವ್ಯ; ಅನು: ಅರ್ಕಸಾಲಿ ವೃಷಭೇಂದ್ರಚಾರ್) 200.00
- ಮಲಯಾಳದ ಜಾನಪದ ಹಾಡುಗಳು (ಸಂ. ಅಯ್ಯಪ್ಪ ಪಣಿಕ್ಕರ್; ಅನು: ಸಿ. ರಾಘವನ್) 125.00

**ಇತರ**

- ಸೌಗಂಧಿಕಾ ಪರಿಣಯ (ಮುಮ್ಮಡಿ ಕೃಷ್ಣರಾಜ ಒಡೆಯರ್; ಸಂ.ಹೆಚ್.ಎಸ್. ಶ್ರೀಮತಿ) 600.00
- ತತ್ವಮಸಿ (ಮಲಯಾಳಂ ಮೂಲ: ಸುಕುಮಾರ್ ಅಳಿಕ್ಕೋಡ್, ಅನು; ವಿ. ಗೋಪಾಲಕೃಷ್ಣ) 200.00
- ಭಾರತೀಯ ಇಂಗ್ಲಿಷ್ ಸಾಹಿತ್ಯ ಚರಿತ್ರೆ (ಎಂ.ಕೆ. ನಾಯಕ್; ಅನು: ಬಸವರಾಜ ನಾಯ್ಕರ್) 200.00
- ತೆಲುಗು–ಕನ್ನಡ ನಿಘಂಟು (ಸಂ.ಪಾಣ್ಯಂ ರಾಮಶೇಷ ಶಾಸ್ತ್ರಿ) 150.00
- ಟೀಕಾ ಸ್ವಯಂವರ : ಮರಾಠಿ ವಿಮರ್ಶಾ ಕೃತಿ (ಬಾಲಚಂದ್ರ ನೇಮಾಡೆ; ಅನು: ಚಂದ್ರಕಾಂತ ಪೋಕಳೆ) 180.00
- ಪಂಡಿತ ತಾರಾನಾಥರು ಬದುಕು ಮತ್ತು ಬರಹ: ಎಂ. ಧ್ರುವನಾರಾಯಣ 75.00

**ಭಾರತೀಯ ಸಾಹಿತ್ಯ ನಿರ್ಮಾಪಕರು (ಒಂದು ಪ್ರತಿ ರೂ.25.00)**

- ವ.ರಾ. (ವ. ರಾಮಸ್ವಾಮಿ) * ನಿರಂಜನ * ಸರ್ವಜ್ಞ * ಮಹಾಕವಿ ಶ್ರೀ ಶ್ರೀ * ರಾಚಕೊಂಡ ವಿಶ್ವನಾಥಶಾಸ್ತ್ರಿ
- ಜಿ.ಪಿ. ರಾಜರತ್ನಂ * ತೀ.ನಂ. ಶ್ರೀಕಂಠಯ್ಯ * ಮಹಾಮಹೋಪಾಧ್ಯಾಯ ಗೋಪೀನಾಥ ಕವಿರಾಜ * ಅ.ನ. ಕೃಷ್ಣರಾವ್ (40.00) * ಬಸವರಾಜ ಕಟ್ಟೀಮನಿ (40.00) * ಅಲೂರು ವೆಂಕಟರಾಯರು (40.00)